

# ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24

ಕೈಮಗ್ಗ ಮತ್ತು ಜವಳಿ ಇಲಾಖೆ

www.karnatakadht.org

# ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ

# 2019–24

## ಕರ್ನಾಟಕ ಸರ್ಕಾರ

## PROCEEDINGS OF THE GOVERNMENT OF KARNATAKA

**Sub:** New Textile and Garment Policy 2019-24 - reg.

**Read:** 1) Government Order No. CI 44 JaKaiYo 2012. dated: 31.10.2013.
2) Government Order No. CI 112 JaKaiEe 2015. dated: 30.09.2015.
3) Government Order No. CI 84 JaKaiEe 2018. dated: 08.04.2019(P).

* * * * *

**PREAMBLE:**

The Government of Karnataka has announced the NUTHANA JAVALI NEETHI 2013-18. vide G.O. No. CI 44 JaKaiYo 2012, dated: 31.10.2013 read at (1) above in order to attract the investment in Textile sector and make use of the resources available in the State and in turn enhance the employment opportunities to the rural people with emphasis on balanced regional development. The Government has approved the additions/ modifications to the NUTHANA JAVALI NEETHI 2013-18 vide G.O. read at (2) above. to attract more investments in Textile Sector.

This Policy came into effect from 01.11.2013 and had validity up to 31.10.2018. Further the validity of NUTHANA JAVALI NEETHI 2013-18 was extended till the introduction of New Textile and Garment Policy 2019-24 vide G.O. No. CI 84 JaKaiEe 2018. dated: 08.04.2019 read at (3) above. During the Policy period. the Karnataka received an investment of Rs.9595.74 crores and 1,92,102 employment was generated.

Karnataka has always had an enduring tradition of tapping the best across India and the world to trace a steady growth curve across diverse sectors of the economy. The transformative journey of Textiles in Karnataka has already begun in the pursuit to foster best in- class textile manufacturing. advanced production technologies resulting in smart textile value chain. manufacturing processes and end-to-end ecosystems.

1

Karnataka the Garment Capital of India, with 20 per cent of the national garment production of the country, it has contributed almost two-thirds to the State's industry output. The State has an important share in the export of raw material and also a good share in the country's exports in merchandise exports, readymade garments and handlooms. Also, the State has a high impact on the production of raw materials, and is one of the leading producers of silk in the country. It contributes 49 per cent to mulberry silk, 12 per cent to wool and 6 per cent of cotton production in the country.

In the current scenario, with the global textile and apparel industry seeing a structural shift in terms of manufacturing locations the need to position Karnataka at par at the sub- national and international level is imperative. Therefore, against this changing landscape, the need for formulating a new policy with lucrative concessions and incentives, up-dations in the institutional framework, structuring mechanism of the projects and other relevant up-dations have been felt essential.

In the above background, the New Textile and Garment Policy 2019-24 has been formulated, to achieve the targets as mentioned in the Policy and to attract investment, several meetings have been held with Textile Industrial Associations and potential investors, related Government Departments and all other stakeholders. The views and suggestions offered by all the stakeholders have been incorporated suitably in the policy with the objective of making Karnataka a preferred destination for Textile Industry.

In the light of the above, a decision has been taken by the Government to formulate and adopt a New Textile and Garment Policy 2019-24.

Hence, the following Order:

**GOVERNMENT ORDER NO. CI 115 JAKAIEE 2017.**
**BENGALURU, DATED: 04.11.2019**

In the circumstances explained in the preamble, Government is pleased to announce the **New Textile and Garment Policy 2019-24** as detailed in **Annexure**, enclosed to this order, to attract more investment in Textile & Garment sectors and to create more employment opportunities in the state.

The salient features of New Textile and Garment Policy 2019-24 are as follows.

1. **Vision:**

   The State's New Textile and Garment Policy aims to position Karnataka as a leading destination in the Textile and Apparel sector in the country and to make textile value chain into gold mine value chain. The Policy will provide a stimulus to the Textile industry in the State and aims to generate 5 lakh new employments in the next 5 years and attract investments worth INR 10.000 crore.

2. **Mission:**

   To retain Karnataka's position as the Garment Capital of India and to achieve higher and sustainable growth in the entire textile value chain through capital infusion. technology transfer. world class infrastructure and skill up-gradation.

3. **Strategies**

   a. To accelerate growth and increase manufacturing cost competitiveness in the entire textile value chain from fiber to fashion products.
   b. To give special focus on spinning. weaving (rapier loom. air jet looms and electronic jacquard). integrated units. processing and technical textiles as thrust sectors of the policy to create an internationally competitive textile industry in the state.
   c. To make Karnataka a skill rich state in each segment of the textile value chain and development high tech advanced skilling centers for skilling. re-skilling and up- gradation of skills as per the needs of the industry.
   d. To realize "Zero Effects: Zero Defect" at each level of the textile value chain by attracting large scale investments for manufacturing world class facilities and promoting ZLD Technology.

e. To increase the share of handloom exports and support designing, product diversification, branding, marketing and distribution of handloom products to distinct international markets.

f. To position Karnataka as a significant manufacturing hub and a net exporter of Technical Textiles.

g. To become the retail destination and give a boost to the growth of buying houses and international apparel retailers in Karnataka.

The New Textile and Garment Policy 2019-24 and package of incentives and concessions shall come into effect from 04.11.2019 and will be valid for a period of 5 years or till a new policy is announced.

This order is issued with the concurrence of the Finance Department vide endorsement No. FD 394 Exp-1/ 2018, dated: 17.07.2019 and Revenue Department endorsement No. RD 66 / MU NO MU/ 2018, dated: 25.09.2019 and Cabinet Note Subject No. C-596/2019 held on 31.10.2019.

By Order and in the name of the
Governor of Karnataka,

**(M. MAHESHWAR RAO)**
Secretary to Government,
Commerce & Industries Department.

**To,**

1) The Compiler, Karnataka Gazette, Bangalore for publish in the special Gazette and supply 1000 copies to this office.
2) The Principal Accountant General (G&SSA), Karnataka, New Building, 'Audit Bhawan', Post Box No. 5398, Bangalore-01.
3) The Principal Accountant General (E&RSA), Karnataka, New Building, 'Audit Bhawan', Post Box No. 5398, Bangalore-01.
4) The Principal Accountant General (A&E), Karnataka, Park House Road, Post Box No. 5329, Bangalore-01.
5) Additional Chief Secretary to Government, Finance Department, Vidhana Soudha, Bangalore-01.
6) Principal Secretary to Government, Planning Department, MS Building, Bangalore-01.

7) Secretary to Government (Stamps & Disaster Management), Revenue Department, M S Building, Bangalore 01.

8) The Commissioners for the Handlooms and Textile, No.86 Shubhodaya Complex, Railway parallel Road, Kumara Park West, Bangalore 27 – to circulate the Policy to all District Officers.

9) The Inspector General of Registration and Commissioner of Stamps and Chief Controlling Revenue Authority. Kandaaya Bhavan, 8th floor, K G Road, Bangalore-560 009.

10) The Deputy Commissioners of all Districts of Karnataka.

11) Managing Director, Karnataka Handloom Development Corporation, Priyadarshani Nekar Bhavan, Nekara Colony, Vidyanagar, Huballi-580 031.

12) Managing Director, Karnataka State Textile Infrastructure Development Corporation Ltd., Kanabaragi Industrial Area, VTPC Building, Belagavi.

13) The CEO's of all Zilla Panchayats of Karnataka.

14) The Deputy Secretary to Govt., (Cabinet Section), DPAR, Vidhana Soudha, Bangalore-01.

15) The Under Secretary to Govt., (Exp-1), Finance Department, Vidhana Soudha, Bangalore-01.

16) Guard File/ Spare Copies.

**PROCEEDINGS OF THE GOVERNMENT OF KARNATAKA**

**Sub**: Modification to the New Textile and Garment Policy 2019-24 reg.

**Read**: 1) Government Order No. CI 115 JAKAIEE 2017, dated: 04.11.2019.
2) 2020-21 Budget speech Para No.166

* * * * *

**PREAMBLE**:

The State Government has announced the New Textile and Garment Policy 2019-24 on 04.11.2019 vide G.O. read at (1) above in order to attract the investment in Textile sector and make use of the resources available in the State and in turn enhance the employment opportunities to the rural people with emphasis on balanced regional development.

With the announcement of the New Textile and Garment Policy 2019-24, to develop the textile sector in the state by offering incentives and concessions to those industries which are investing in the different value chain of the textile sector was based on zones, where in Bengaluru Rural district was in zone-4, that means no incentives and concessions were given to the textile and garment industries which are established in Bengaluru Rural district.

Further Industry experts, Industrial Associations have represented to Government to include Bengaluru Rural district to cover the incentives and concessions offered to textile and readymade garment industries in par with other districts in Non Kalyana Karnataka region, under the New Textile and garment Policy 2019-24.

In the 2020-21 budget

In the 2020-21 budget speech read at (2) above, the Government has announced in Para No.166 as **"Incentives have been declared in the new Textiles and Readymade Garments Policy, 2019-24. There are plenty of opportunities for the growth of readymade garment sector in Bengaluru Rural district. Therefore, Bengaluru Rural district will be included in these incentives".**

In view of the above, it is proposed to modify New Textile and Garment Policy 2019-24.

Hence the following order:

**GOVERNMENT ORDER No: CI 58 JAKY 2020, BENGALURU,**

**DATED: 17.07.2020**

Under the circumstances explained in the preamble, Government is pleased to approve the following modification to the New Textile and Garment Policy 2019-24 with immediate effect and till further orders:-

v

| Sl. No. | Zones | As notified in G.O. No. CI 115 JaKaIee 2017, dated 04.11.2019 | Modified Zones in New Textile & Garment Policy 2019-24 |
|---|---|---|---|
| 1 | Zone-1 | Entire Kalyana Karnataka Region | Entire Kalyana Karnataka Region |
| 2 | Zone-2 | All areas other than Municipal Corporations, District Headquarters in Non Kalyana Karnataka region | All areas other than Municipal Corporations, District Headquarters in Non Kalyana Karnataka region |
| 3 | Zone-3 | All Municipal Corporations and District Headquarters in Non Kalyana Karnataka region | All Municipal Corporations and District Headquarters in Non Kalyana Karnataka region |
| 4 | Zone-4 | Bangalore Urban and Bangalore Rural Districts | Bengaluru Urban District |

Note for Bengaluru Rural District:- If any of the existing manufacturer intends to make a new investment in Bengaluru Rural District, the production in their existing manufacturing units elsewhere in the State shall not fall below the levels existing as on date of new investment during the incentive eligibility period. This is to ensure that manufacturing/ jobs are not shifted from old units to new units to claim incentives under the policy. The Commissioner for Textiles and Director, Handlooms & Textiles Department has to ascertain / verify this condition before sanction / recommendation of incentives and concessions under New Textile & Garment Policy 2019-24.

This order issued with the concurrence of Finance Department vide endorsement No. FD 154 Exp-1 / 2020, dated 22.06.2020.

By Order and in the name of the
Governor of Karnataka,

17/7/2020.

**(B. VENKATESH MURTHY)**
Deputy Secretary to Government
Commerce & Industries Department (Textiles)

To,

1) The Compiler, Karnataka Gazette, Bengaluru for publish in the special Gazette and supply 1000 copies to this office.
2) The Principal Accountant General (G&SSA), Karnataka, New Building, 'Audit Bhawan', Post Box No. 5398, Bengaluru -01.
3) The Principal Accountant General (E&RSA), Karnataka, New Building, 'Audit Bhawan', Post Box No. 5398, Bengaluru -01.
4) The Principal Accountant General (A&E), Karnataka, Park House Road, Post Box No. 5329, Bengaluru -01.
5) Additional Chief Secretary to Government, Finance Department, Vidhana Soudha, Bengaluru - 01.
6) Principal Secretary to Government, Planning Department, MS Building, Bengaluru -01.

7) Secretary to Government (Stamps & Disaster Management), Revenue Department, M S Building, Bengaluru 01.

8) The Commissioner for the Handlooms and Textile, No.86 Shubhodaya Complex, Railway parallel Road, Kumara Park West, Bengaluru 20 – to circulate the Policy to all District Officers.

9) The Inspector General of Registration and Commissioner of Stamps and Chief Controlling Revenue Authority, Kandaaya Bhavan, 8th floor, K G Road, Bengaluru -560 009.

10) The Deputy Commissioner, Bengaluru rural District.

11) Managing Director, Karnataka Handloom Development Corporation, Priyadarshani Nekar Bhavan, Nekara Colony, Vidyanagar, Huballi-580 031.

12) Managing Director, Karnataka State Textile Infrastructure Development Corporation Ltd., Kanabaragi Industrial Area, VTPC Building, Belagavi.

13) The CEO, Zilla Panchayat, Bengaluru Rural district.

14) PS to Hon'ble Minister for Handlooms & Textile and Minority Welfare, Viakasa Soudha, Bengaluru-01.

15) The Under Secretary to Govt., (Exp-1), Finance Department, Vidhana Soudha, Bengaluru -01.

16) Guard File/ Spare Copies.

**ಕರ್ನಾಟಕ ಸರ್ಕಾರದ ನಡವಳಿ**

ವಿಷಯ : ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24–ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂ. ಸಿಐ 44 ಜಕೈಯೋ 2012, ದಿನಾಂಕ: 31.10.2013.

2. ಸರ್ಕಾರದ ಆದೇಶ ಸಂ. ಸಿಐ 112 ಜಕೈಯೋ 2015, ದಿನಾಂಕ: 30.09.2015.

3. ಸರ್ಕಾರದ ಆದೇಶ ಸಂ. ಸಿಐ 84 ಜಕೈಯೋ 2018, ದಿನಾಂಕ: 08.04.2019(ಪಿ).

ಪ್ರಸ್ತಾವನೆ:

ಕರ್ನಾಟಕ ಸರ್ಕಾರವು, ಮೇಲಿನ ಉಲ್ಲೇಖ (1)ರಲ್ಲಿ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಸಿಐ 44 ಜಕೈಯೋ 2012, ದಿನಾಂಕ: 31.10.2013ರನ್ವಯ ಜವಳಿ ವಲಯದಲ್ಲಿ ಹೂಡಿಕೆಯನ್ನು ಆಕರ್ಷಿಸುವ ನಿಟ್ಟಿನಲ್ಲಿ ಮತ್ತು ರಾಜ್ಯದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಮತ್ತು ಸಮತೋಲಿತವಾದ ಪ್ರಾದೇಶಿಕ ಅಭಿವೃದ್ಧಿಯ ಬಗ್ಗೆ ಒತ್ತು ನೀಡುವ ಮೂಲಕ ಗ್ರಾಮೀಣ ಜನತೆಗೆ ಉದ್ಯೋಗಾವಕಾಶವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನೂತನ ಜವಳಿ ನೀತಿ 2013–18 ಅನ್ನು ಘೋಷಿಸಲಾಗಿತ್ತು. ಜವಳಿ ವಲಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದಕ್ಕಾಗಿ ಮೇಲಿನ ಉಲ್ಲೇಖ (2)ರಲ್ಲಿ ಓದಲಾದ ಸರ್ಕಾರದ ಆದೇಶದ ಮೂಲಕ ಸರ್ಕಾರ ನೂತನ ಜವಳಿ ನೀತಿ 2013–18ಕ್ಕೆ ಸೇರ್ಪಡೆಗಳು/ ಮಾರ್ಪಾಡುಗಳನ್ನು ಅನುಮೋದಿಸಿದೆ.

ಈ ನೀತಿಯು ದಿನಾಂಕ:01.11.2013ರಿಂದ ಜಾರಿಗೆ ಬಂದಿದ್ದು ಮತ್ತು 31.10.2018ರವರೆಗೆ ಮಾನ್ಯತೆಯನ್ನು ಹೊಂದಿರುತ್ತದೆ. ಮೇಲಿನ (3)ರಲ್ಲಿ ಓದಲಾದ ಸರ್ಕಾರದ ಆದೇಶ ಸಂ. ಸಿಐ 84 ಜಕೈಇ 2018, ದಿನಾಂಕ:8.4.2019ರನ್ವಯ ನೂತನ ಜವಳಿ ಮತ್ತು ಸಿದ್ಧ ಉಡುಪುಗಳ ನೀತಿಯನ್ನು ಪರಿಚಯಿಸುವ ತನಕ ನೂತನ ಜವಳಿ ನೀತಿ 2013–18ರ ಸಿಂಧುತ್ವವನ್ನು ವಿಸ್ತರಿಸಲಾಗಿತ್ತು. ಈ ನೀತಿಯ ಅವಧಿಯಲ್ಲಿ, ಕರ್ನಾಟಕವು, ರೂ.9595.74 ಕೋಟಿಗಳ ಬಂಡವಾಳ ಹೂಡಿಕೆಯನ್ನು ಸ್ವೀಕರಿಸಿತ್ತು ಹಾಗೂ 1,92,102 ಉದ್ಯೋಗವನ್ನು ಸೃಜಿಸಿತ್ತು.

ಕರ್ನಾಟಕವು, ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಏರುಮುಖವಾದ ಸ್ಥಿರ ಬೆಳವಣಿಗೆಯನ್ನು ರೂಪಿಸುವಲ್ಲಿ ಭಾರತ ಮತ್ತು ವಿಶ್ವದಾದ್ಯಂತ ಇರುವ ಅತ್ಯುತ್ತಮವಾದ ಅಂಶಗಳನ್ನು ಗುರುತಿಸಿ ಅದನ್ನು ಅನ್ವಯಿಸಿಕೊಳ್ಳುವ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದೆ. ಕರ್ನಾಟಕದಲ್ಲಿ ಜವಳಿ ಕ್ಷೇತ್ರದ ಪರಿವರ್ತನಾದಾಯಕ ಪಯಣವು ಈಗಾಗಲೇ ಅತ್ಯುತ್ತಮ ದರ್ಜೆಯ ಜವಳಿ ತಯಾರಿಕೆಗೆ, ಕುಶಲ ಜವಳಿ ಮೌಲ್ಯ ಸರಪಳಿಯಲ್ಲಿ ಪರಿಣಮಿಸುವ ಆಧುನಿಕ ಉತ್ಪಾದನಾ ತಂತ್ರಜ್ಞಾನಗಳಿಗೆ ಹಾಗೂ ತಯಾರಿಕಾ ಪ್ರಕ್ರಿಯೆ ಮತ್ತು ಆದ್ಯಾಂತವಾದ ಪರ್ಯಾವರಣ ವ್ಯವಸ್ಥೆಗಳಿಗೆ ಉತ್ತೇಜನ ನೀಡುವ ಹಾದಿಯಲ್ಲಿ ಹೆಜ್ಜೆ ಇಟ್ಟಿದೆ.

ರಾಷ್ಟ್ರೀಯ ಸಿದ್ಧ ಉಡುಪುಗಳ ಉತ್ಪಾದನೆಯಲ್ಲಿ ಶೇಕಡ 20ರಷ್ಟು ಪಾಲನ್ನು ಹೊಂದಿರುವ ಕರ್ನಾಟಕವು ಭಾರತದ ಸಿದ್ಧ ಉಡುಪುಗಳ ರಾಜಧಾನಿಯಾಗಿದೆ. ಇದು ರಾಜ್ಯದ ಕೈಗಾರಿಕಾ ಉತ್ಪಾದನೆಗೆ ಸುಮಾರು ಎರಡನೇ ಮೂರರಷ್ಟು ಕೊಡುಗೆಯನ್ನು ನೀಡಿದೆ. ಕಚ್ಚಾ ವಸ್ತುಗಳ ರಫ್ತಿನಲ್ಲಿ ರಾಜ್ಯವು ಪ್ರಮುಖ ಪಾಲನ್ನು ಹೊಂದಿದೆ ಮತ್ತು ವಾಣಿಜ್ಯ ಸರಕುಗಳು, ಸಿದ್ಧ ಉಡುಪುಗಳು ಮತ್ತು ಕೈಮಗ್ಗಗಳಲ್ಲಿ ದೇಶದ ರಫ್ತುಗಳಲ್ಲಿಯೂ ಸಹ ರಾಜ್ಯವು ಉತ್ತಮ ಪಾಲನ್ನು ಹೊಂದಿದೆ. ಅಲ್ಲದೆ, ರಾಜ್ಯವು ಕಚ್ಚಾ ವಸ್ತುಗಳ ಉತ್ಪಾದನೆಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ ಮತ್ತು ರೇಷ್ಮೆ ಉತ್ಪಾದನೆಯಲ್ಲಿ ದೇಶದಲ್ಲಿಯೇ ಪ್ರಮುಖ ರಾಜ್ಯವಾಗಿದೆ. ದೇಶದಲ್ಲಿ ಮಲ್ಬರಿ (ಹಿಪ್ಪು ನೇರಳೆ) ರೇಷ್ಮೆ ಶೇ.49, ಉಣ್ಣೆ ಶೇ.12 ಹಾಗೂ ಹತ್ತಿ ಉತ್ಪಾದನೆಗೆ ಶೇ.6ರಷ್ಟು ಕೊಡುಗೆಯನ್ನು ನೀಡುತ್ತಿದೆ.

ಪ್ರಸ್ತುತ ಸನ್ನಿವೇಶದಲ್ಲಿ, ಜಾಗತಿಕ ಜವಳಿ ಮತ್ತು ಉಡುಪು ಉದ್ಯಮವು, ಉತ್ಪಾದನಾ ಸ್ಥಳಗಳ ವಿಷಯದಲ್ಲಿ ರಚನಾತ್ಮಕವಾದ ಬದಲಾವಣೆಯನ್ನು ಎದುರು ನೋಡುತ್ತಿದೆ. ಕರ್ನಾಟಕವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮಾನವಾಗಿಸುವ ಅಗತ್ಯವು ಅನಿವಾರ್ಯವಾದುದಾಗಿದೆ. ಆದುದರಿಂದ, ಈ ಬದಲಾಗುತ್ತಿರುವ ಸನ್ನಿವೇಶಕ್ಕೆ ಬದಲಾಗಿ ಲಾಭದಾಯಕ ರಿಯಾಯಿತಿಗಳು ಮತ್ತು ಪ್ರೋತ್ಸಾಹಕಗಳು, ಸಾಂಸ್ಥಿಕ ಕಾರ್ಯಚೌಕಟ್ಟಿನಲ್ಲಿ ಆಧುನೀಕರಣಗಳು, ಯೋಜನೆಗಳ ರಚನಾ ಕಾರ್ಯವಿಧಾನ ಮತ್ತು ಇತರೆ ಸಂಬಂಧಿತ ಆಧುನೀಕರಣಗಳನ್ನು ಹೊಂದಿರುವ ನೂತನ ನೀತಿಯನ್ನು ರೂಪಿಸುವ ಅಗತ್ಯತೆ ಅವಶ್ಯಕವಾಗಿದೆಯೆಂದು ಭಾವಿಸಲಾಗಿದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ನೂತನ ಜವಳಿ ಮತ್ತು ಸಿದ್ಧ ಉಡುಪುಗಳ ನೀತಿ, 2019–24ನ್ನು ರೂಪಿಸಲಾಗಿದೆ. ಈ ನೀತಿಯಲ್ಲಿ ಉಲ್ಲೇಖಿಸಿರುವಂತೆ ಗುರಿಗಳನ್ನು ಸಾಧಿಸುವುದಕ್ಕೆ ಮತ್ತು ಹೂಡಿಕೆಯನ್ನು ಆಕರ್ಷಿಸುವುದಕ್ಕೆ, ಜವಳಿ ಕೈಗಾರಿಕಾ ಸಂಘಗಳು ಮತ್ತು ಸಮರ್ಥ ಹೂಡಿಕೆದಾರರು, ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ಮತ್ತು ಎಲ್ಲಾ ಇತರೆ ಮಧ್ಯಸ್ಥಗಾರರೊಂದಿಗೆ ಹಲವಾರು ಸಭೆಗಳನ್ನು ನಡೆಸಲಾಗಿದೆ. ಜವಳಿ ಉದ್ಯಮಕ್ಕೆ ಸಂಬಂಧಿಸಿದಂತೆ ಕರ್ನಾಟಕವನ್ನು ಪ್ರಾಶಸ್ತ್ಯ ತಾಣವನ್ನಾಗಿ ಮಾಡುವ ಉದ್ದೇಶದಿಂದ ಎಲ್ಲಾ ಮಧ್ಯಸ್ಥಗಾರರು ನೀಡಿದ ಅಭಿಪ್ರಾಯ ಮತ್ತು ಸಲಹೆಗಳನ್ನು ಈ ನೀತಿಯಲ್ಲಿ ಯುಕ್ತವಾಗಿ ಸೇರಿಸಲಾಗಿದೆ.

ಈ ಎಲ್ಲದರ ಹಿನ್ನಲೆಯಲ್ಲಿ, ಸರ್ಕಾರವು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ, 2019–24ನ್ನು ರೂಪಿಸಿ, ಅಳವಡಿಸಿಕೊಳ್ಳುವ ನಿರ್ಧಾರವನ್ನು ಕೈಗೊಂಡಿದೆ.

ಆದುದರಿಂದ, ಈ ಮುಂದಿನ ಆದೇಶ:

**ಸರ್ಕಾರದ ಆದೇಶ ಸಂಖ್ಯೆ ಸಿಐ 115 ಜಕೈಇ 2017,**
**ಬೆಂಗಳೂರು, ದಿನಾಂಕ: 04.11.2019**

ಪ್ರಸ್ತಾವನೆಯಲ್ಲಿ ವಿವರಿಸಲಾದ ಸನ್ನಿವೇಶಗಳಲ್ಲಿ, ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧದಲ್ಲಿ ವಿವರಿಸಿದಂತೆ, ಜವಳಿ ಮತ್ತು ಸಿದ್ಧ ಉಡುಪು ವಲಯಗಳಲ್ಲಿ ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸುವುದಕ್ಕಾಗಿ ಮತ್ತು ರಾಜ್ಯದಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಜಿಸುವುದಕ್ಕಾಗಿ **ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24** ಅನ್ನು ಘೋಷಿಸಲು ಸರ್ಕಾರವು ಹರ್ಷಿಸುತ್ತದೆ.

ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ, 2019–24ರ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತದೆ.

**1. ಮುನ್ನೋಟ:**

ರಾಜ್ಯದ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯು ದೇಶದಲ್ಲಿಯೇ ಕರ್ನಾಟಕವನ್ನು ಜವಳಿ ಮತ್ತು ಉಡುಪು ವಲಯದಲ್ಲಿ ಪ್ರಮುಖ ತಾಣವನ್ನಾಗಿಸುವ ಮತ್ತು ಜವಳಿ ಉದ್ಯಮದ ಮೌಲ್ಯ ಸರಣಿಯನ್ನು ಸುವರ್ಣಮಯ ಮೌಲ್ಯ ಸರಣಿಯನ್ನಾಗಿಸುವ ಗುರಿಯನ್ನು ಹೊಂದಿದೆ. ಈ ನೀತಿಯು ರಾಜ್ಯದಲ್ಲಿ ಜವಳಿ ಉದ್ಯಮಕ್ಕೆ ಪ್ರೇರಕ ಶಕ್ತಿಯನ್ನು ಒದಗಿಸುತ್ತದೆ ಮತ್ತು ಮುಂದಿನ 5 ವರ್ಷಗಳಲ್ಲಿ 5 ಲಕ್ಷ ಹೊಸ ಉದ್ಯೋಗಗಳನ್ನು ಸೃಜಿಸುವ ಮತ್ತು ರೂ.10,000 ಕೋಟಿ ಮೌಲ್ಯದ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಗುರಿಯನ್ನು ಹೊಂದಿದೆ.

**2. ಧ್ಯೇಯೋದ್ದೇಶ:**

ಕರ್ನಾಟಕವನ್ನು ಭಾರತದ ಸಿದ್ಧ ಉಡುಪು ರಾಜಧಾನಿಯನ್ನಾಗಿ ಉಳಿಸಿಕೊಳ್ಳುವುದು ಮತ್ತು ಬಂಡವಾಳ ಸಂಗ್ರಹಣೆ, ತಂತ್ರಜ್ಞಾನ ವರ್ಗಾವಣೆ, ವಿಶ್ವ ದರ್ಜೆಯ ಮೂಲಭೂತ ಸೌಕರ್ಯ ಮತ್ತು ಕೌಶಲ್ಯದ ಉನ್ನತೀಕರಣದ ಮೂಲಕ ಸಮಗ್ರ ಜವಳಿ ಮೌಲ್ಯ ಸರಣಿಯಲ್ಲಿ ಉನ್ನತ ಮತ್ತು ಸುಸ್ಥಿರ ಬೆಳವಣಿಗೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

3. **ಕಾರ್ಯನೀತಿಗಳು:**

ಎ. ನೂಲಿನಿಂದ ಫ್ಯಾಷನ್ ಉತ್ಪನ್ನಗಳವರೆಗೆ ಸಮಗ್ರ ಜವಳಿ ಮೌಲ್ಯ ಸರಣಿಯಲ್ಲಿ ಬೆಳವಣಿಗೆಯನ್ನು ವೃದ್ಧಿಸುವುದು ಮತ್ತು ತಯಾರಿಕಾ ವೆಚ್ಚದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು.

ಬಿ. ರಾಜ್ಯದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕ ಜವಳಿ ಉದ್ಯಮವನ್ನು ಸೃಜಿಸಲು ನೀತಿಯ ಪ್ರಧಾನ ವಲಯಗಳಾದ ನೂಲುವಿಕೆ, ನೇಯುವಿಕೆ (ರೇಪಿಯರ್ ಮಗ್ಗ, ಏರ್ ಜೆಟ್ ಮಗ್ಗಗಳು ಮತ್ತು ಎಲೆಕ್ಟ್ರಾನಿಕ್ ಜಕಾರ್ಡ್) ಸಂಯೋಜಿತ ಘಟಕಗಳು, ಸಂಸ್ಕರಣೆ ಮತ್ತು ತಾಂತ್ರಿಕ ಜವಳಿಗಳಂತಹ ಒತ್ತುನೀಡುವ (ಥ್ರಸ್ಟ್ ಸೆಕ್ಟರ್) ಕಡೆಗೆ ವಿಶೇಶ ಗಮನವನ್ನು ಹರಿಸುವುದು.

ಸಿ. ಜವಳಿ ಮೌಲ್ಯ ಸರಣಿಯ ಪ್ರತಿಯೊಂದು ವಿಭಾಗದಲ್ಲಿ ಕರ್ನಾಟಕವನ್ನು ಕೌಶಲ್ಯಭರಿತ ರಾಜ್ಯವನ್ನಾಗಿ ಮಾಡುವುದು ಮತ್ತು ಉದ್ಯಮದ ಅಗತ್ಯತೆಗಳಿಗನುಸಾರವಾಗಿ ಕೌಶಲ್ಯತೆಯುಳ್ಳ, ಮರು–ಕೌಶಲ್ಯತೆಯುಳ್ಳ ಮತ್ತು ಕೌಶಲ್ಯಗಳನ್ನು ಉನ್ನತೀಕರಿಸುವುದಕ್ಕಾಗಿ ಹೈಟೆಕ್ ಸುಧಾರಿತ ಕೌಶಲ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು.

ಡಿ. ವಿಶ್ವದರ್ಜೆಯ ಸೌಲಭ್ಯಗಳ ಸೃಜನೆಗಾಗಿ ಮತ್ತು ಜೆಡ್ಎಲ್ಡಿ ತಂತ್ರಜ್ಞಾನವನ್ನು ಉತ್ತೇಜಿಸುವುದಕ್ಕಾಗಿ ಬೃಹತ್ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಮೂಲಕ ಜವಳಿ ಮೌಲ್ಯಸರಣಿಯ ಪ್ರತಿಯೊಂದು ಹಂತದಲ್ಲಿ "ಶೂನ್ಯ ಪರಿಣಾಮ, ಶೂನ್ಯ ದೋಷ", ("ಝೀರೋ ಎಫೆಕ್ಟ್; ಝೀರೋ ಡಿಫೆಕ್ಟ್")ವನ್ನು ಸಾಧಿಸುವುದು.

ಇ. ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಕೈಮಗ್ಗದ ರಫ್ತುಗಳ ಪಾಲನ್ನು ಹೆಚ್ಚಿಸುವುದು ಮತ್ತು ಕೈಮಗ್ಗದ ಉತ್ಪನ್ನಗಳ ವಿನ್ಯಾಸ, ಉತ್ಪನ್ನದ ವೈವಿಧ್ಯೀಕರಣ, ಬ್ರ್ಯಾಂಡಿಂಗ್, ಮಾರುಕಟ್ಟೆ ಮತ್ತು ವಿತರಣೆಯನ್ನು ಬೆಂಬಲಿಸುವುದು.

ಎಫ್. ಕರ್ನಾಟಕವನ್ನು ವಿಶಿಷ್ಟ ಉತ್ಪಾದನಾ ಕೇಂದ್ರ ಮತ್ತು ತಾಂತ್ರಿಕ ಜವಳಿಗಳ ನಿವ್ವಳ ರಫ್ತುದಾರರನ್ನಾಗಿ ಮಾಡುವುದು.

ಜಿ. ಕರ್ನಾಟಕವನ್ನು ವಿಸ್ತಾರ (ರೀಟೇಲ್) ತಾಣವನ್ನಾಗಿಸುವುದು ಮತ್ತು ವ್ಯಾಪಾರ ಮಳಿಗೆಗಳ (buying houses) ಮತ್ತು ಅಂತರರಾಷ್ಟ್ರೀಯ ಉಡುಪು ಚಿಲ್ಲರೆ ಮಾರಾಟಗಾರರ ಬೆಳವಣಿಗೆಗೆ ಉತ್ತೇಜನ ನೀಡುವುದು.

ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ, 2019–24 ಮತ್ತು ಪ್ರೋತ್ಸಾಹಕಗಳ ಪ್ಯಾಕೇಜ್ ಮತ್ತು ರಿಯಾಯಿತಿಗಳು, 4.11.2019 ರಿಂದ ಜಾರಿಗೆ ಬರತಕ್ಕದ್ದು ಮತ್ತು 5 ವರ್ಷಗಳ ಅವಧಿಯವರೆಗೆ ಅಥವಾ ನೂತನ ನೀತಿ ಘೋಷಣೆಯಾಗುವವರೆಗೆ ಸಿಂಧುವಾಗಿರುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 394 ವೆಚ್ಚ–1/2018, ದಿನಾಂಕ: 17.7.2019 ಮತ್ತು ಕಂದಾಯ ಇಲಾಖೆ ಹಿಂಬರಹ ಸಂಖ್ಯೆ ಕಂ.ಇ 66/ಎಂಯು ಎನ್ಓ ಎಂಯು/2018, ದಿನಾಂಕ: 25.09.2019 ಮತ್ತು ದಿನಾಂಕ: 31.10.2019ರಂದು ನಡೆದ ಸಚಿವ ಸಂಪುಟ ಟಿಪ್ಪಣಿ ವಿಷಯ ಸಂಖ್ಯೆ: ಸಿ–596/2019, ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

ಸಹಿ/–

**(ಎಂ. ಮಹೇಶ್ವರ್ ರಾವ್)**
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ & ಕೈಗಾರಿಕೆ ಇಲಾಖೆ

ಗೆ,

1) ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ ಇದರ 1000 ಪ್ರತಿಗಳನ್ನು ಒದಗಿಸಲು ಕೋರಿದೆ.

2) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–01.

3) ಪ್ರಧಾನ ಮಹಾಲೇಖಪಾಲರು (ಇ & ಆರ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–01.

4) ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು–01.

5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು–01.

6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01.

7) ಸರ್ಕಾರದ ಕಾರ್ಯದರ್ಶಿ (ಮುಂದ್ರಾಂಕಗಳು ಮತ್ತು ವಿಪತ್ತು ನಿರ್ವಹಣೆ) ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01.

8) ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಂ. 86, ಶುಭೋದಯ ಕಾಂಪ್ಲೆಕ್ಸ್, ರೈಲ್ವೇ ಸಮನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–20 – ಎಲ್ಲಾ ಜಿಲ್ಲೆಯ ಅಧಿಕಾರಿಗಳಿಗೆ ಈ ನೀತಿಯನ್ನು ಪ್ರಚಾರ ಮಾಡುವುದಕ್ಕಾಗಿ.

9) ನೋಂದಣಿ ಮಹಾಪರಿಶೀಲನಾಧಿಕಾರಿ ಮತ್ತು ಮುದ್ರಾಂಕಗಳ ಆಯುಕ್ತರು ಮತ್ತು ಮುಖ್ಯ ನಿಯಂತ್ರಣ ಕಂದಾಯ ಪ್ರಾಧಿಕಾರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–09.

10) ಕರ್ನಾಟಕದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

11) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಪ್ರಿಯದರ್ಶಿನಿ ನೇಕಾರ ಭವನ, ನೇಕಾರ ಕಾಲೋನಿ, ವಿದ್ಯಾನಗರ, ಹುಬ್ಬಳ್ಳಿ–580031.

12) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ, ಕಣಬರಗಿ ಕೈಗಾರಿಕಾ ಪ್ರದೇಶ, ವಿಟಿಪಿಸಿ ಕಟ್ಟಡ, ಬೆಳಗಾವಿ.

13) ಕರ್ನಾಟಕದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ.

14) ಸರ್ಕಾರದ ಉಪಕಾರ್ಯದರ್ಶಿ (ಸಚಿವ ಸಂಪುಟ ವಿಭಾಗ) ಸಿಆಸುಇ. ವಿಧಾನಸೌಧ, ಬೆಂಗಳೂರು–01

15) ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ–1), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು–01.

16) ರಕ್ಷಾ ಕಡತ/ ಬಿಡಿ ಪ್ರತಿಗಳು.

# ಪರಿವಿಡಿ

ಪ್ರಸ್ತಾವನೆ

1 ಜವಳಿ ಮತ್ತು ಉಡುಪು ವಲಯ 1

1.1 ಭಾರತೀಯ ಮಾರುಕಟ್ಟೆಯ ಚಿತ್ರಣ 1

1.2 ಕರ್ನಾಟಕ ಮಾರುಕಟ್ಟೆಯ ಚಿತ್ರಣ 2

1.3 ಅಂತರರಾಜ್ಯ ಮತ್ತು ಅಂತಾರಾಷ್ಟ್ರೀಯ ಭೂಚಿತ್ರಣ ಬದಲಾವಣೆ 4

2 ಪರಿಭಾಷೆ 4

3 ಮುನ್ನೋಟ, ಧ್ಯೇಯೋದ್ದೇಶ, ಕಾರ್ಯತಂತ್ರ ಮತ್ತು ಮಾರ್ಗ 8

3.1 ಮುನ್ನೋಟ 8

3.2 ಧ್ಯೇಯೋದ್ದೇಶ 8

3.3 ಕಾರ್ಯತಂತ್ರಗಳು 8

3.4 ಮಾರ್ಗ 9

4 ಹಸ್ತಕ್ಷೇಪಕ್ಕಾಗಿ ಒತ್ತು ನೀಡಬೇಕಾದ ಕ್ಷೇತ್ರಗಳು 9

5 ನೀತಿಯ ಗುರಿಗಳು 10

6 ವಲಯವಾರು ಉಪಕ್ರಮಗಳು 10

6.1 ಜಿನ್ನಿಂಗ್ 10

6.2 ನೂಲಿನ ಗಿರಣಿ (ಸ್ಪಿನ್ನಿಂಗ್) 11

6.3 ನೇಯ್ಗೆ (ಕೈಮಗ್ಗಗಳು ಮತ್ತು ವಿದ್ಯುತ್ ಮಗ್ಗಗಳು) 12

6.4 ಸಂಸ್ಕರಣೆ 14

6.5 ಸಂಯೋಜಿತ ಘಟಕಗಳು 15

6.6 ಸಿದ್ಧ ಉಡುಪು ತಯಾರಿಕೆ 15

6.7 ಫ್ಯಾಷನ್/ ಮಾರಾಟ ಮಳಿಗೆಗಳು 16

6.8 ತಾಂತ್ರಿಕ ಜವಳಿ ಉದ್ಯಮ 17

6.9 ರೇಷ್ಮೆ 18

6.10 ಉಣ್ಣೆ 19

7 ಇತರ ಯೋಜನೆಗಳ ಅಡಿಯಲ್ಲಿ ನೆರವನ್ನು ಕ್ರೋಢೀಕರಿಸುವುದು 19

8 ಜವಳಿ ಉದ್ಯಮಗಳಿಗಾಗಿ ನೀಡಲಾಗುವ ನೀತಿ ಪ್ರೋತ್ಸಾಹಕಗಳು 20

8.1 ಸಾಲ ಆಧಾರಿತ ಬಂಡವಾಳ ಸಹಾಯಧನ 20

8.2 ಬಡ್ಡಿ ಸಹಾಯಧನ 21

8.3 ವಿದ್ಯುತ್ ಸಹಾಯಧನ 21

8.4 ನೌಕರರ ರಾಜ್ಯ ವಿಮೆ (ಇಎಸ್ಐ) ಮತ್ತು ನೌಕರರ ಭವಿಷ್ಯ ನಿಧಿ (ಇಪಿಎಫ್) ಸಹಾಯಧನ 22

8.5 ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ರಿಯಾಯಿತಿ ಶುಲ್ಕಗಳು 23

8.6 ಅಸ್ತಿತ್ವದಲ್ಲಿರುವ ಮತ್ತು ನೂತನ ಉದ್ಯಮಗಳಿಗೆ, ವಿಸರ್ಜನೆ ಸಂಸ್ಕರಣಾ ಘಟಕ (ಇ.ಟಿ.ಪಿ) 23

9 ಸಿದ್ಧ ಉಡುಪು ಘಟಕಗಳಿಗೆ ನೀಡಲಾಗುವ ನೀತಿ ಪ್ರೋತ್ಸಾಹಕಗಳು 24

9.1 ಸಾಲ ಆಧಾರಿತ ಬಂಡವಾಳ ಸಹಾಯಧನ 24

9.2 ಬಡ್ಡಿ ಸಹಾಯಧನ 24

9.3 ವಿದ್ಯುತ್ ಸಹಾಯಧನ 25

9.4 ವೇತನ ಸಹಾಯಧನ 25

9.5 ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ರಿಯಾಯಿತಿ ಶುಲ್ಕಗಳು 25

9.6 ನೌಕರರ ರಾಜ್ಯ ವಿಮೆ (ಇಎಸ್ಐ) ಮತ್ತು ನೌಕರರ ಭವಿಷ್ಯ ನಿಧಿ (ಇಪಿಎಫ್) ಸಹಾಯಧನ 26

10 ಮೆಗಾ ಘಟಕಗಳಿಗಾಗಿ ವಿಶೇಷ ಪ್ಯಾಕೇಜ್ 26

11 ಪ್ರೋತ್ಸಾಹಧನದ ಮೇಲಿನ ಮಿತಿ 27

12 ಮೂಲಭೂತ ಸೌಕರ್ಯ ಅಭಿವೃದ್ಧಿ 27

12.1 ಗ್ರೀನ್‌ಫೀಲ್ಡ್ ಜವಳಿ ಪಾರ್ಕ್‌ಗಳಿಗಾಗಿ ಸಾಮಾನ್ಯ ಮೂಲಭೂತ ಸೌಕರ್ಯ 27

12.2 ಬ್ರೌನ್‌ಫೀಲ್ಡ್ ಸಮೂಹ ಅಭಿವೃದ್ಧಿ 30

12.3 ಸಾಮಾನ್ಯ ತ್ಯಾಜ್ಯ ಜಲ ಸಂಸ್ಕರಣಾ ಸ್ಥಾವರ ಮತ್ತು ಹಾನಿಕಾರಕ ತ್ಯಾಜ್ಯ ವಿಲೇವಾರಿ ಸೌಲಭ್ಯ 30

13 ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ಉನ್ನತೀಕರಣ 31

14 ಸಾಮರ್ಥ್ಯ ವೃದ್ಧಿಗೆ ಬೆಂಬಲ 33

15 ಜವಳಿ/ ತಾಂತ್ರಿಕ ಜವಳಿಗಳ ಉತ್ಕೃಷ್ಟತಾ ಕೇಂದ್ರ 36

16 ನೀತಿ ಅನುಷ್ಠಾನಕ್ಕಾಗಿ ಯೋಜಿತ ಆಯವ್ಯಯ ವೆಚ್ಚ 38

17 ಪರಿಶೀಲನೆ/ ಮೇಲ್ವಿಚಾರಣೆ 38

18 ನಿರ್ವಹಣೆ ನೀತಿ 39

ಅನುಬಂಧ 1: ನೂತನ ಜವಳಿ ನೀತಿ (2013–2018)ರ ಮೇರೆಗಿನ ಹೂಡಿಕೆಗಳ ಚಿತ್ರಣ 41

ಅನುಬಂಧ 2: ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24ಕ್ಕೆ ಸಂಬಂಧಿಸಿದಂತೆ ಆಯವ್ಯಯ 44

ಸಂಪರ್ಕಿಸಬಹುದಾದ ಅಧಿಕಾರಿಗಳ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳು 46

## ಪ್ರಸ್ತಾವನೆ

ಕರ್ನಾಟಕವು, ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಏರುಮುಖವಾದ ಸ್ಥಿರ ಬೆಳವಣಿಗೆಯನ್ನು ರೂಪಿಸುವಲ್ಲಿ ಭಾರತ ಮತ್ತು ವಿಶ್ವದಾದ್ಯಂತ ಇರುವ ಅತ್ಯುತ್ತಮವಾದ ಅಂಶಗಳನ್ನು ಗುರುತಿಸಿ ಅದನ್ನು ಅನ್ವಯಿಸಿಕೊಳ್ಳುವ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದೆ. ಕರ್ನಾಟಕದಲ್ಲಿ ಜವಳಿ ಕ್ಷೇತ್ರದ ಪರಿವರ್ತನಾದಾಯಕ ಪಯಣವು ಈಗಾಗಲೇ ಅತ್ಯುತ್ತಮ ದರ್ಜೆಯ ಜವಳಿ ತಯಾರಿಕೆಗೆ, ಕುಶಲ ಜವಳಿ ಮೌಲ್ಯ ಸರಪಳಿಯಲ್ಲಿ ಪರಿಣಮಿಸುವ ಆಧುನಿಕ ಉತ್ಪಾದನಾ ತಂತ್ರಜ್ಞಾನಗಳಿಗೆ ಹಾಗೂ ತಯಾರಿಕಾ ಪ್ರಕ್ರಿಯೆ ಮತ್ತು ಆದ್ಯಾಂತವಾದ ಪರ್ಯಾವರಣ ವ್ಯವಸ್ಥೆಗಳಿಗೆ ಉತ್ತೇಜನ ನೀಡುವ ಹಾದಿಯಲ್ಲಿ ಹೆಜ್ಜೆ ಇಟ್ಟಿದೆ.

ಜವಳಿ ಮತ್ತು ಗಾರ್ಮೆಂಟ್ ವಲಯದಲ್ಲಿನ ಉದ್ಯೋಗ ಸೃಜನೆ ಅದರಲ್ಲೂ ವಿಶೇಷವಾಗಿ ಕೈಗಾರಿಕಾ ಉತ್ಪಾದನೆ, ಮಹಿಳೆಯ ಉದ್ಯೋಗ ಸೃಜನೆ ಮತ್ತು ಕರ್ನಾಟಕದ ಆರ್ಥಿಕತೆಗೆ ರಫ್ತು ಗಳಿಕೆಗಳ ರೂಪದಲ್ಲಿ ಜವಳಿ ಮತ್ತು ಸಿದ್ಧ ಉಡುಪು ವಲಯದ ಕೊಡುಗೆಯನ್ನು ಪರಿಗಣಿಸಿದಾಗ, ಜವಳಿ ಮೌಲ್ಯ ಸರಪಳಿಯ ಎಲ್ಲಾ ಹಂತಗಳಲ್ಲಿ ರಾಜ್ಯವನ್ನು ಉನ್ನತ ಮತ್ತು ಸುಸ್ಥಿರ ಬೆಳವಣಿಗೆಗೆ ಕೊಂಡೊಯ್ಯುವ ಹಾಗೂ ದೇಶದಲ್ಲಿ ಜವಳಿ ಮತ್ತು ಉಡುಪು ವಲಯದಲ್ಲಿ ರಾಜ್ಯವನ್ನು ಮುಂಚೂಣಿ ಸ್ಥಾನದಲ್ಲಿ ನಿಲ್ಲಿಸುವ ಹಾಗೂ ಜವಳಿ ಮೌಲ್ಯ ಸರಪಳಿಯನ್ನು ಸುವರ್ಣಮಯ ಮೌಲ್ಯ ಸರಪಳಿಯನ್ನಾಗಿ ಮಾಡುವ ಸಮಯ ಕೂಡಿಬಂದಿದೆ.

ಕ್ಷೇತ್ರದ ಸ್ವರೂಪದ ಬದಲಾವಣೆಗೆ ತಕ್ಕಂತೆ ಪ್ರಸಕ್ತ ನೀತಿಯನ್ನು ಪುನರ್ ವಿಶ್ಲೇಷಣೆ ಮಾಡಿ, ರಾಜ್ಯದಲ್ಲಿರುವ "ನೂತನ ಜವಳಿ ನೀತಿ 2013–18" (ಅನುಬಂಧ–1)ರ ಜವಳಿ ನೀತಿಯ ಅನುಷ್ಠಾನದ ಅವಕಾಶಗಳನ್ನು ಹಾಗೂ ಅದರ ವಿಸ್ತಾರವನ್ನು ಬಳಸಿಕೊಳ್ಳುವುದಕ್ಕಾಗಿ ನೀತಿಯ ಉದ್ದೇಶಗಳು, ಗುರಿಗಳು, ಕಾರ್ಯತಂತ್ರಗಳನ್ನು ಪುನರ್ ವ್ಯಾಖ್ಯಾನಿಸಲು ಒಂದು ಸಮಗ್ರವಾದ ಹಾಗೂ ಅತ್ಯುತ್ತಮವಾಗಿ ವಿನ್ಯಾಸಗೊಳಿಸಿದ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24 ಅನ್ನು ಕರ್ನಾಟಕ ಸರ್ಕಾರವು ರೂಪಿಸಿದೆ.

## 1. ಜವಳಿ ಮತ್ತು ಉಡುಪು ವಲಯ

### 1.1 ಭಾರತೀಯ ಮಾರುಕಟ್ಟೆಯ ಚಿತ್ರಣ

ಭಾರತದ ಜವಳಿ ಮತ್ತು ಉಡುಪು ವಲಯವು ಪ್ರಬಲವಾದ ಸಕಾರಾತ್ಮಕ ಬದಲಾವಣೆಯ ಅಲೆಯಲ್ಲಿ ಸಾಗುತ್ತಿದ್ದು, ಸುಮಾರು 350 ಬಿಲಿಯನ್ ಅಮೇರಿಕನ್ ಡಾಲರ್ ಮೌಲ್ಯದ ಜವಳಿ ಮತ್ತು ಉಡುಪನ್ನು ರಫ್ತು ಮಾಡಲು ಮತ್ತು 2024ರ ಹೊತ್ತಿಗೆ 180–200 ಬಿಲಿಯನ್ ಅಮೇರಿಕನ್ ಡಾಲರ್ ಮೌಲ್ಯದ ಹೂಡಿಕೆಗಳನ್ನು ಸೆಳೆಯಲು ನಿರೀಕ್ಷಿಸಲಾಗಿದೆ.

| ಭಾರತದ ಜವಳಿ ಮತ್ತು ಉಡುಪು ಕೈಗಾರಿಕೆಯ ಸ್ಥೂಲ ಆರ್ಥಿಕ ಸೂಚ್ಯಂಕಗಳು | |
|---|---|
| ಭಾರತದ ಜಿಡಿಪಿಗೆ ನೀಡಿದ ಕೊಡುಗೆ | ಶೇ.5 |
| ಭಾರತದ ಕೈಗಾರಿಕಾ ಉತ್ಪಾದನೆಗೆ ನೀಡಿದ ಕೊಡುಗೆ | ಶೇ.14 |
| ರಫ್ತು ಗಳಿಕೆಗೆ ನೀಡಿದ ಕೊಡುಗೆ | ಶೇ.13 |
| ಉದ್ಯೋಗ ಸೃಜನೆ | 100 ಮಿಲಿಯನ್ |
| 2024ರೊಳಗೆ ಯೋಜಿತ ರಫ್ತು ಗಳಿಕೆಗಳು | 350 ಬಿಲಿಯನ್ ಅಮೇರಿಕನ್ ಡಾಲರ್ |
| 2024 ರೊಳಗೆ ಅಗತ್ಯಪಡಿಸಲಾದ ಯೋಜಿತ ಹೂಡಿಕೆ | 200 ಅಮೇರಿಕನ್ ಡಾಲರ್ |

ಜವಳಿ ವಲಯವು ಭಾರತದಲ್ಲೇ ಅತ್ಯಂತ ಹೆಚ್ಚಿನ ಕೈಗಾರಿಕಾ ಉದ್ಯೋಗವನ್ನು ಒದಗಿಸುತ್ತಿದ್ದು, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ 100 ದಶಲಕ್ಷಕ್ಕಿಂತಲೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿದೆ. ಈ ವಲಯವು ಭಾರತದ ನಿವ್ವಳ ದೇಶೀಯ ಉತ್ಪನ್ನಕ್ಕೆ (ಜಿಡಿಪಿಗೆ) ಶೇಕಡ 5ರಷ್ಟು, ಕೈಗಾರಿಕಾ ಉತ್ಪಾದನೆಗೆ ಶೇಕಡ 14ರಷ್ಟು ಮತ್ತು ರಫ್ತು ಉತ್ಪನ್ನಗಳಿಗೆ ಶೇ. 13ರಷ್ಟು ಕೊಡುಗೆ ನೀಡುತ್ತಿದೆ. ಕಳೆದ ಐದು ವರ್ಷಗಳ

ಅವಧಿಯಲ್ಲಿ ಜವಳಿ ವಲಯದ ಹೂಡಿಕೆಯು ಹೆಚ್ಚುತ್ತಲೇ ಇದೆ. ಕೈಗಾರಿಕಾ ನೀತಿ ಮತ್ತು ಸಂವರ್ಧನಾ ಇಲಾಖೆಯ (ಡಿಐಪಿಪಿ) ಅಂಕಿಅಂಶಗಳನುಸಾರ ಈ ಕೈಗಾರಿಕೆಯು (ಬಣ್ಣ ಹಾಕುವ ಮತ್ತು ಮುದ್ರಿಸುವ ಉದ್ಯಮವೂ ಒಳಗೊಂಡು), ಏಪ್ರಿಲ್ 2000 ರಿಂದ ಜೂನ್ 2018ರ ಅವಧಿಯವರೆಗೆ 29.74 ಬಿಲಿಯನ್ ಅಮೇರಿಕನ್ ಡಾಲರ್ ಮೌಲ್ಯದ ವಿದೇಶಿ ನೇರ ಹೂಡಿಕೆಯನ್ನು (ಎಫ್‌ಡಿಐ) ಆಕರ್ಷಿಸಿದೆ.

ಭಾರತವು ಜವಳಿ ಮತ್ತು ಉಡುಮು ಕ್ಷೇತ್ರದಲ್ಲಿ ವಿಶ್ವದ ಎರಡನೇ ಅತಿದೊಡ್ಡ ರಫ್ತುದಾರ ರಾಷ್ಟ್ರವಾಗಿದೆ. ಕೇಂದ್ರ ವಾಣಿಜ್ಯ ಮಂತ್ರಾಲಯದ ಅಡಿಯಲ್ಲಿ, ವಾಣಿಜ್ಯ ಗುಪ್ತಚರ ಮತ್ತು ಸಾಂಖ್ಯಿಕ (ಡಿಜಿಸಿಐ ಮತ್ತು ಎಸ್) ಮಹಾನಿರ್ದೇಶಕರ ಕಚೇರಿಯು ಪ್ರಕಟಿಸಿದ ಇತ್ತೀಚಿನ ದತ್ತಾಂಶದ ಪ್ರಕಾರ ಭಾರತದಿಂದಾಗುವ ಜವಳಿ ಮತ್ತು ಉಡುಪುಗಳ ರಫ್ತು ಪ್ರಮಾಣವು ಹಿಂದಿನ ಜುಲೈ ತಿಂಗಳ ರೂ.176.92 ಬಿಲಿಯನ್ (2.74 ಬಿಲಿಯನ್ ಅಮೇರಿಕನ್ ಡಾಲರ್)ಗೆ ಹೋಲಿಸಿದರೆ ನಂತರದ ಜುಲೈ 2018ರಲ್ಲಿ ಅದು ರೂ.196.36 ಬಿಲಿಯನ್‌ಗೆ (2.86 ಬಿಲಿಯನ್ ಅಮೇರಿಕನ್ ಡಾಲರ್) ಎಂದರೆ ಶೇಕಡ 11ರಷ್ಟು ಹೆಚ್ಚಾಗಿದೆ. ಅಲ್ಲದೆ, ಒಟ್ಟು ಜವಳಿ ರಫ್ತುಗಳು ಜುಲೈ 2017ರ ಅವಧಿಯಲ್ಲಿ ರೂ.94.29 ಬಿಲಿಯನ್‌ಗೆ (ರೂ.1.46 ಬಿಲಿಯನ್) ಹೋಲಿಸಿದರೆ ಜುಲೈ 2018ರ ಅವಧಿಗೆ ರೂ.108.79 ಬಿಲಿಯನ್‌ಗೆ (1.58 ಬಿಲಿಯನ್ ಅಮೇರಿಕನ್ ಡಾಲರ್) ಎಂದರೆ, ಶೇಕಡ 15ರಷ್ಟು ಹೆಚ್ಚಳವಾಗಿದೆ.

ಕಚ್ಚಾ ಸಾಮಗ್ರಿಗಳ ಲಭ್ಯತೆ, ಮಾನವ ಸಂಪನ್ಮೂಲದ ಲಭ್ಯತೆ, ಬೃಹತ್ ದೇಶೀಯ ಮಾರುಕಟ್ಟೆ, ಸಂಪೂರ್ಣ ತಯಾರಿಕೆ ಮೌಲ್ಯ ಸರಪಳಿಯ ಉಪಸ್ಥಿತಿ ಹಾಗೂ ಸರ್ಕಾರದ ನೆರವಿನ ವಿಷಯದಲ್ಲಿ ಭಾರತವು ಪ್ರಬಲವಾದ ಸಾಮರ್ಥ್ಯಗಳನ್ನು ಹೊಂದಿದೆ. ಹತ್ತಿ, ಉಣ್ಣೆ ರೇಷ್ಮೆ ಮತ್ತು ಸೆಣಬಿನಂತಹ ಕಚ್ಚಾ ಸಾಮಗ್ರಿಗಳು ಹಾಗೂ ನುರಿತ ಕಾರ್ಯಪಡೆಯ ಹೇರಳವಾದ ಲಭ್ಯತೆಯು ಭಾರತವನ್ನು ಜಾಗತಿಕ ಮಾರುಕಟ್ಟೆಯ ಮೂಲವಸ್ತುಗಳ ಪ್ರಧಾನ ಕೇಂದ್ರವನ್ನಾಗಿ ಮಾಡಿದೆ. ಜವಳಿ ವಲಯವು ಹತ್ತಿಯ ವಿಷಯದಲ್ಲಿ ಅತ್ಯಂತ ಪ್ರಬಲವಾಗಿದ್ದು, ದೇಶದಲ್ಲಿ ಒಟ್ಟು ಗಿರಣಿ ನೂಲಿನ ಬಳಕೆಯ ಶೇಕಡ 65ಕ್ಕಿಂತ ಹೆಚ್ಚಿನ ಪಾಲನ್ನು ಹೊಂದಿದೆ. ಭಾರತವು ಜವಳಿ ದಾರ ಮತ್ತು ನೂಲುಗಳ ಜಾಗತಿಕ ಉತ್ಪಾದನೆಯ ಸುಮಾರು ಶೇಕಡ 14ರಷ್ಟು ಪಾಲನ್ನು ಹೊಂದಿದೆ.


ರಾಜ್ಯದ ಹಲವು ಪ್ರೋತ್ಸಾಹಕಗಳೂ ಸೇರಿದಂತೆ ಕೇಂದ್ರ ಸರ್ಕಾರವು ನೀಡಿದ ಒಟ್ಟಾರೆ ನೆರವಿನಿಂದಾಗಿ, ಕೌಶಲ್ಯಾಭಿವೃದ್ಧಿಗಾಗಿ ರೂ.1,300 ಕೋಟಿ ಸಮರ್ಥ ಯೋಜನೆ ಹಾಗೂ ಬಟ್ಟೆ ಮತ್ತು ಸಿದ್ಧ ಉಡುಪು (made ups) ಗಳಿಗಾಗಿ ರೂ.6000 ಕೋಟಿ ಪ್ಯಾಕೇಜ್ ಅನ್ನು ಒಳಗೊಂಡು, ಜವಳಿ ಮತ್ತು ಉಡುಪು ವಲಯದಲ್ಲಿ ಸರ್ವಾಂಗೀಣವಾದ ಬೆಳವಣಿಗೆಯನ್ನು ಕಾಣಬಹುದೆಂದು ನಿರೀಕ್ಷಿಸಲಾಗಿದೆ.

### 1.2 ಕರ್ನಾಟಕ ಮಾರುಕಟ್ಟೆಯ ಚಿತ್ರಣ

ರಾಷ್ಟ್ರದ ಬೆಳವಣಿಗೆಯನ್ನು ಸಾಕಷ್ಟು ಎತ್ತರಕ್ಕೆ ಕೊಂಡೊಯ್ಯುವ ಮೂಲಕ, ಕರ್ನಾಟಕವು ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ರಾಜ್ಯಗಳ ಪೈಕಿ ಒಂದಾಗಿದೆ. ಜಾಗತಿಕ ಮಾರುಕಟ್ಟೆ ಆಧಾರಿತ ಆರ್ಥಿಕತೆಯು 189 ಬಿಲಿಯನ್ ಅಮೇರಿಕನ್ ಡಾಲರ್ ನೊಂದಿಗೆ ಪ್ರತಿ ವರ್ಷ ಶೇ. 7.6ರಷ್ಟು ಬೆಳೆಯುತ್ತಿದ್ದು, ರಾಜ್ಯವು, ರಾಷ್ಟ್ರದಲ್ಲಿ ಉನ್ನತ – ತಂತ್ರಜ್ಞಾನದಿಂದ ಕೈಗಾರಿಕೀಕರಣಗೊಂಡ ಪ್ರಮುಖ ರಾಜ್ಯಗಳ ಪೈಕಿ ಒಂದೆಂಬಂತೆ ತನ್ನ ಉತ್ಕೃಷ್ಟತೆಯನ್ನು ಹೆಚ್ಚಿಸಲು ಈಗಾಗಲೇ ಹಲವು ಉಪಕ್ರಮಗಳನ್ನು ಕೈಗೊಂಡಿದೆ.

| ಕರ್ನಾಟಕದಲ್ಲಿ ಜವಳಿ ಕೈಗಾರಿಕೆಯ ಸ್ಥೂಲ ಆರ್ಥಿಕ ಸೂಚಕಗಳು | |
|---|---|
| ಭಾರತದಲ್ಲಿ ಸಿದ್ಧ ಉಡುಪು ಉತ್ಪಾದನೆಯ ಕೊಡುಗೆ | ಶೇ.20 |
| ರಾಜ್ಯ ಜಿಎಸ್‌ಡಿಪಿಗೆ ಕೊಡುಗೆ | ಶೇ.0.50 |
| ಭಾರತದಲ್ಲಿ ಹಿಪ್ಪು ನೇರಳೆ ರೇಷ್ಮೆಗೆ ಕೊಡುಗೆ | ಶೇ.49 |
| ಭಾರತದಲ್ಲಿ ಉಣ್ಣೆ ಉತ್ಪಾದನೆಗೆ ನೀಡಿದ ಕೊಡುಗೆ | ಶೇ.12 |
| ಭಾರತದಲ್ಲಿ ಹತ್ತಿ ಉತ್ಪಾದನೆಗೆ ನೀಡಿದ ಕೊಡುಗೆ | ಶೇ.6 |

ಕರ್ನಾಟಕವು ಅಭಿವೃದ್ಧಿಯ ಮುಂಚೂಣಿಯಲ್ಲಿದ್ದು, ರಾಷ್ಟ್ರದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. ರಾಜ್ಯವು ಹಲವು ಕ್ಷೇತ್ರಗಳಲ್ಲಿ ಪ್ರವರ್ತಕ ರಾಜ್ಯವಾಗಿದ್ದು, ಹಲವು ಆರ್ಥಿಕ ವಲಯಗಳಲ್ಲಿ ನಾಯಕತ್ವದ ಸ್ಥಾನ ಪಡೆದಿದೆ ಹಾಗೂ ನಾವೀನ್ಯತೆ ಮತ್ತು ವಾಣಿಜ್ಯೋದ್ಯಮಕ್ಕೆ ಪ್ರೋತ್ಸಾಹ ತುಂಬುವಂತಹ ವಾತಾವರಣವನ್ನು ನಿರಂತರವಾಗಿ ಪೋಷಿಸುತ್ತಾ ಬಂದಿದೆ. ಕರ್ನಾಟಕವು ಈಗಾಗಲೇ ಜಾಗತಿಕವಾಗಿ ಜವಳಿ ಮತ್ತು ಉಡುಪಿನ ಪ್ರಮುಖ ರಫ್ತುದಾರ ಮತ್ತು ಉತ್ಪಾದಕ ರಾಜ್ಯವಾಗಿ ಅಂತರ್ ರಾಷ್ಟ್ರೀಯ ಛಾಪನ್ನು ಮೂಡಿಸಿದೆ.



ಭಾರತದ ಸಿದ್ಧ ಉಡುಪಿನ ರಾಜಧಾನಿಯಾದ ಕರ್ನಾಟಕವು ಭಾರತದ ಜವಳಿ ಮತ್ತು ಉಡುಪು ಮಾರುಕಟ್ಟೆಯ ಬೆಳವಣಿಗೆಯಲ್ಲಿ ಪ್ರಮುಖ ಕೊಡುಗೆದಾರ ರಾಜ್ಯವಾಗಿ ಗುರುತಿಸಿಕೊಂಡಿದೆ. ರಾಷ್ಟ್ರದ ರಾಷ್ಟ್ರೀಯ ಸಿದ್ಧ ಉಡುಪು ಉತ್ಪಾದನೆಯು ಶೇ.20ರಷ್ಟಿದ್ದು, ಕರ್ನಾಟಕವು ರಾಜ್ಯದ ಕೈಗಾರಿಕಾ ಉತ್ಪನ್ನಕ್ಕೆ ಬಹುತೇಕ ಮೂರನೇ ಎರಡು ಭಾಗದಷ್ಟು ಕೊಡುಗೆ ನೀಡಿದೆ. ರಾಜ್ಯವು ಕಚ್ಚಾ ಸಾಮಗ್ರಿಗಳ ರಫ್ತು ಮಾರಾಟದಲ್ಲಿ ಪ್ರಮುಖ ಪಾಲನ್ನು ಹೊಂದಿದೆ ಹಾಗೂ ಮಾರಾಟದ ಸರಕುಗಳ ರಫ್ತು, ಸಿದ್ಧ ಉಡುಪು ಮತ್ತು ಕೈಮಗ್ಗಗಳ ಕ್ಷೇತ್ರದಲ್ಲಿ ರಾಷ್ಟ್ರದ ರಫ್ತು ಮಾರಾಟಗಳಲ್ಲಿ ಉತ್ತಮ ಪಾಲನ್ನು ಸಹ ಹೊಂದಿದೆ. 2016–17ರ ಅವಧಿಯಲ್ಲಿ ಕರ್ನಾಟಕದ ರಫ್ತು ಮಾರಾಟವು ಸುಮಾರು ರೂ.5,48,890 ಕೋಟಿ ಮೊತ್ತದಷ್ಟಿದ್ದು, ಅದು ರಾಷ್ಟ್ರದ ರಫ್ತು ಮಾರಾಟದಲ್ಲಿ ಶೇ.18.78ರಷ್ಟಾಗುತ್ತದೆ. ಅಲ್ಲದೆ, ರಾಜ್ಯವು ಕಚ್ಚಾ ವಸ್ತುಗಳ ಉತ್ಪಾದನೆಯ ಮೇಲೆ ಹೆಚ್ಚಿನ ಪ್ರಭಾವವನ್ನು ಹೊಂದಿದ್ದು, ಅದು ರಾಷ್ಟ್ರದಲ್ಲಿ ರೇಷ್ಮೆ ಉತ್ಪಾದನೆಯ ಪ್ರಮುಖ ಉತ್ಪಾದಕ ರಾಜ್ಯಗಳ ಪೈಕಿ ಒಂದಾಗಿದೆ. ಇದು ದೇಶದಲ್ಲಿ ಹಿಪ್ಪು ನೇರಳೆ ರೇಷ್ಮೆ ಉತ್ಪಾದನೆಗೆ ಶೇ.49ರಷ್ಟು, ಉಣ್ಣೆ ಉತ್ಪಾದನೆಗೆ ಶೇ.12ರಷ್ಟು ಹಾಗೂ ಹತ್ತಿ ಉತ್ಪಾದನೆಗೆ ಶೇ.6ರಷ್ಟು ಕೊಡುಗೆ ನೀಡುತ್ತಿದೆ.

ಕರ್ನಾಟಕವು ಸಂಪೂರ್ಣ ತಯಾರಿಕೆ ಮೌಲ್ಯ ಸರಪಳಿಯಲ್ಲಿ ಅಂದರೆ, ಸ್ವಾಭಾವಿಕ ಹಾಗೂ ಕೃತಕ ನೂಲು ಉತ್ಪಾದನೆ, ನೂಲುವುದು, ನೇಯುವುದು, ಹೆಣೆಯುವುದು, ಸಂಸ್ಕರಿಸುವುದು, ಉಡುಪು ತಯಾರಿಕೆ, ಸಿದ್ಧ ಉಡುಪುಗಳು ಮತ್ತು ತಾಂತ್ರಿಕ ಜವಳಿ ಉದ್ಯಮಗಳಲ್ಲಿ ಅಪಾರವಾದ ತಯಾರಿಕಾ ಸಾಮರ್ಥ್ಯವನ್ನು ಹೊಂದಿದೆ. ರಾಜ್ಯದಲ್ಲಿ ಸುಮಾರು 3.57 ಲಕ್ಷ ಸ್ಪಿಂಡಲ್ಸ್‌ಗಳ ಒಟ್ಟು ಸಾಮರ್ಥ್ಯ ಹೊಂದಿರುವ 17 ನೂಲು ತಯಾರಿಕಾ ಗಿರಣಿಗಳಿವೆ. ರಾಜ್ಯದಲ್ಲಿ ಗಮನಾರ್ಹ ಪ್ರಮಾಣದಲ್ಲಿ ವಿದ್ಯುತ್‌ಚಾಲಿತ ಮಗ್ಗಗಳಿದ್ದು, ಇಲ್ಲಿ ಸುಮಾರು 1,20,000 ಮಗ್ಗಗಳು ರೇಷ್ಮೆ ಮತ್ತು ಹತ್ತಿಯ ನೇಯ್ಗೆಯಲ್ಲಿ ತೊಡಗಿವೆ. ವಿದ್ಯುತ್‌ಚಾಲಿತ ಮಗ್ಗಗಳು ಮುಖ್ಯವಾಗಿ ಬೆಳಗಾವಿ, ಬಾಗಲಕೋಟೆ, ತುಮಕೂರು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿವೆ. ರಾಜ್ಯವು ಬಿಲ್ಡ್‌ಟೆಕ್, ಕ್ಲೋತ್‌ಟೆಕ್, ಹೋಂಟೆಕ್, ಮೆಡ್‌ಟೆಕ್‌ಗಳಂತಹ ತಾಂತ್ರಿಕ ಜವಳಿ ಉದ್ಯಮಗಳಿಗಾಗಿ ಪ್ರಮುಖ ಮಾರುಕಟ್ಟೆಯ ಸ್ಥಾನಮಾನವನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಮೈಸೂರು, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳು ತಾಂತ್ರಿಕ ಜವಳಿ ಕ್ಷೇತ್ರದ ಉನ್ನತ ಸ್ಥಾನವನ್ನು ಹೊಂದಿದ ನಗರಗಳಾಗಿ ಮತ್ತು ಬೆಳವಣಿಗೆಯ ಆಧಾರಸ್ತಂಭಗಳಾಗಿ ಹೊರಹೊಮ್ಮಿವೆ. ಮೊಟ್ಟಮೊದಲ ಸಮಗ್ರ ಜವಳಿ ಉದ್ಯಮ ಪಾರ್ಕ್ ಅನ್ನು ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲಾಗಿದ್ದು, ಇದು ನೇಯ್ಗೆ, ಸೈಜಿಂಗ್ ಮತ್ತು ನೂಲು ಸುತ್ತುವ ಕಾರ್ಯಗಳ ಮೇಲೆ ಕೇಂದ್ರೀಕೃತವಾದ 85ಯುನಿಟ್‌ಗಳನ್ನು ಹೊಂದಿರುವ 48 ಎಕರೆ ಪ್ರದೇಶವಾಗಿದ್ದು, 7,000 ಜನರಿಗೆ ಉದ್ಯೋಗ ಸೃಜಿಸುವ ನಿರೀಕ್ಷೆ

ಇಟ್ಟುಕೊಳ್ಳಲಾಗಿದೆ. ಕೆಐಎಡಿಬಿಯು ಹಾಸನದಲ್ಲಿ 474.40 ಎಕರೆ ಪ್ರದೇಶ ವ್ಯಾಪ್ತಿಯಲ್ಲಿ ಜವಳಿ ಎಸ್‌ಇಜೆಡ್ ಅನ್ನು ಸ್ಥಾಪಿಸಿದೆ ಮತ್ತು ಇದನ್ನು ಆಗ್ನೇಯ ಏಷಿಯಾ, ಆಫ್ರಿಕಾ, ಮಧ್ಯ ಪ್ರಾಚ್ಯ ಏಷಿಯಾ ಹಾಗೂ ಸಾರ್ಕ್ ರಾಷ್ಟ್ರಗಳಿಗೆ ಒಂದು ಅಂತರರಾಷ್ಟ್ರೀಯ ವ್ಯಾಪಾರ ಕೇಂದ್ರವಾಗಿ ಸೇವೆಯನ್ನು ಒದಗಿಸುವಂತೆ ತಾಂತ್ರಿಕವಾದ ನೆಲೆಯಲ್ಲಿ ಸ್ಥಾಪಿಸಲಾಗಿದೆ. ಅಲ್ಲದೆ, ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಬೈನರಿ ಅಪೆರಲ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಎಂಬ ಗ್ರೀನ್‌ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ ಅನ್ನು ಸ್ಥಾಪಿಸಲಾಗಿದೆ. ಕರ್ನಾಟಕವು ಜವಳಿ ಮತ್ತು ಉಡುಪು ತಯಾರಿಕಾ, ಕಾರ್ಮಿಕರ ಸಾಮರ್ಥ್ಯ ವೃದ್ಧಿಸುವಲ್ಲಿ ಹಾಗೂ ಕೌಶಲ್ಯಗಳನ್ನು ಹೆಚ್ಚಿಸುವಲ್ಲಿ ಮುಂಚೂಣಿಯಲ್ಲಿದೆ. ಕೈಮಗ್ಗ ಮತ್ತು ಜವಳಿ ಇಲಾಖೆಯು ಈವರೆಗೂ 144 ಕೌಶಲ್ಯಾಭಿವೃದ್ಧಿ ಕೇಂದ್ರಗಳಿಗೆ ಹಾಗೂ 168 ಖಾಸಗಿ ತರಬೇತಿ ಕೇಂದ್ರಗಳಿಗೆ ಹಣಕಾಸು ಸೌಲಭ್ಯವನ್ನು ಒದಗಿಸಿದ್ದು, 1,65,200 ಜನರಿಗೆ ತರಬೇತಿ ನೀಡಿದೆ.

### 1.3 ಅಂತರ್ ರಾಜ್ಯ ಮತ್ತು ಅಂತರ್ ರಾಷ್ಟ್ರೀಯ ಭೂಚಿತ್ರಣ ಬದಲಾವಣೆ

ಜಾಗತಿಕ ಜವಳಿ ಮತ್ತು ಉಡುಪು ಕೈಗಾರಿಕೆಯು ಉತ್ಪಾದನಾ ಸ್ಥಳಗಳ ವಿಷಯದಲ್ಲಿ ಒಂದು ರಚನಾತ್ಮಕ ಬದಲಾವಣೆಯನ್ನು ಕಂಡಿದ್ದು ಬಹುತೇಕ ತಯಾರಿಕಾ ಕ್ಷೇತ್ರವು ಇಥಿಯೋಪಿಯ, ವಿಯೆಟ್ನಾಂ, ಬಾಂಗ್ಲಾದೇಶ, ಟರ್ಕಿ ಮತ್ತು ಚೀನಾದಂಥ ರಾಷ್ಟ್ರಗಳ ತಯಾರಿಕಾ ವೆಚ್ಚದ ಸ್ಪರ್ಧಾತ್ಮಕತೆಯ ಕಾರಣದಿಂದಾಗಿ ಅಂತಹ ದೇಶಗಳಿಗೆ ಸ್ಥಳಾಂತರಗೊಂಡಿದೆ. ಅಲ್ಲದೆ, ಹೆಚ್ಚಿನ ಬಂಡವಾಳ ಸಹಾಯಧನ, ಬೆಲೆ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ವಿದ್ಯುತ್ ದರವನ್ನು ಕಡಿಮೆ ಮಾಡುವುದು, ವೇತನ ಪ್ರೋತ್ಸಾಹಕಗಳು, ಮುಂತಾದ ಲಾಭದಾಯಕ ಉತ್ತೇಜನಗಳು ಮತ್ತು ರಿಯಾಯಿತಿಗಳ ಮೂಲಕ ಜವಳಿ ಮತ್ತು ಉಡುಪು ವಲಯದಲ್ಲಿ ಹೂಡಿಕೆಗಳನ್ನು ಸೆಳೆಯಲು ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಜಾರ್ಖಂಡ್ ಮತ್ತು ಇತರೆ ರಾಜ್ಯಗಳಿಂದ ತೀವ್ರ ಸ್ಪರ್ಧೆಯು ಎದುರಾಗುತ್ತಿದ್ದು, ಅಂತರ-ದೇಶೀಯ ಹಾಗೂ ಅಂತರ್ ರಾಷ್ಟ್ರೀಯ ಮಟ್ಟಕ್ಕೆ ಸರಿಸಮಾನವಾಗಿ ಕರ್ನಾಟಕವನ್ನು ತೆಗೆದುಕೊಂಡು ಹೋಗುವುದು ಅತ್ಯಂತ ಅಗತ್ಯವಾಗಿದೆ.

ಆದ್ದರಿಂದ, ಕರ್ನಾಟಕವನ್ನು ಸ್ಪರ್ಧಾತ್ಮಕ ಜವಳಿ ಮತ್ತು ಉಡುಪು ತಯಾರಿಕೆ ಕೇಂದ್ರವನ್ನಾಗಿ, ಉನ್ನತಸ್ಥಾನಕ್ಕೇರಿಸುವ ಗುರಿಯೊಂದಿಗೆ, ರೂ.10,000 ಕೋಟಿ ಮೌಲ್ಯದ ಹೂಡಿಕೆಗಳನ್ನು ಆಕರ್ಷಿಸಲು ನಿರೀಕ್ಷಿಸಿರುವಂತಹ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ (2019–2024) ನೂಲು ತಯಾರಿಸುವ ಗಿರಣಿಗಳಿಗೆ ಬಂಡವಾಳ ಸಹಾಯಧನವನ್ನು ಹೆಚ್ಚಿಸುವುದು, ವಿದ್ಯುತ್‌ಚಾಲಿತ ಮಗ್ಗಗಳು (ಏರ್-ಜೆಟ್ ಮಗ್ಗಗಳು, ರೇಪಿಯರ್ ಮಗ್ಗಗಳು, ವಿದ್ಯುನ್ಮಾನ ಜಕಾರ್ಡ್) ಸಂಸ್ಕರಣಾ ಘಟಕಗಳು, ಸಂಯೋಜಿತ ಘಟಕಗಳು ಮತ್ತು ತಾಂತ್ರಿಕ ಜವಳಿಯನ್ನು ಆಧುನೀಕರಿಸುವುದು; ಬಿ) ಸ್ಪರ್ಧಾತ್ಮಕ ವಿದ್ಯುತ್ ದರ ಮತ್ತು ಅಸಂಪ್ರದಾಯಿಕ/ ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆಯ ಮೇಲೆ ಹೆಚ್ಚುವರಿ ಪ್ರೋತ್ಸಾಹಧನ ನೀಡುವುದು ಮತ್ತು ಸಿ) ಕೌಶಲ್ಯಾಭಿವೃದ್ಧಿ ನೆರವನ್ನು ಹೆಚ್ಚಿಸುವುದು ಸೇರಿದಂತೆ ಹಲವು ಪ್ರಯೋಜನಗಳನ್ನು ಒದಗಿಸುತ್ತದೆ. ಈ ನೀತಿಯು ಮಹಿಳೆಯರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಸೃಜಿಸುವಂಥ ನೂತನ ಜವಳಿ ಮತ್ತು ಸಿದ್ಧ ಉಡುಪು ಘಟಕಗಳಿಗಾಗಿ ವೇತನ ಪ್ರೋತ್ಸಾಹಧನವನ್ನು ನೀಡುವ ಮೂಲಕ ರಾಜ್ಯದಲ್ಲಿ ವೇತನ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದರ ಮೇಲೂ ಸಹ ವಿಶೇಷ ಗಮನವನ್ನು ನೀಡುತ್ತದೆ.

## 2. ಪರಿಭಾಷೆ

ಈ ನೀತಿಯಲ್ಲಿ ಒಳಗೊಳ್ಳುವ ಜವಳಿ ಮತ್ತು ಸಿದ್ಧ ಉಡುಪು ಕೈಗಾರಿಕೆಯು ನೂಲು ತೆಗೆಯುವಿಕೆ, ನೇಯ್ಗೆ ಪೂರ್ವ ಕಾರ್ಯಚಟುವಟಿಕೆಗಳೂ ಒಳಗೊಂಡಂತೆ ನೇಯುವಿಕೆ (ವಿದ್ಯುತ್‌ಚಾಲಿತ ಮಗ್ಗ ಮತ್ತು ಕೈಮಗ್ಗ), ಹೆಣೆಯುವಿಕೆ, ಸಂಸ್ಕರಿಸುವಿಕೆ, ಸಂಯೋಜಿತ ಘಟಕಗಳು, ಸಿದ್ಧ ಉಡುಪು, ತಾಂತ್ರಿಕ ಜವಳಿ, ಜವಳಿ ಯಂತ್ರಗಳ ತಯಾರಿಕೆ ಮತ್ತು ಇತರೆ ಎಲ್ಲಾ ಪೂರಕ ಕಾರ್ಯಚಟುವಟಿಕೆಗಳು ಸೇರಿದಂತೆ ಕೈಗಾರಿಕೆಯ ವಿವಿಧ ಮೌಲ್ಯ ಸರಪಳಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಂಡಿರುವಂತಹ ಎಲ್ಲಾ ಘಟಕಗಳನ್ನು ಒಳಗೊಂಡಿರುತ್ತದೆ.

**ಉದ್ಯಮ:** ಈ ನೀತಿಯ ಅವಧಿಯಲ್ಲಿ ಉದ್ಯಮಗಳನ್ನು ಸೂಕ್ಷ್ಮ, ಸಣ್ಣ, ಮಧ್ಯಮ (ಎಂಎಸ್‌ಎಂಇ) ಉದ್ಯಮವೆಂದು, ಬೃಹತ್ ಮಹಾ ಮತ್ತು ಆ್ಯಂಕರ್ ಉದ್ಯಮಗಳೆಂದು ವರ್ಗೀಕರಿಸಲಾಗಿದ್ದು, ಜವಳಿ ಮತ್ತು ಉಡುಪುಗಳಿಗೆ ಸಂಬಂಧಿಸಿದಂತೆ ಇವುಗಳನ್ನು ಪ್ರತ್ಯೇಕವಾಗಿ ಕೆಳಗೆ ನೀಡಲಾದ ಕೋಷ್ಟಕದಲ್ಲಿ ಪರಿಭಾಷಿಸಲಾಗಿದೆ:

| ಉದ್ಯಮ | ಜವಳಿ | ಸಿದ್ಧ ಉಡುಪು |
|---|---|---|
| ಎಂಎಸ್ಎಂಇ | ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳು: ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006ರ ಅನುಸಾರ, ತಯಾರಿಕೆ ಉದ್ಯಮಗಳನ್ನು ಸ್ಥಾವರ ಮತ್ತು ಯಂತ್ರಗಳ ಮೇಲೆ ಮಾಡುವ ಹೂಡಿಕೆಯ ಆಧಾರದ ಮೇಲೆ ಪರಿಭಾಷಿಸಲಾಗಿದೆ ಮತ್ತು ಈ ಮುಂದಿನಂತೆ ವರ್ಗೀಕರಿಸಲಾಗಿದೆ:<br>• ಸೂಕ್ಷ್ಮ ಉದ್ಯಮ – ರೂ.25 ಲಕ್ಷ ಗಳವರೆಗೆ ಹೂಡಿಕೆ.<br>• ಸಣ್ಣ ಉದ್ಯಮಗಳು – ರೂ.25 ಲಕ್ಷಗಳಿಗಿಂತ ಹೆಚ್ಚು ಹಾಗೂ ರೂ.5 ಕೋಟಿಗಳವರೆಗೆ ಹೂಡಿಕೆ.<br>• ಮಧ್ಯಮ ಉದ್ಯಮಗಳು – ರೂ.5 ಕೋಟಿಗಿಂತಲೂ ಹೆಚ್ಚು ಹಾಗೂ ರೂ.10 ಕೋಟಿಗಳವರೆಗೆ ಹೂಡಿಕೆ. | ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳು: ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006ರ ಅನುಸಾರ, ತಯಾರಿಕೆ ಉದ್ಯಮಗಳನ್ನು ಸ್ಥಾವರ ಮತ್ತು ಯಂತ್ರಗಳ ಮೇಲೆ ಮಾಡುವ ಹೂಡಿಕೆಯ ಆಧಾರದ ಮೇಲೆ ಪರಿಭಾಷಿಸಲಾಗಿದೆ ಮತ್ತು ಈ ಮುಂದಿನಂತೆ ವರ್ಗೀಕರಿಸಲಾಗಿದೆ:<br>• ಸೂಕ್ಷ್ಮ ಉದ್ಯಮ – ರೂ.25 ಲಕ್ಷಗಳವರೆಗೆ ಹೂಡಿಕೆ.<br>• ಸಣ್ಣ ಉದ್ಯಮಗಳು – ರೂ.25 ಲಕ್ಷಗಳಿಗಿಂತ ಹೆಚ್ಚು ಹಾಗೂ ರೂ.5 ಕೋಟಿಗಳವರೆಗೆ ಹೂಡಿಕೆ.<br>• ಮಧ್ಯಮ ಉದ್ಯಮಗಳು – ರೂ.5 ಕೋಟಿಗಿಂತಲೂ ಹೆಚ್ಚು ಹಾಗೂ ರೂ.10 ಕೋಟಿಗಳವರೆಗೆ ಹೂಡಿಕೆ. |
| ಬೃಹತ್ | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮವೆಂದು ವರ್ಗೀಕರಿಸಿರದ ಹಾಗೂ ರೂ.300 ಕೋಟಿಗಳ ವರೆಗೆ ಹೂಡಿಕೆ ಮಾಡಿರುವಂಥ ಕೈಗಾರಿಕಾ ಘಟಕವನ್ನು ಬೃಹತ್ ಉದ್ಯಮವೆಂದು ವರ್ಗೀಕರಿಸತಕ್ಕದ್ದು.<br>ಉದ್ಯೋಗ: ಮೊದಲ ರೂ.100 ಕೋಟಿಗಳ ಹೂಡಿಕೆಗಾಗಿ ಕನಿಷ್ಠ 200 ಜನರಿಗೆ ಉದ್ಯೋಗಾವಕಾಶ ಹಾಗೂ ಪ್ರಮಾಣಾನು ಸಾರವಾಗಿ ಪ್ರತಿ ಹೆಚ್ಚುವರಿ ರೂ.100 ಕೋಟಿಗಳ ಹೂಡಿಕೆಗೆ ಹೆಚ್ಚುವರಿ 75 ಜನರಿಗೆ ಉದ್ಯೋಗಾವಕಾಶ. | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮವೆಂದು ವರ್ಗೀಕರಿಸಿರದ ಹಾಗೂ ರೂ.200 ಕೋಟಿಗಳವರೆಗೆ ಹೂಡಿಕೆ ಮಾಡಿರುವಂಥ ಕೈಗಾರಿಕಾ ಘಟಕವನ್ನು ಬೃಹತ್ ಉದ್ಯಮವೆಂದು ವರ್ಗೀಕರಿಸತಕ್ಕದ್ದು.<br>ಉದ್ಯೋಗ: ಮೊದಲ ರೂ.100 ಕೋಟಿ ಹೂಡಿಕೆಗೆ ಕನಿಷ್ಠ 2000 ಜನರಿಗೆ ಉದ್ಯೋಗಾವಕಾಶ ಹಾಗೂ ಪ್ರಮಾಣಾನುಸಾರವಾಗಿ ಪ್ರತಿ ಹೆಚ್ಚುವರಿ ರೂ.100 ಕೋಟಿಗಳ ಹೂಡಿಕೆಗೆ ಹೆಚ್ಚುವರಿ 1000 ಜನರಿಗೆ ಉದ್ಯೋಗಾವಕಾಶ. |
| ಮೆಗಾ | ರೂ.300 ಕೋಟಿಗಳಿಗಿಂತಲೂ ಹೆಚ್ಚಿನ ಮೊತ್ತವನ್ನು ಸ್ಥಿರಾಸ್ತಿಗಳಲ್ಲಿ ಹೂಡಿಕೆ ಮಾಡಿರುವ ಯೋಜನೆಗಳನ್ನು ಮಹಾ ಉದ್ಯಮಗಳೆಂದು ವರ್ಗೀಕರಿಸತಕ್ಕದ್ದು.<br>ಉದ್ಯೋಗ: ಮೊದಲ ರೂ.300 ಕೋಟಿಗಳ ಹೂಡಿಕೆಗೆ ಕನಿಷ್ಠ 350 ಜನರಿಗೆ ಉದ್ಯೋಗಾವಕಾಶ ಹಾಗೂ ಪ್ರಮಾಣಾನು ಸಾರವಾಗಿ ಪ್ರತಿ ಹೆಚ್ಚುವರಿ ರೂ.100 ಕೋಟಿಗಳ ಹೂಡಿಕೆಗೆ ಹೆಚ್ಚುವರಿ 75 ಜನರಿಗೆ ಉದ್ಯೋಗಾವಕಾಶ. | ರೂ.200 ಕೋಟಿಗಳಿಗಿಂತಲೂ ಹೆಚ್ಚಿನ ಮೊತ್ತವನ್ನು ಸ್ಥಿರಾಸ್ತಿಗಳಲ್ಲಿ ಹೂಡಿಕೆ ಮಾಡಿರುವ ಯೋಜನೆಗಳನ್ನು ಮಹಾ ಉದ್ಯಮಗಳು ಎಂದು ವರ್ಗೀಕರಿಸತಕ್ಕದ್ದು.<br>ಉದ್ಯೋಗ: ಮೊದಲ ರೂ.200 ಕೋಟಿಗಳ ಹೂಡಿಕೆಗೆ ಕನಿಷ್ಠ 3000 ಜನರಿಗೆ ಉದ್ಯೋಗಾವಕಾಶ ಹಾಗೂ ಪ್ರಮಾಣಾನು ಸಾರವಾಗಿ ಪ್ರತಿ ಹೆಚ್ಚುವರಿ ರೂ.100 ಕೋಟಿಗಳ ಹೂಡಿಕೆಗೆ ಹೆಚ್ಚುವರಿ 1000 ಜನರಿಗೆ ಉದ್ಯೋಗಾವಕಾಶ. |
| ಆಧಾರ ಉದ್ಯಮ (ಆ್ಯಂಕರ್ ಇಂಡಸ್ಟ್ರಿ) | ಈ ನೀತಿಯು ಅಧಿಸೂಚಿತವಾಗುವವರೆಗೆ, ಯಾವುದೇ ಇನ್ನಿತರ ಜವಳಿ ಘಟಕ ಸ್ಥಾಪಿತವಾಗಿರದ ತಾಲ್ಲೂಕಿನಲ್ಲಿ ಆ ರೀತಿಯ ಜವಳಿ ಘಟಕವು ಮೊದಲನೆಯದ್ದಾಗಿದ್ದರೆ, ಪ್ರಧಾನ ಉದ್ಯಮ / ಕೈಗಾರಿಕೆ ಎಂದು ವರ್ಗೀಕರಿಸಬೇಕಾದ ಘಟಕವು ರೂ.100 ಕೋಟಿಗಳ ಕನಿಷ್ಠ ಹೂಡಿಕೆಯನ್ನು ಹೊಂದಿರತಕ್ಕದ್ದು ಮತ್ತು ಕನಿಷ್ಠಪಕ್ಷ ಘಟಕವು 200 ನೌಕರರನ್ನು ನೇರವಾಗಿ ನೇಮಕ ಮಾಡಿಕೊಳ್ಳತಕ್ಕದ್ದು. | ಈ ನೀತಿಯು ಅಧಿಸೂಚಿತವಾಗುವವರೆಗೆ, ಯಾವುದೇ ಇನ್ನಿತರ ಸಿದ್ಧ ಉಡುಪು ಘಟಕವು ಸ್ಥಾಪಿತವಾಗಿರದ ತಾಲ್ಲೂಕಿನಲ್ಲಿ ಆ ರೀತಿಯ ಸಿದ್ಧ ಉಡುಪು ಘಟಕವು ಮೊದಲನೆಯದಾಗಿದ್ದರೆ, ಪ್ರಧಾನ ಉದ್ಯಮ/ಕೈಗಾರಿಕೆ ಎಂದು ವರ್ಗೀಕರಿಸಬೇಕಾದ ಘಟಕವು ರೂ.50 ಕೋಟಿಗಳ ಕನಿಷ್ಠ ಹೂಡಿಕೆಯನ್ನು ಹೊಂದಿರತಕ್ಕದ್ದು ಮತ್ತು ಘಟಕವು ಕನಿಷ್ಠಪಕ್ಷ 1000 ನೌಕರರನ್ನು ನೇರವಾಗಿ ನೇಮಕ ಮಾಡಿಕೊಳ್ಳತಕ್ಕದ್ದು. |

ಎ) **ಪ್ರಸಕ್ತ ಯೋಜನೆ:** ಪ್ರಸಕ್ತ ಯೋಜನೆ ಎಂದರೆ, ಈ ನೀತಿಯ ಘೋಷಣೆಯಾಗುವುದಕ್ಕೂ ಮುಂಚೆಯೇ ಇರುವ ಯಾವುದೇ ಯೋಜನೆ ಮತ್ತು ಈ ನೀತಿಯ ಕಾಲಾವಧಿಯಲ್ಲಿ ವಿಸ್ತರಣೆ/ ವೈವಿಧ್ಯೀಕರಣ/ ಆಧುನೀಕರಣದ ಅಡಿಯಲ್ಲಿ ಬರುವ ಯಾವುದೇ ಯೋಜನೆ.

ಬಿ) **ನೂತನ ಯೋಜನೆ:** ನೂತನ ಯೋಜನೆ ಎಂದರೆ, ಈ ನೀತಿಯ ಘೋಷಣೆಯ ದಿನಾಂಕದಂದು ಅಥವಾ ದಿನಾಂಕದ ನಂತರ ಸ್ಥಿರಾಸ್ತಿಗಳ ಮೇಲೆ ಹೂಡಿಕೆ ಮಾಡುವ ಘಟಕ. ಈ ನೀತಿಯ ಘೋಷಣೆಯ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿರುವಂಥ ಘಟಕವನ್ನು ಹಾಗೂ ನೂತನ ಜವಳಿ ನೀತಿ 2013–2018ರ ಮೇರೆಗೆ ಪೈಪ್‌ಲೈನ್ ಘಟಕವೆಂಬುದಾಗಿ ಅರ್ಹತೆ ಪಡೆಯುವುದಕ್ಕೆ ನಿಗದಿಪಡಿಸಲಾದ ಷರತ್ತುಗಳನ್ನು ಪೂರ್ಣಗೊಳಿಸದ ಘಟಕವನ್ನು ಇದು ಒಳಗೊಂಡಿರುತ್ತದೆ.

ಸಿ) **ಪೈಪ್‌ಲೈನ್ ಯೋಜನೆ:** ಪೈಪ್‌ಲೈನ್ ಯೋಜನೆ ಎಂದರೆ, ಎರಡು ನೀತಿಗಳ ಕಾಲಾವಧಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆ ಅಥವಾ ಪೈಪ್‌ಲೈನ್ ಯೋಜನೆಗಳನ್ನು ಕಾರ್ಯನಿರ್ವಹಣಾ ಕೈಪಿಡಿಯಲ್ಲಿ ಪರಿಭಾಷಿಸಲಾಗಿರುತ್ತದೆ.

ಡಿ) **ಯೋಜನಾ ವೆಚ್ಚ/ ಸ್ಥಿರಾಸ್ತಿಗಳು:** ಈ ನೀತಿಯ ಮೇರೆಗೆ ಪ್ರೋತ್ಸಾಹಕಗಳನ್ನು ಲೆಕ್ಕ ಮಾಡುವ ಉದ್ದೇಶಗಳಿಗಾಗಿ, ಯೋಜನಾ ವೆಚ್ಚ/ ಸ್ಥಿರಾಸ್ತಿಗಳನ್ನು ಯೋಜನೆಗಾಗಿ ಸೃಜಿಸಲಾದ ಆಸ್ತಿಗಳೆಂದು ಪರಿಭಾಷಿಸಲಾಗುತ್ತದೆ ಮತ್ತು ಇದು, ಕಾರ್ಖಾನೆಯ ಕಟ್ಟಡ, ಭೂ ವೆಚ್ಚ (ಭೂ ಅಭಿವೃದ್ಧಿಯನ್ನು ಹೊರತುಪಡಿಸಿ) ಸೇರಿದಂತೆ ಮೂಲ ಸೌಕರ್ಯ, ಸ್ಥಾವರ ಮತ್ತು ಯಂತ್ರಗಳು, ಇಟಿಪಿ ಮತ್ತು ಸಾರಿಗೆಸಹಿತ ಇತರ ಉತ್ಪಾದಕ ಸ್ವತ್ತುಗಳು, ವಿದ್ಯುತ್ ಕಂಬ ನಿಲ್ಲಿಸುವುದು ಮತ್ತು ವಿದ್ಯುದೀಕರಣ ಹಾಗೂ ತಾವೇ ಸ್ವಯಂ (ಶೇಕಡ 50ರಷ್ಟು ತಮ್ಮ ಕಾರ್ಮಿಕರು/ ನೌಕರರಿಗೆ) ವಸತಿ ಗೃಹ/ ಮನೆಗಳ ನಿರ್ಮಾಣವೂ ಸಹ ಒಳಗೊಳ್ಳುತ್ತದೆ.

ಇ) **ವಿಸ್ತರಣಾ ಯೋಜನೆ:** ಜವಳಿ ಮತ್ತು ಉಡುಪು ವಲಯದ ಹಾಲಿ ಇರುವ ಘಟಕಗಳು ಅದೇ ವ್ಯವಹಾರ ಅಥವಾ ಉಪ–ವಲಯದಲ್ಲಿ ಘಟಕವನ್ನು ವಿಸ್ತರಿಸಲು ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ಹೂಡಿಕೆ ಮಾಡಿದ ಸಂದರ್ಭದಲ್ಲಿ ಅವುಗಳನ್ನು ಸಾಮರ್ಥ್ಯ ವಿಸ್ತರಿಸಿಕೊಳ್ಳುತ್ತಿರುವ ಘಟಕಗಳೆಂದು ಪರಿಗಣಿಸಲಾಗುವುದು.

ಎಫ್) **ವೈವಿಧ್ಯೀಕರಣ ಯೋಜನೆ:** ಜವಳಿ ಮತ್ತು ಉಡುಪಿನ ವಲಯದ ಹಾಲಿ ಇರುವ ಘಟಕಗಳು ಜವಳಿ ಮೌಲ್ಯ ಸರಣಿಯೊಳಗೆ ಹಿಮ್ಮುಖ ಅಥವಾ ಮುಮ್ಮುಖವಾಗಿ ಸಂಯೋಜನೆಗೊಂಡ ಸಂದರ್ಭದಲ್ಲಿ, ಅವುಗಳನ್ನು ವೈವಿಧ್ಯೀಕರಣವನ್ನು ಒಳಗೊಳ್ಳುತ್ತಿರುವ ಘಟಕಗಳೆಂದು ಪರಿಗಣಿಸಲಾಗುವುದು. ಸದರಿ ಸಂಯೋಜನೆಯು ಹಿಮ್ಮುಖ ಅಥವಾ ಮುಮ್ಮುಖ ಸರಣಿಯೊಳಗಿನ (ಫಾರ್ವರ್ಡ್ ಅಥವಾ ಬ್ಯಾಕ್ವರ್ಡ್ ಚೈನ್) ತಕ್ಷಣದ ಚಟುವಟಿಕೆಯಾಗಿರಬಹುದು ಅಥವಾ ಮೌಲ್ಯ ಸರಣಿಯ ಯಾವುದೇ ಚಟುವಟಿಕೆಯಾಗಿರಬಹುದು.

ಜಿ) **ಆಧುನೀಕರಣ/ ತಂತ್ರಜ್ಞಾನ ಉನ್ನತೀಕರಣ:** ಜವಳಿ ಮತ್ತು ಸಿದ್ಧ ಉಡುಪು ವಲಯದ ಹಾಲಿ ಇರುವ ಘಟಕಗಳು ನಿರ್ದಿಷ್ಟ ವಿಧದ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಹೊಂದಿದ್ದು ಹಾಲಿ ಇರುವ ಸ್ಥಾವರ ಮತ್ತು ಯಂತ್ರೋಪಕರಣಗಳ ಬದಲಿಯಾಗಿ ಸ್ಥಾವರ ಮತ್ತು ಯಂತ್ರೋಪಕರಣಗಳ ಉನ್ನತೀಕರಿಸಿದ ಆವೃತ್ತಿಯನ್ನು (ಭಾರತ ಸರ್ಕಾರದ ಟಿ.ಯು.ಎಫ್.ಎಸ್. ಯೋಜನೆಯಲ್ಲಿ ನಿರ್ದಿಷ್ಟಪಡಿಸಿರುವಂತೆ) ಅಳವಡಿಸಿರುವ ಸಂದರ್ಭದಲ್ಲಿ ಅವು ಆಧುನೀಕರಣ/ ತಂತ್ರಜ್ಞಾನದ ಉನ್ನತೀಕರಣವನ್ನು ಒಳಗೊಳ್ಳುತ್ತಿರುವ ಘಟಕಗಳೆಂದು ಪರಿಗಣಿಸಲಾಗುವುದು. ಅಲ್ಲದೆ, ಲಾಳಿ ರಹಿತ ರೇಪಿಯರ್ ಮಗ್ಗ, ಏರ್ಜೆಟ್ ಮಗ್ಗಗಳು, ವಿದ್ಯುನ್ಮಾನ ಜಕಾರ್ಡ್ ಮತ್ತು ಆಧುನಿಕ ತಂತ್ರಜ್ಞಾನ ಆಧಾರಿತ ಯಾವುದೇ ಮಗ್ಗವನ್ನು ಅಳವಡಿಸುವುದು.

ಎಚ್) **ಜವಳಿ ಉದ್ಯಮಗಳು:** ಸಿದ್ಧ ಉಡುಪುಗಳು ಮತ್ತು ಉಡುಪು ವಲಯವನ್ನು ಹೊರತುಪಡಿಸಿದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

ಐ) **ಸಿದ್ಧ ಉಡುಪು:** ಸಿದ್ಧ ಉಡುಪು ಮತ್ತು ಉಡುಪುಗಳನ್ನು ತಯಾರಿಸುವ ಘಟಕಗಳನ್ನು ಸಿದ್ಧ ಉಡುಪು ಘಟಕಗಳೆಂದು ವರ್ಗೀಕರಿಸಲಾಗುತ್ತದೆ.

ಜೆ) **ಥ್ರಸ್ಟ್ ಸೆಕ್ಟರ್:** ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುವ ಮತ್ತು ರಾಜ್ಯದಲ್ಲಿ ಸಮಗ್ರ ಜವಳಿ ಮತ್ತು ಉಡುಪು ಪರಿಸರ ವ್ಯವಸ್ಥೆಯನ್ನು ಸೃಜಿಸುವ ಉದ್ದೇಶದೊಂದಿಗೆ, ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–2024ರಲ್ಲಿನ ಮಧ್ಯಸ್ಥಿಕೆ ಕ್ರಮಗಳಿಗಾಗಿ ಈ ಕೆಳಕಂಡ ವಲಯಗಳನ್ನು ಥ್ರಸ್ಟ್ ಸೆಕ್ಟರ್‌ಗಳೆಂದು ಗುರುತಿಸಲಾಗಿದೆ ಹಾಗೂ ಅವು ಈ ಕೆಳಕಂಡಂತಿವೆ:

- i. ನೂಲುವಿಕೆ
- ii. ನೇಯುವಿಕೆ
- iii. ಸಂಯೋಜಿತ ಘಟಕಗಳು
- iv. ಸಂಸ್ಕರಣೆ
- v. ತಾಂತ್ರಿಕ ಜವಳಿಗಳು


ಕೆ) **ಇತರೆ ಕ್ಷೇತ್ರಗಳು:** ಥ್ರಸ್ಟ್ ಸೆಕ್ಟರ್‌ಗಳೆಂದು ಪರಿಭಾಷಿಸಿರದ ಜವಳಿ ಉದ್ಯಮದ ಇತರೆ ಕ್ಷೇತ್ರಗಳನ್ನು ಇದು ಒಳಗೊಂಡಿದೆ.

ಎಲ್) **ಸೈಜಿಂಗ್:** ನೂಲು ಸುತ್ತುವ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ನೂಲಿನ ಮೇಲ್ಭಾಗದಲ್ಲಿ ಅಂಟಿನ ಲೇಪವನ್ನು ಲೇಪಿಸುವ ಪ್ರಕ್ರಿಯೆಯನ್ನು ಮಾಡುವ ಘಟಕಗಳನ್ನು ಸೈಜಿಂಗ್ ಘಟಕಗಳು ಎಂದು ವರ್ಗೀಕರಿಸಲಾಗುತ್ತದೆ.

ಎಂ) **ತಾಂತ್ರಿಕ ಉನ್ನತೀಕರಣ ನಿಧಿ (ಟಿಯುಎಫ್) ಯೋಜನೆ:** ಕೇಂದ್ರ ಸರ್ಕಾರದ ತಿದ್ದುಪಡಿಯಾದ ತಾಂತ್ರಿಕ ಉನ್ನತೀಕರಣ ನಿಧಿಗಳ ಯೋಜನೆಯನ್ನು (ಎ–ಟಿಯುಎಫ್‌ಎಸ್) ಅಥವಾ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಯಾವುದೇ ಯೋಜನೆ.

ಎನ್) **ವಲಯ ವರ್ಗೀಕರಣವು ಈ ಕೆಳಕಂಡಂತಿದೆ:**

- i. **ವಲಯ 1:** ಸಮಗ್ರ ಕಲ್ಯಾಣ ಕರ್ನಾಟಕ ಪ್ರದೇಶ
- ii. **ವಲಯ 2:** ಕಲ್ಯಾಣ ಕರ್ನಾಟಕವಲ್ಲದ ಪ್ರದೇಶದಲ್ಲಿರುವ ನಗರ ಪಾಲಿಕೆಗಳು, ಜಿಲ್ಲಾ ಕೇಂದ್ರಗಳನ್ನು ಹೊರತುಪಡಿಸಿದ ಎಲ್ಲಾ ಪ್ರದೇಶಗಳು.
- iii. **ವಲಯ 3:** ಕಲ್ಯಾಣ ಕರ್ನಾಟಕವಲ್ಲದ ಪ್ರದೇಶಗಳಲ್ಲಿರುವ ಎಲ್ಲಾ ನಗರ ಪಾಲಿಕೆಗಳು, ಜಿಲ್ಲಾ ಕೇಂದ್ರಗಳು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು.
- iv. **ವಲಯ 4:** ಬೆಂಗಳೂರು ನಗರ.







ಸಮಗ್ರ ಕಲ್ಯಾಣ ಕರ್ನಾಟಕ ಪ್ರದೇಶ

## 3. ಮುನ್ನೋಟ, ಧ್ಯೇಯೋದ್ದೇಶ, ಕಾರ್ಯತಂತ್ರ ಮತ್ತು ಮಾರ್ಗ

### 3.1 ಮುನ್ನೋಟ

ರಾಜ್ಯದ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯು, ರಾಷ್ಟ್ರದಲ್ಲಿರುವ ಜವಳಿ ಮತ್ತು ಉಡುಪು ವಲಯದಲ್ಲಿ ಕರ್ನಾಟಕವನ್ನು ಪ್ರಮುಖ ತಾಣವನ್ನಾಗಿ ಮಾಡುವ ಹಾಗೂ ಜವಳಿ ಮೌಲ್ಯ ಸರಪಳಿಯನ್ನು ಸುವರ್ಣ ಮೌಲ್ಯ ಸರಪಳಿಯನ್ನಾಗಿ ಮಾಡುವ ಗುರಿಯನ್ನು ಹೊಂದಿದೆ. ಈ ನೀತಿಯು ರಾಜ್ಯದಲ್ಲಿರುವ ಜವಳಿ ಕೈಗಾರಿಕೆಗೆ ಉತ್ತೇಜನ ನೀಡುತ್ತದೆ ಹಾಗೂ ಮುಂದಿನ 5 ವರ್ಷಗಳಲ್ಲಿ 5 ಲಕ್ಷ ನೂತನ ಉದ್ಯೋಗಗಳನ್ನು ಸೃಜಿಸುವ ಹಾಗೂ ರೂ.10,000 ಕೋಟಿ ಮೌಲ್ಯದ ಹೂಡಿಕೆಗಳನ್ನು ಸೆಳೆಯುವ ಗುರಿಗಳನ್ನು ಹೊಂದಿದೆ.

### 3.2 ಧ್ಯೇಯೋದ್ದೇಶ

ಭಾರತದ ಸಿದ್ಧ ಉಡುಪಿನ ರಾಜಧಾನಿ ಎಂಬ ಕರ್ನಾಟಕದ ಸ್ಥಾನವನ್ನು ಉಳಿಸಿಕೊಳ್ಳುವುದು ಮತ್ತು ಬಂಡವಾಳ ಕ್ರೋಢೀಕರಣ, ತಂತ್ರಜ್ಞಾನದ ವರ್ಗಾವಣೆ, ವಿಶ್ವ ದರ್ಜೆಯ ಮೂಲಸೌಕರ್ಯ ಮತ್ತು ಕೌಶಲ್ಯ ಉನ್ನತೀಕರಣದ ಮೂಲಕ ಸಮಗ್ರ ಜವಳಿ ಮೌಲ್ಯ ಸರಪಳಿಯಲ್ಲಿ ಉನ್ನತ ಹಾಗೂ ಸುಸ್ಥಿರ ಬೆಳವಣಿಗೆಯನ್ನು ಸಾಧಿಸುವುದು.

### 3.3 ಕಾರ್ಯತಂತ್ರಗಳು

ಎ) ನೂಲು ಉತ್ಪನ್ನಗಳಿಂದ ಫ್ಯಾಷನ್ ಉತ್ಪನ್ನಗಳವರೆಗೆ ಸಮಗ್ರ ಜವಳಿ ಮೌಲ್ಯ ಸರಪಳಿಯಲ್ಲಿ ಬೆಳವಣಿಗೆಯನ್ನು ಚುರುಕುಗೊಳಿಸುವುದು ಮತ್ತು ತಯಾರಿಕೆ ವೆಚ್ಚ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು.

ಬಿ) ರಾಜ್ಯದಲ್ಲಿ ಅಂತರರಾಷ್ಟ್ರೀಯ ಸ್ಪರ್ಧಾತ್ಮಕ ಜವಳಿ ಉದ್ಯಮವನ್ನು ಸೃಜಿಸಲು ನೂಲುವಿಕೆ, ನೇಯುವಿಕೆ (ರೇಪಿಯರ್ ಮಗ್ಗ, ಏರ್ಜೆಟ್ ಮಗ್ಗಗಳು ಮತ್ತು ವಿದ್ಯುನ್ಮಾನ ಜಕಾರ್ಡ್) ಸಂಯೋಜಿತ ಘಟಕಗಳು, ಸಂಸ್ಕರಣೆ ಮತ್ತು ತಾಂತ್ರಿಕ ಜವಳಿಗಳನ್ನು ಈ ನೀತಿಯ ಒತ್ತು ನೀಡುವ ವಲಯಗಳೆಂಬುದಾಗಿ ಅವುಗಳ ಮೇಲೆ ವಿಶೇಷ ಗಮನವನ್ನು ನೀಡುವುದು.

ಸಿ) ಜವಳಿ ಮೌಲ್ಯ ಸರಪಳಿಯ ಪ್ರತಿಯೊಂದು ವಿಭಾಗದಲ್ಲಿ ಕರ್ನಾಟಕವನ್ನು ಕೌಶಲ್ಯ ಸಮೃದ್ಧವಾದ ರಾಜ್ಯವನ್ನಾಗಿ ಮಾಡುವುದು ಹಾಗೂ ಕೈಗಾರಿಕೆಯ ಅಗತ್ಯತಾನುಸಾರ ಕೌಶಲ್ಯ, ಪುನರ್‌ಕೌಶಲ್ಯ ಮತ್ತು ಕೌಶಲ್ಯಗಳ ಉನ್ನತೀಕರಣಕ್ಕಾಗಿ ಉನ್ನತ ತಂತ್ರಜ್ಞಾನದ ಆಧುನಿಕ ಕೌಶಲ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು.

ಡಿ) ವಿಶ್ವದರ್ಜೆಯ ಸೌಲಭ್ಯಗಳ ತಯಾರಿಕೆಗಾಗಿ ಮತ್ತು ಜೆಡ್‌ಎಲ್‌ಡಿ ತಂತ್ರಜ್ಞಾನವನ್ನು ಉತ್ತೇಜಿಸುವುದಕ್ಕಾಗಿ ಬೃಹತ್ ಪ್ರಮಾಣದ ಹೂಡಿಕೆಗಳನ್ನು ಆಕರ್ಷಿಸುವ ಮೂಲಕ ಜವಳಿ ಮೌಲ್ಯ ಸರಪಳಿಯ ಪ್ರತಿಯೊಂದು ಹಂತದಲ್ಲಿ "ಶೂನ್ಯ ಪರಿಣಾಮ; ಶೂನ್ಯ ದೋಷ" ಎಂಬ ಧ್ಯೇಯ ವಾಕ್ಯವನ್ನು ಮನವರಿಕೆ ಮಾಡಿಕೊಳ್ಳುವುದು.

ಇ) ಕೈಮಗ್ಗ ರಫ್ತುಗಳ ಪಾಲುದಾರಿಕೆಯನ್ನು ಹೆಚ್ಚಿಸುವುದು ಮತ್ತು ವಿನ್ಯಾಸ, ಉತ್ಪನ್ನದ ವೈವಿಧ್ಯೀಕರಣ, ಬ್ರಾಂಡ್ ಮಾಡುವಿಕೆ, ಮಾರುಕಟ್ಟೆ ಹಾಗೂ ವಿಶಿಷ್ಟ ಅಂತರ್ ರಾಷ್ಟ್ರೀಯ ಮಾರುಕಟ್ಟೆಗಳಿಗೆ ಕೈಮಗ್ಗ ಉತ್ಪನ್ನಗಳನ್ನು ಪೂರೈಸುವುದಕ್ಕೆ ಬೆಂಬಲಿಸುವುದು.

ಎಫ್) ಕರ್ನಾಟಕವನ್ನು ತಾಂತ್ರಿಕ ಜವಳಿಗಳ ಪ್ರಮುಖ ತಯಾರಿಕಾ ಹಬ್ ಎಂಬ ಮತ್ತು ನಿವ್ವಳ ರಫ್ತುದಾರ ರಾಜ್ಯವೆಂಬ ಸ್ಥಾನಕ್ಕೆ ತರುವುದು.

ಜಿ) ಕರ್ನಾಟಕವನ್ನು ಚಿಲ್ಲರೆ ವ್ಯಾಪಾರದ ತಾಣವನ್ನಾಗಿಸಿ, ರಾಜ್ಯದಲ್ಲಿನ ಮಾರಾಟ ಮಳಿಗೆಗಳು ಹಾಗೂ ಅಂತರರಾಷ್ಟ್ರೀಯ ಉಡುಪು ಚಿಲ್ಲರೆ ಮಳಿಗೆಗಳ ಬೆಳವಣಿಗೆಗೆ ಉತ್ತೇಜನ ನೀಡುವುದು.

### 3.4 ಮಾರ್ಗ

ಕೈಮಗ್ಗ ಮತ್ತು ಜವಳಿ ಇಲಾಖೆಯು ಕೇಂದ್ರೀಕೃತ ಹಾಗೂ ಸಮನ್ವಯ ಪ್ರಯತ್ನಗಳೊಂದಿಗೆ ಈ ನೀತಿಯನ್ನು ಅನುಷ್ಠಾನಗೊಳಿಸತಕ್ಕದ್ದು. ಈ ನೀತಿಯನ್ನು ಜಾರಿಗೆ ತರಲು, ಕೈಮಗ್ಗಗಳು ಮತ್ತು ಜವಳಿ ಇಲಾಖೆಯು ನೀತಿಯ ಅನುಷ್ಠಾನಕ್ಕಾಗಿ ಕಾಲಕಾಲಕ್ಕೆ ಕೈಗಾರಿಕೆಯ ವಿವಿಧ ಸಮಿತಿಗಳು ಮತ್ತು ಹಿತಾಸಕ್ತಿದಾರರೊಂದಿಗೆ ಸಮನ್ವಯ ಸಾಧಿಸಬೇಕು. ಪ್ರತಿಯೊಂದು ಜಿಲ್ಲೆಯಲ್ಲಿರುವ ಸ್ಥಳೀಯ ಸಂಸ್ಥೆಗಳು ಆಯಾ ಜಿಲ್ಲೆಯೊಳಗೆ ಈ ನೀತಿಯನ್ನು ಉತ್ತೇಜಿಸಬೇಕು ಹಾಗೂ ಆ ಬಗ್ಗೆ ಜಾಗೃತಿ ಮೂಡಿಸಬೇಕು.

## 4. ಹಸ್ತ ಕ್ಷೇಪಕ್ಕಾಗಿ ಒತ್ತು ನೀಡಬೇಕಾದ ಕ್ಷೇತ್ರಗಳು (ಥ್ರಸ್ಟ್ ಸೆಕ್ಟರ್)

ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುವ ಮತ್ತು ರಾಜ್ಯದಲ್ಲಿ ಸಮಗ್ರ ಜವಳಿ ಮತ್ತು ಉಡುಪು ಪರ್ಯಾವರಣ ವ್ಯವಸ್ಥೆಯನ್ನು ಸೃಜಿಸುವ ಉದ್ದೇಶದೊಂದಿಗೆ, ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–2024ರಲ್ಲಿ ಈ ಮುಂದಿನ ವಲಯಗಳನ್ನು ಮಧ್ಯಸ್ಥಿಕೆ ಕ್ರಮಗಳಿಗೆ ಒತ್ತು ನೀಡಬೇಕಾದ ವಲಯಗಳೆಂದು ಗುರುತಿಸಲಾಗಿದೆ ಹಾಗೂ ಅವು ಈ ಮುಂದಿನವುಗಳನ್ನು ಒಳಗೊಂಡಿವೆ:

ಎ) **ನೂಲುವಿಕೆ (ಸ್ಪಿನ್ನಿಂಗ್)** – ಹತ್ತಿಯನ್ನು ನೂಲು ತಯಾರಿಕೆಗೆ ಪರಿವರ್ತಿಸಲು ಉತ್ತೇಜನ ನೀಡುವ ಉದ್ದೇಶದಿಂದ ಹೆಚ್ಚಿನ ಕೌಂಟ್ ಹಾಗೂ ಕಾಂಪ್ಯಾಕ್ಟ್ ನೂಲನ್ನು ತಯಾರಿಸುವ ನೂಲು ತಯಾರಿಕೆ ಮಿಲ್‌ಗಳಲ್ಲಿ ಹೂಡಿಕೆ ಮಾಡುವ ಘಟಕಗಳಿಗೆ ವಿಶೇಷ ಗಮನವನ್ನು ಹರಿಸುವುದು.

ಬಿ) **ನೇಯುವಿಕೆ (ವೀವಿಂಗ್)** – ರೇಪಿಯರ್ ಮಗ್ಗ, ಏರ್ಜೆಟ್ ಮಗ್ಗಗಳು ಮತ್ತು ಎಲೆಕ್ಟ್ರಾನಿಕ್ ಜಕಾರ್ಡ್ ಗಳಲ್ಲಿ ಹೂಡಿಕೆ ಮಾಡುವ ಘಟಕಗಳಿಗೆ ವಿಶೇಷ ಗಮನ ನೀಡುವುದು.

ಸಿ) **ಸಂಯೋಜಿತ ಘಟಕಗಳು** – ಒಬ್ಬ ಉದ್ಯಮಿಯು ಒಂದೇ ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚು ಜವಳಿಗಳ ಮೌಲ್ಯ ಸರಪಳಿ ಕಾರ್ಯಚಟುವಟಿಕೆಯನ್ನು ಹೊಂದಿರುವ ಜವಳಿ ಮತ್ತು ಸಿದ್ಧ ಉಡುಪು ಘಟಕಗಳನ್ನು ಸಂಯೋಜಿತ ಘಟಕಗಳೆಂದು ವರ್ಗೀಕರಿಸಲಾಗುವುದು.

ಡಿ) **ಸಂಸ್ಕರಣಾ ಘಟಕಗಳು** – ನೂಲಿಗೆ ಬಣ್ಣ ಹಾಕುವ ಸೌಲಭ್ಯ, ನೂಲು ಸ್ವಚ್ಛಗೊಳಿಸುವಿಕೆ, ಬ್ಲೀಚ್ ಮಾಡುವಿಕೆ, ನೂಲಿಗೆ ಹೊಳಪು ನೀಡುವಿಕೆ, ಬಣ್ಣ ಹಾಕುವಿಕೆ, ಸಿದ್ಧಗೊಳಿಸುವಿಕೆ ಮತ್ತು ಪ್ರಿಂಟಿಂಗ್ ಪ್ರಕ್ರಿಯೆಯನ್ನು ಒಳಗೊಂಡ ಘಟಕಗಳು.

ಇ) **ತಾಂತ್ರಿಕ ಜವಳಿ** – ಜವಳಿ ಸಾಮಗ್ರಿಗಳು ಮತ್ತು ಉತ್ಪನ್ನಗಳನ್ನು ಕಲಾತ್ಮಕ ಅಥವಾ ಅಲಂಕಾರಿಕ ವೈಶಿಷ್ಟತೆಗಳಿಗೆ ಬಳಕೆ ಮಾಡುವುದರ ಬದಲಾಗಿ ಅವುಗಳನ್ನು ಪ್ರಾಥಮಿಕವಾಗಿ ಅವುಗಳ ತಾಂತ್ರಿಕ ಕಾರ್ಯ ಮತ್ತು ಕಾರ್ಯಾತ್ಮಕ ಸ್ವರೂಪಗಳಿಗಾಗಿ ಬಳಕೆ ಮಾಡುವ ಜವಳಿ ಬಟ್ಟೆಗಳು ಮತ್ತು ಉತ್ಪನ್ನಗಳೆಂದು ವ್ಯಾಖ್ಯಾನಿಸಲಾಗಿದೆ. ಉತ್ಪನ್ನದ ಗುಣಲಕ್ಷಣಗಳು, ಕಾರ್ಯಾತ್ಮಕ ಅಗತ್ಯತೆಗಳು ಹಾಗೂ ಅಂತಿಮ ಬಳಕೆಯನ್ನಾಧರಿಸಿ, ತಾಂತ್ರಿಕ ಜವಳಿಗಳ ಪ್ರಮುಖ ವೈವಿಧ್ಯತೆಗಳನ್ನು ಬಳಕೆ–ಅನ್ವಯ 13 ವಲಯಗಳಾಗಿ ವರ್ಗೀಕರಿಸಲಾಗಿದೆ.

- ಆಗ್ರೋಟೆಕ್ (ಕೃಷಿ, ತೋಟಗಾರಿಕೆ ಮತ್ತು ಅರಣ್ಯ)
- ಬಿಲ್ಡ್ ಟೆಕ್ (ಕಟ್ಟಡ ಮತ್ತು ನಿರ್ಮಾಣ)
- ಕ್ಲೋತ್‌ಟೆಕ್ (ಶೂಗಳು ಹಾಗೂ ಬಟ್ಟೆಯ ತಾಂತ್ರಿಕ ಘಟಕಾಂಶಗಳು)
- ಜಿಯೋಟೆಕ್ (ಜಿಯೋ–ಜವಳಿಗಳು ಮತ್ತು ಸಿವಿಲ್ ಇಂಜಿನಿಯರಿಂಗ್)
- ಹೋಮ್‌ಟೆಕ್ (ಪೀಠೋಪಕರಣ, ಗೃಹ ಬಳಕೆ ಜವಳಿ ಮತ್ತು ನೆಲಹಾಸುಗಳ ಘಟಕಾಂಶಗಳು)

- ಇಂಡ್‌ಟೆಕ್ (ಶೋಧನೆ, ಸ್ವಚ್ಛಗೊಳಿಸುವಿಕೆ ಮತ್ತು ಇತರ ಕೈಗಾರಿಕಾ ಬಳಕೆಗಳು)
- ಮೆಡ್‌ಟೆಕ್ (ನೈರ್ಮಲ್ಯ ಮತ್ತು ವೈದ್ಯಕೀಯ)
- ಮೊಬೈಲ್ ಟೆಕ್ (ಆಟೋಮೊಬೈಲ್ಸ್, ಹಡಗು, ರೈಲ್ವೆ ಮತ್ತು ವೈಮಾಂತರಿಕ್ಷ)
- ಇಕೋಟೆಕ್ (ಪರಿಸರ ಸಂರಕ್ಷಣೆ)
- ಪ್ಯಾಕ್‌ಟೆಕ್ (ಪ್ಯಾಕೇಜಿಂಗ್)
- ಪ್ರೋಟೆಕ್ (ವೈಯಕ್ತಿಕ ಹಾಗೂ ಸ್ವತ್ತು ಸಂರಕ್ಷಣೆ)
- ಸ್ಪೋರ್ಟ್ ಟೆಕ್ (ಕ್ರೀಡೆ ಮತ್ತು ವಿರಾಮ)
- ಡಿಫೆನ್ಸ್ ಟೆಕ್ (ರಕ್ಷಣಾ ಬಳಕೆಗಾಗಿ ಜವಳಿ)
- ಭಾರತ ಸರ್ಕಾರದ ಜವಳಿ ಮಂತ್ರಾಲಯವು ಕಾಲಕಾಲಕ್ಕೆ ಅಧಿಸೂಚಿಸಿದಂತಹ ಯಾವುದೇ ಇತರೆ ಉತ್ಪನ್ನ ಮೇಲೆ ತಿಳಿಸಿದ ಥ್ರಸ್ಟ್ ಸೆಕ್ಟರ್‌ಗಳಿಗೆ ಸಂಬಂಧಿಸಿದ ವಿವಿಧ ಉಪಕ್ರಮಗಳ ವಿವರಗಳನ್ನು ವಿಭಾಗ 6ರಲ್ಲಿ ವಿವರಿಸಲಾಗಿದೆ. ಎಚ್‌ಎಲ್‌ಸಿಯು ಅಗತ್ಯತಾನುಸಾರ ಒತ್ತು ನೀಡಬೇಕಾದ ವಲಯಗಳನ್ನು ಮಾರ್ಪಾಟು/ ತಿದ್ದುಪಡಿ ಮಾಡಬಹುದು.

## 5. ನೀತಿಯ ಗುರಿಗಳು

ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯು, ನೀತಿ ಅವಧಿಯಲ್ಲಿ ಅಂದರೆ 2019 ರಿಂದ 2024ರ ಅವಧಿಯಲ್ಲಿ ರೂ.10,000 ಕೋಟಿ ಮೊತ್ತದ ಮಹತ್ವಾಕಾಂಕ್ಷೆಯ ಹೂಡಿಕೆಯನ್ನು ವಿವರಿಸುತ್ತದೆ ಮತ್ತು ಸರಾಸರಿ 5,00,000 ಜನರಿಗೆ ಉದ್ಯೋಗ ಸೃಜಿಸುವ ಗುರಿ ಹೊಂದಿದೆ.

| ವರ್ಷ | 2019-20 | 2020-21 | 2021-2022 | 2022-2023 | 2023-2024 | ಒಟ್ಟು |
|---|---|---|---|---|---|---|
| ಹೂಡಿಕೆ (ರೂ. ಕೋಟಿಗಳಲ್ಲಿ) | 1,000 | 1,500 | 2,000 | 3,000 | 2,500 | 10,000 |
| ಉದ್ಯೋಗ | 50,000 | 75,000 | 1,00,000 | 1,50,000 | 1,25,000 | 5,00,000 |

## 6. ವಲಯವಾರು ಉಪಕ್ರಮಗಳು

### 6.1 ಹತ್ತಿಯಿಂದ ಬೀಜವನ್ನು ಬೇರ್ಪಡಿಸುವುದು (ಜಿನ್ನಿಂಗ್)





ಉತ್ತರ ಕರ್ನಾಟಕದಲ್ಲಿ ಹತ್ತಿಯನ್ನು ಹೇರಳವಾಗಿ ಬೆಳೆಯಲಾಗುತ್ತಿದ್ದು, ಪ್ರತಿವರ್ಷ ಸರಿಸುಮಾರು 40 ಲಕ್ಷ ಮೂಟೆಗಳಷ್ಟು ಹತ್ತಿಯನ್ನು ಉತ್ಪಾದಿಸಲಾಗುತ್ತಿದೆ. ಆದರೆ, ಬೆಳೆಯಲಾದ ಹತ್ತಿಯಲ್ಲಿ ಶೇ.10ರಷ್ಟನ್ನು ಮಾತ್ರ ರಾಜ್ಯದ ನೂಲುವ ಗಿರಣಿಗಳು ಬಳಕೆ ಮಾಡಿಕೊಳ್ಳುತ್ತಿದ್ದು, ಉಳಿದ ಶೇ.90ರಷ್ಟು ಹತ್ತಿಯನ್ನು ನೆರೆ ರಾಜ್ಯಗಳ ನೂಲುವ ಗಿರಣಿಗಳಿಗೆ ಮಾರಲಾಗುತ್ತಿದೆ. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ 850 ಜಿನ್ನಿಂಗ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ನೂತನ ನೀತಿಯು ರಾಜ್ಯದಲ್ಲಿ ಜಿನ್ನಿಂಗ್ ಘಟಕಗಳ ಬೆಳವಣಿಗೆಗೆ ಮತ್ತು ಅವುಗಳ ಅಭಿವೃದ್ಧಿಗೆ ನೆರವು ನೀಡುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ.

ನೂತನ ನೀತಿಯ ಅಡಿಯಲ್ಲಿ ಜಿನ್ನಿಂಗ್‌ಗಾಗಿ ಬೆಂಬಲಿಸಬೇಕಾದ ನಿರ್ದಿಷ್ಟ ಮಧ್ಯಸ್ಥಿಕೆ ಕ್ರಮಗಳು ಈ ಮುಂದಿನಂತಿವೆ:

ಎ) ರಾಜ್ಯದಲ್ಲಿ ಬೆಳೆಯಲಾಗುವ ಉದ್ದನೆ ಎಳೆಯ ಹತ್ತಿಯ ಬೆಳವಣಿಗೆಗೆ ನೆರವು ಮತ್ತು ಪ್ರೋತ್ಸಾಹ.

ಬಿ) ಹತ್ತಿ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಪ್ರಕ್ರಿಯೆಯಲ್ಲಿ ಬಳಸಲಾಗುವ ತಂತ್ರಜ್ಞಾನದ ಆಧುನೀಕರಣಕ್ಕೆ ನೆರವು.

ಸಿ) ಜಿನ್ನಿಂಗ್‌ಗಾಗಿ ಅಗತ್ಯತೆ ಆಧಾರಿತ ಕೌಶಲ್ಯಗಳ ಅಭಿವೃದ್ಧಿಗೆ ಕೌಶಲ್ಯಾಭಿವೃದ್ಧಿಯ ನೆರವು.

## 6.2 ನೂಲಿನ ಗಿರಣಿ (ಸ್ಪಿನ್ನಿಂಗ್)



ಕರ್ನಾಟಕ ರಾಜ್ಯವು ದೇಶದಲ್ಲಿಯೇ ಹತ್ತಿ ಬೆಳೆಯುವ ಪ್ರಮುಖ ರಾಜ್ಯವಾಗಿದ್ದು, ದೇಶದಲ್ಲಿ ಉತ್ಪಾದನೆಯಾಗುವ ಒಟ್ಟು ಹತ್ತಿಯ ಶೇ.6ರಷ್ಟು ಹತ್ತಿಯನ್ನು ಕರ್ನಾಟಕ ರಾಜ್ಯವು ಉತ್ಪಾದಿಸುತ್ತಿದೆ. ದೇಶದಲ್ಲಿ ಉತ್ಪಾದನೆಯಾದ ಒಟ್ಟು ಹತ್ತಿಯ ಶೇ.6ರಷ್ಟು ಉತ್ಪಾದನೆ ಕರ್ನಾಟಕದ್ದಾದರೂ, ಇಲ್ಲಿ ಒಟ್ಟು 3.57 ಲಕ್ಷ ಕದಿರುಗಳಷ್ಟು (Spindles) ಸಾಮರ್ಥ್ಯವಿರುವ 17 ಸ್ಪಿನ್ನಿಂಗ್ ಗಿರಣಿಗಳು ಮಾತ್ರ ರಾಜ್ಯದಲ್ಲಿವೆ. ರಾಜ್ಯದ ಸಹಕಾರಿ ವಲಯದಲ್ಲಿ 11 ಸಹಕಾರಿ ಸ್ಪಿನ್ನಿಂಗ್ ಗಿರಣಿಗಳಿದ್ದು, ಅವುಗಳಲ್ಲಿ ಕೇವಲ 3 ಸಹಕಾರಿ ಸ್ಪಿನ್ನಿಂಗ್ ಗಿರಣಿಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಹತ್ತಿ ಗಿರಣಿ ವಲಯವು ವಿವಿಧ ಕಾರಣಗಳಿಂದಾಗಿ ತೀವ್ರತರವಾದ ಸಮಸ್ಯೆಗಳನ್ನು ಎದುರಿಸುತ್ತಿದೆ. ಹಳೆಯ ಯಂತ್ರೋಪಕರಣಗಳ ಬಳಕೆ, ಕೌಶಲ್ಯಯುಕ್ತ ಕಾರ್ಮಿಕರು ಲಭ್ಯವಿಲ್ಲದಿರುವಿಕೆ ಮತ್ತು ವಿದ್ಯುತ್ ವೆಚ್ಚ ಹೆಚ್ಚಾಗಿರುವಿಕೆ (ಹೆಚ್ಚಿನ ಯೂನಿಟ್ ವೆಚ್ಚಗಳು + ಉತ್ಪಾದನೆಯನ್ನು ಹೆಚ್ಚಿಸಲು ಡೀಸೆಲ್ ಜೆನ್‌ಸೆಟ್‌ಗಳ ಬಳಕೆ) ಮುಂತಾದವು ಈ ಸಮಸ್ಯೆಗೆ ಕಾರಣಗಳಾಗಿವೆ. ಆದ್ದರಿಂದ, ಸ್ಪಿನ್ನಿಂಗ್ ವಲಯವನ್ನು ಪುನರುಜ್ಜೀವನಗೊಳಿಸುವ ಸಲುವಾಗಿ, ನೂತನ ಉತ್ಪಾದನಾ ತಂತ್ರಗಳನ್ನು ಅಳವಡಿಸಿಕೊಳ್ಳಲು, ಆಧುನಿಕ ತಂತ್ರಜ್ಞಾನವನ್ನು ಬಳಕೆಗೆ ತರುವುದು ತುರ್ತು ಅಗತ್ಯವಾಗಿದೆ. ಇದರಿಂದ, ಸ್ಪಿನ್ನಿಂಗ್ ಗಿರಣಿಗಳ ಉತ್ಪಾದಕತೆಯು ಹೆಚ್ಚುತ್ತದೆ ಮತ್ತು ನೂಲಿನ ವೆಚ್ಚವೂ ಕಡಿಮೆಯಾಗುತ್ತದೆ. ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–2024 ನೀತಿಯು ಸ್ಪಿನ್ನಿಂಗ್ ಅನ್ನು ಒತ್ತು (Thrust) ನೀಡುವ ಕ್ಷೇತ್ರವೆಂದು ಗುರುತಿಸಲ್ಪಟ್ಟಿದ್ದು, ರಾಜ್ಯದ ಆರ್ಥಿಕತೆಯ ಮುಂಚೂಣಿಗೆ ಸ್ಪಿನ್ನಿಂಗ್ ಕೈಗಾರಿಕೆಯನ್ನು ತರಲು ಈ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ:

ಎ) ಕಡಿಮೆ ವಿದ್ಯುತ್ ಬಳಕೆಯು ಸಾಧ್ಯವಾಗುವಂತೆ ಮಾಡಲು ಸ್ಪಿನ್ನಿಂಗ್ ಗಿರಣಿಗಳನ್ನು ಆಧುನಿಕ ಕದಿರು ತಂತ್ರಜ್ಞಾನಗಳಿಂದ ಆಧುನೀಕರಿಸಲು ಬಂಡವಾಳ ಸಹಾಯಧನ ನೀಡುವುದು.

ಬಿ) ರಿಯಾಯಿತಿ ದರಗಳನ್ನು ನೀಡುವುದರ ಮೂಲಕ ಸಾಂಪ್ರದಾಯಿಕವಲ್ಲದ ವಿದ್ಯುತ್ ಬಳಸುವುದಕ್ಕೆ ಘಟಕಗಳನ್ನು ಪ್ರೋತ್ಸಾಹಿಸುವುದು.

ಸಿ) ಸ್ಪಿನ್ನಿಂಗ್‌ಗಾಗಿ ಅಗತ್ಯತೆ–ಆಧಾರಿತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಕೌಶಲ್ಯಾಭಿವೃದ್ಧಿ ನೆರವು ನೀಡುವುದು.

## 6.3 ನೇಯ್ಗೆ (ಕೈಮಗ್ಗಗಳು ಮತ್ತು ವಿದ್ಯುತ್ ಮಗ್ಗಗಳು)





ಕರ್ನಾಟಕದಲ್ಲಿ ಕೈಮಗ್ಗ ವಲಯವು ವಿಶೇಷವಾಗಿ ರೇಷ್ಮೆ ಸೀರೆಗಳು ಮತ್ತು ಸಾಂಪ್ರದಾಯಿಕ ಕೈಮಗ್ಗ ಸೀರೆಗಳು ಹಾಗೂ ಉಡುಪುಗಳನ್ನು ತಯಾರಿಸುವಲ್ಲಿ ಕೆಲವು ಪ್ರಮುಖ ಭೌಗೋಳಿಕ ಗುರುತುಗಳನ್ನು ಮೂಡಿಸಲು ಸಮರ್ಥವಾಗಿದೆ. ಕೈಮಗ್ಗ ವಲಯವು ಮಹಿಳೆಯರಿಗೆ ಅಪಾರ ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸಿದ್ದು, ಅದು ಪರಂಪರಾಗತ ಕೌಶಲ್ಯಗಳು ಹಾಗೂ ಗ್ರಾಮೀಣ ಜನರ ಹಾಗೂ ಕಲಾರಸಿಕರ ಪ್ರೋತ್ಸಾಹದಿಂದ ಹುಲುಸಾಗಿ ಬೆಳೆದಿದೆ. ಕರ್ನಾಟಕದಲ್ಲಿ ಸುಮಾರು 40,000 ಕೈಮಗ್ಗಗಳಿದ್ದು, ಅವು ರೇಷ್ಮೆ, ಹತ್ತಿ ಮತ್ತು ಉಣ್ಣೆ ನೇಯ್ಗೆಯಲ್ಲಿ ತೊಡಗಿಕೊಂಡಿವೆ. ಕರ್ನಾಟಕದಲ್ಲಿ ಕೈಮಗ್ಗ ವಲಯವು ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿಯನ್ನು ಹೆಚ್ಚಿಸಿದೆ. 2017–18ನೇ ಸಾಲಿನಲ್ಲಿ ರೂ.608.11 ಕೋಟಿಗಳಷ್ಟು ಮೌಲ್ಯದ ಕೈಮಗ್ಗ ಉತ್ಪನ್ನಗಳನ್ನು ರಫ್ತು ಮಾಡಲಾಗಿದೆ. ಆದಾಗ್ಯೂ, ಉತ್ಪನ್ನಗಳ ಅಗತ್ಯ ಪ್ರಮಾಣ ಮತ್ತು ಮಾರುಕಟ್ಟೆ ಸೌಲಭ್ಯಕ್ಕೆ ಆಧುನೀಕರಣ ಮತ್ತು ಸಾಲ ಲಭ್ಯತೆಯ ಕೊರತೆಯಿಂದಾಗಿ ಕೈಮಗ್ಗ ವಲಯಕ್ಕೆ ನೂತನ ನೀತಿಯ ಮೂಲಕ ಸಾಮರ್ಥ್ಯವನ್ನು ಹೆಚ್ಚಿಸುವಂತಹ ನೆರವು ನೀಡಬೇಕಾದ ಅಗತ್ಯವಿದೆ. ಈ ನೂತನ ನೀತಿಯ ಅವಧಿಯಲ್ಲಿ ಯೋಜಿಸಲಾದ ಒಟ್ಟು ಮೊತ್ತದ ಶೇ.5ರಷ್ಟು ಮೊತ್ತವನ್ನು ನೆರವು ನೀಡುವ ಉದ್ದೇಶಕ್ಕಾಗಿ ಮೀಸಲಿರಿಸಬೇಕು. ಕೈಮಗ್ಗ ವಲಯಕ್ಕೆ ಸಂಬಂಧಿಸಿದಂತೆ ನೂತನ ನೀತಿಯ ಅಡಿಯಲ್ಲಿ ನೆರವು ನೀಡಬೇಕಾದ ನಿರ್ದಿಷ್ಟ ಮಧ್ಯಸ್ಥಿಕೆ ಕ್ರಮಗಳು ಈ ಮುಂದಿನಂತಿವೆ:

ಎ) ವಿಭಿನ್ನ ಅಂತರ ರಾಷ್ಟ್ರೀಯ ಮಾರುಕಟ್ಟೆಗಳಿಗೆ ಕೈಮಗ್ಗ ರಫ್ತುಗಳ ಪಾಲನ್ನು ಹೆಚ್ಚಿಸಲು ವ್ಯಾಪಕವಾದ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸುವುದು.

ಬಿ) ಉತ್ಪನ್ನಗಳ ಮಾರ್ಕೆಟಿಂಗ್, ಬ್ರ್ಯಾಂಡಿಂಗ್ ಮತ್ತು ಡಿಸೈನಿಂಗ್‌ಗಾಗಿ ಸಾಮರ್ಥ್ಯ ವರ್ಧನಾ ನೆರವು.

ಸಿ) ಕೈಮಗ್ಗ ಉತ್ಪನ್ನಗಳನ್ನು ಇ–ವಾಣಿಜ್ಯ ವೇದಿಕೆಯಲ್ಲಿ ಪ್ರದರ್ಶಿಸುವುದು ಮತ್ತು ನೇರ ಮಾರಾಟಕ್ಕೂ ಸಹ ನೆರವು ನೀಡುವುದು.

ಡಿ) ಆಧುನಿಕ ಪರಿಸರ ಅಂಗೀಕಾರಾರ್ಹ ತ್ಯಾಜ್ಯ ನೀರು ನಿರ್ವಹಣಾ ತಂತ್ರಗಳೊಂದಿಗೆ ಸಾಮಾನ್ಯ ಸೌಲಭ್ಯ ಕೇಂದ್ರಗಳು/ ಡೈಯಿಂಗ್ ಘಟಕಗಳನ್ನು ಸ್ಥಾಪಿಸಲು ಬೆಂಬಲ ನೀಡುವುದು.

ಇ) ಕೈಮಗ್ಗ ವಲಯಕ್ಕಾಗಿ ಅಗತ್ಯ ಮೂಲ ಕೌಶಲ್ಯಗಳನ್ನು ಒದಗಿಸಲು ಕೌಶಾಲ್ಯಾಭಿವೃದ್ಧಿ ಬೆಂಬಲ ಮತ್ತು ತರಬೇತಿ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುವುದು.

ಎಫ್) ನಿಯಮಿತ ಮೇಳಗಳು ಮತ್ತು ಅಂಗಡಿಗಳ ಮೂಲಕ ಮಾರಾಟ ಉತ್ಪಾದನೆಗಳಿಗೆ ಮಾರಾಟಗಾರರು ಹಾಗೂ ಕೊಳ್ಳುವವರ ನಡುವಿನ ಕೊಂಡಿಗಳನ್ನು ಬೆಸೆಯಲು ಕೇಂದ್ರೀಕೃತ ಮಾರುಕಟ್ಟೆಗಳನ್ನು ಸೃಜಿಸುವುದು.

ಜಿ) ಕೈಮಗ್ಗಗಳ ನಾಮ ಮೌಲ್ಯವನ್ನು ಸಾಧ್ಯವಾದಷ್ಟು ಮಟ್ಟಿಗೆ ವಾಣಿಜ್ಯಾತ್ಮಕವಾಗಿ ಬಳಸಿಕೊಳ್ಳುವುದು.

ಕರ್ನಾಟಕವು ಗಮನಾರ್ಹ ಪ್ರಮಾಣದ ವಿದ್ಯುತ್ ಮಗ್ಗಗಳನ್ನು ಹೊಂದಿದೆ. ಇಲ್ಲಿ ಸುಮಾರು 1,20,000 ಮಗ್ಗಗಳು, ರೇಷ್ಮೆ ಮತ್ತು ಹತ್ತಿ ನೇಯ್ಗೆಯಲ್ಲಿ ತೊಡಗಿವೆ. ವಿದ್ಯುತ್ ಮಗ್ಗಗಳು ಮುಖ್ಯವಾಗಿ ಬೆಳಗಾವಿ, ಬಾಗಲಕೋಟೆ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿವೆ. ವಿದ್ಯುತ್ ಮಗ್ಗಗಳ ಉತ್ಪಾದನಾ ತಂತ್ರಜ್ಞಾನಗಳನ್ನು ಆಧುನೀಕರಿಸುವ ಸಲುವಾಗಿ ಆ ವಲಯವನ್ನು ಬೆಂಬಲಿಸಿ, ಬಲಪಡಿಸಬೇಕಾಗಿದೆ. ಹಾಗೆ ಮಾಡುವುದರಿಂದ ಅವುಗಳು ಅಗತ್ಯ ಪ್ರಮಾಣದ ಉತ್ತಮ ಗುಣಮಟ್ಟದ ಬಟ್ಟೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ.

ಎ) ಆಧುನೀಕರಣಕ್ಕೆ ಬಂಡವಾಳ ಸಹಾಯಧನ ಬೆಂಬಲ:

- ಸಾಮಾನ್ಯ ವಿದ್ಯುತ್ ಮಗ್ಗವನ್ನು ಅರೆ–ಸ್ವಯಂಚಾಲಿತ ಶಟಲ್ ಮಗ್ಗಕ್ಕೆ ಪರಿವರ್ತಿಸುವುದು.
- ಅರೆ–ಸ್ವಯಂಚಾಲಿತ ಶಟಲ್ ಮಗ್ಗವನ್ನು ಶಟಲ್‌ರಹಿತ ರೇಪಿಯರ್ ಮಗ್ಗಕ್ಕೆ (ಪರಿವರ್ತಿಸುವುದು) ಬದಲಾಯಿಸುವುದು.
- ಸಾಮಾನ್ಯ ವಿದ್ಯುತ್ ಮಗ್ಗವನ್ನು ಶಟಲ್ ರಹಿತ ರೇಪಿಯರ್ ಮಗ್ಗಕ್ಕೆ (ಪರಿವರ್ತಿಸುವುದು) ಬದಲಾಯಿಸುವುದು.

ಬಿ) ಆಫ್–ಲೂಮ್ ಫ್ಯಾಬ್ರಿಕ್ ವೈಂಡಿಂಗ್ ತಂತ್ರಜ್ಞಾನ ಮತ್ತು ನೆಯ್ಗೆ ಗಿರಣಿಗಳ ಸಾಮಗ್ರಿ ನಿರ್ವಹಣೆಯಲ್ಲಿ ಅತ್ಯಾಧುನಿಕ ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ನೆರವು ನೀಡುವುದು.

ಸಿ) ಜಕಾರ್ಡ್ (ಚಿತ್ರನೇಯ್ಗೆ) ಮಗ್ಗ ಮತ್ತು ಡಾಬಿ ಮಗ್ಗಗಳಿಗಾಗಿ ವಿನ್ಯಾಸಗಳನ್ನು ಸೃಜಿಸುವುದಕ್ಕೆ ನೇಕಾರರನ್ನು ತರಬೇತುಗೊಳಿಸಲು ಕೌಶಲ್ಯಾಭಿವೃದ್ಧಿಯ ನೆರವು ನೀಡುವುದು.

ಡಿ) ಸೈಜಿಂಗ್ ಘಟಕಗಳನ್ನು ಉತ್ತೇಜಿಸುವುದು ಮತ್ತು ಸಮೂಹ ಆಧಾರಿತ ಚಟುವಟಿಕೆಗಳ (ವಾರ್ಪಿಂಗ್, ಸೈಜಿಂಗ್ ಇತ್ಯಾದಿ) ಬಗ್ಗೆ ಗಮನ ಹರಿಸುವುದು.

ಇ) ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸುವಿಕೆ, ದಕ್ಷತೆ, ಉತ್ಪಾದಕತೆ ಮತ್ತು ಗುಣಮಟ್ಟದ ಹೆಚ್ಚಳಕ್ಕಾಗಿ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸುವುದು ಮತ್ತು ಬೆಂಬಲಿತ ಕ್ರಮಗಳನ್ನು ಜರುಗಿಸುವುದು

## 6.4 ಸಂಸ್ಕರಣೆ



"ಫಾರ್ಮ್ ಟೂ ಫ್ಯಾಷನ್"ವರೆಗಿನ ಎಲ್ಲಾ ಬಗೆಯ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಸ್ಪಿನ್ನಿಂಗ್ ನಂತರದ ಸಂಸ್ಕರಣೆಯಂಥ ಕಾರ್ಯಚಟುವಟಿಕೆಗಳ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಒತ್ತು ನೀಡುವುದು ಅಗತ್ಯವಿದೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸಂಸ್ಕರಣ ಕೇಂದ್ರವು ತುಂಬಾ ಹಳೆಯದಾದ ತಂತ್ರಜ್ಞಾನಗಳನ್ನು ಹೊಂದಿದ್ದು, ಅದು ಡಿಸೈನಿಂಗ್, ಸ್ಕವರಿಂಗ್, ಬ್ಲೀಚಿಂಗ್, ಡೈಯಿಂಗ್, ಫಿನಿಷಿಂಗ್ ಮತ್ತು ಪ್ರಿಂಟಿಂಗ್ ನಂತಹ ಚಟುವಟಿಕೆಗಳ ಸಂಪೂರ್ಣ ಅನುಕ್ರಮ ಕಾರ್ಯ ಸರಣಿಯ ನಿರ್ವಹಣಾ ಕೊರತೆಯನ್ನು ಎದುರಿಸುತ್ತಿದೆ. ಆದ್ದರಿಂದ, ರಾಜ್ಯದಲ್ಲಿ "ಹತ್ತಿ ಹೊಲದಿಂದ ಫ್ಯಾಷನ್" ವರೆಗಿನ ಮೌಲ್ಯಯುತ ಸರಣಿಯ ಸಮಗ್ರತೆಯನ್ನು ಸಾಧಿಸುವ ಸಲುವಾಗಿ ನೂತನ ನೀತಿಯ ಅಡಿಯಲ್ಲಿ ಕಾರ್ಯ ವಿಧಾನಗಳಿಗೆ ಸಂಬಂಧಿಸಿದಂತೆ ಬೆಂಬಲಿಸಬೇಕಾದ ನಿರ್ದಿಷ್ಟ ಮಧ್ಯಸ್ಥಿಕೆ ಕ್ರಮಗಳು ಈ ಕೆಳಕಂಡಂತಿವೆ:

ಎ) ಸರ್ಕಾರವು, ಅಂತರರಾಷ್ಟ್ರೀಯ ಗುಣಮಟ್ಟ ಮತ್ತು ಪರಿಸರ ಮಾನದಂಡಗಳನ್ನು ಒಳಗೊಂಡ ಅತ್ಯಾಧುನಿಕ ತಂತ್ರಜ್ಞಾನಗಳೊಂದಿಗೆ ಆಧುನಿಕ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವುದು.

ಬಿ) ಸಂಸ್ಕರಣಾ ಯೋಜನೆಯಲ್ಲಿ ಝಡ್‌ಎಲ್‌ಡಿ / ಇಟಿಪಿ / ಸಿಇಟಿಪಿಗಳಿಗೆ ಅಗತ್ಯವಾದ ಯಂತ್ರೋಪಕರಣಗಳಿಗಾಗಿ ಹೆಚ್ಚುವರಿ ಬಂಡವಾಳ ಸಹಾಯಧನದ ನೆರವು ನೀಡುವುದು.

ಸಿ) ಝಡ್‌ಎಲ್‌ಡಿ/ಇಟಿಪಿ/ಸಿಇಟಿಪಿ ಯೋಜನೆಗಳನ್ನು ನಿರ್ವಹಿಸುವ ವೆಚ್ಚ ಮತ್ತು ಘನ ತ್ಯಾಜ್ಯ ವಿಲೇವಾರಿ ವೆಚ್ಚ ತುಂಬಾ ಹೆಚ್ಚಿರುವುದರಿಂದ, ಝಡ್‌ಎಲ್‌ಡಿ/ಇಟಿಪಿ/ಸಿಇಟಿಪಿ ಹೊಂದಿರುವ ಸಂಸ್ಕರಣಾ ಯೋಜನೆಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಅನ್ನು ಒದಗಿಸುವುದು.

ಡಿ) ವಿದ್ಯುತ್ ಮಗ್ಗ ಸಮೂಹ ಕೇಂದ್ರಗಳ ಬಳಿ ಖಾಸಗಿ–ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ) ಅಡಿಯಲ್ಲಿ ಸಾಮಾನ್ಯ ಆಧುನಿಕ ಸಂಸ್ಕರಣಾ ಘಟಕಗಳ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು.

ಇ) ಸಂಸ್ಕರಣೆಗೆ ಸಂಬಂಧಿಸಿದ ಅಗತ್ಯ ಮೂಲ ಕೌಶಲ್ಯಗಳ ಅಭಿವೃದ್ಧಿಗೆ ಕೌಶಲ್ಯಾಭಿವೃದ್ಧಿಯ ಬೆಂಬಲ ನೀಡುವುದು.

## 6.5 ಸಂಯೋಜಿತ ಘಟಕಗಳು





ಸಂಯೋಜಿತ ಜವಳಿ ಘಟಕಗಳು ಒಂದೇ ಸೂರಿನಡಿ ಸ್ಪಿನ್ನಿಂಗ್, ವೀವಿಂಗ್ ಮತ್ತು ಸಂಸ್ಕರಣಾ ಘಲಕವನ್ನು ಒಳಗೊಂಡಿರುತ್ತವೆ. ವಿಶ್ವದ ಪ್ರಮುಖ ಜಾಗತಿಕ ಬ್ರ್ಯಾಂಡ್‌ಗಳು ವಿಶ್ವದಾದ್ಯಂತ ಇರುವ ವಿಶ್ವ ದರ್ಜೆಯ ಸಂಯೋಜಿತ ಜವಳಿ ಘಟಕಗಳಿಂದ ಬರುವ ನೂಲು ಮತ್ತು ಬಟ್ಟೆಗಳಿಗೆ ಮೂಲವಾಗಿವೆ. ಹತ್ತಿ ಮತ್ತು ನೂಲನ್ನು ರಫ್ತು ಮಾಡುವ ಬದಲು ಸಂಪೂರ್ಣ ಸಿದ್ಧ ಉತ್ಪನ್ನವನ್ನು ರಫ್ತು ಮಾಡುವ ದೃಷ್ಟಿಯಿಂದ ನೂತನ ಜವಳಿ ನೀತಿಯು ಕರ್ನಾಟಕದಲ್ಲಿ ಬೆಳೆಯಲಾಗುವ ಉದ್ದನೆ ಎಳೆಯ ಹತ್ತಿಯನ್ನು ನಯವಾದ ಸೂಕ್ಷ್ಮ ಎಳೆಯ ನೂಲನ್ನಾಗಿ ಪರಿವರ್ತಿಸುವ ಹಾಗೂ ಆ ಮೂಲಕ ಉತ್ತಮ ಗುಣಮಟ್ಟದ ಬಟ್ಟೆಯನ್ನಾಗಿ ಪರಿವರ್ತಿಸುವ ಸಂಯೋಜಿತ ಘಟಕಗಳನ್ನು ಪ್ರೋತ್ಸಾಹಿಸುತ್ತದೆ. ನೂತನ ನೀತಿಯ ಅಡಿಯಲ್ಲಿ ಸಂಯೋಜಿತ ಘಟಕಗಳಿಗೆ ಬೆಂಬಲಿಸಬೇಕಾಗಿರುವ ನಿರ್ದಿಷ್ಟ ಮಧ್ಯಸ್ಥಿಕೆ ಕ್ರಮಗಳು ಈ ಮುಂದಿನಂತಿವೆ:

ಎ) ಮೇಲ್ದರ್ಜೆಗೇರಿಸುವುದಕ್ಕೆ ಬೆಂಬಲ (ಅಂದರೆ, ಸ್ಪಿನ್ನಿಂಗ್, ವೀವಿಂಗ್ ಮತ್ತು ಸಂಸ್ಕರಣೆಯಲ್ಲಿ ಮೇಲ್ದರ್ಜೆಗೇರಿಸುತ್ತಿರುವ ಘಟಕಗಳು).

ಬಿ) ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೆ ನೂತನ ತಯಾರಿಕಾ ತಂತ್ರಗಳನ್ನು ಅಳವಡಿಸಿಕೊಳ್ಳಲು ಆಧುನಿಕ ತಂತ್ರಜ್ಞಾನ ಬಳಸುವುದಕ್ಕೆ ನೆರವು.

ಸಿ) ಸಂಯೋಜಿತ ಘಟಕಗಳಿಗೆ ಅಗತ್ಯ ಮೂಲ ಕೌಶಲ್ಯಗಳ ಅಭಿವೃದ್ಧಿಗೆ ಕೌಶಲ್ಯಾಭಿವೃದ್ಧಿಯ ನೆರವು ಒದಗಿಸುವುದು.

## 6.6 ಸಿದ್ಧ ಉಡುಪು ತಯಾರಿಕೆ



ಕರ್ನಾಟಕವು ಪ್ರಬಲವಾದ ಸಿದ್ಧ ಉಡುಪು ತಯಾರಿಕಾ ಕಾರ್ಖಾನೆಗಳನ್ನು ಹೊಂದಿದೆ. ರಾಜ್ಯದಲ್ಲಿ ಈ ವಲಯಕ್ಕೆ ಬಂಡವಾಳ ಹೂಡಿಕೆಯು ವೃದ್ಧಿಯಾಗಿರುವುದು ಕಂಡುಬಂದಿದೆ. ಸಿದ್ಧ ಉಡುಪು ತಯಾರಿಕಾ ಕೈಗಾರಿಕೆಯು ಅತಿ ಹೆಚ್ಚು ಕಾರ್ಮಿಕ ಕೇಂದ್ರಿತವಾದ ಮತ್ತು ಕಡಿಮೆ ಬಂಡವಾಳ ಹೂಡಿಕೆ ಕೇಂದ್ರಿತವಾದ ಕೈಗಾರಿಕೆಯಾಗಿದೆ. ಈ ಕೈಗಾರಿಕೆಯು ಮಹಿಳಾ – ಸ್ನೇಹಿ ಉದ್ಯೋಗಾಧಾರಿತವಾಗಿದ್ದು, ಇದು ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರಿಗೆ ಉದ್ಯೋಗವನ್ನು ನೀಡಿದೆ. ಹಿಂದಿನ ನೀತಿಯ ಅವಧಿಯಲ್ಲಿ (2013–2018) ಸಿದ್ಧ ಉಡುಪು ತಯಾರಿಕಾ ವಲಯದಲ್ಲಿ ರೂ.1.18ಲಕ್ಷ ಗರಿಷ್ಠ ಉದ್ಯೋಗ ಸೃಷ್ಟಿಯಾಗಿತ್ತು. ಈ ವಲಯಕ್ಕೆ ನೂತನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯವಿರುವುದರಿಂದ, 2019–2024ರ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯು ಸಿದ್ಧ ಉಡುಪು ವಲಯಕ್ಕೆ ವಿಶೇಷ ಒತ್ತನ್ನು ನೀಡಿದೆ. ಸಿದ್ಧ ಉಡುಪು ತಯಾರಿಕಾ ಘಟಕಗಳಿಗೆ ಸಂಬಂಧಿಸಿದಂತೆ, ಈ ನೂತನ ನೀತಿಯ ಅಡಿಯಲ್ಲಿ ಬೆಂಬಲಿಸಬೇಕಾದ ನಿರ್ದಿಷ್ಟ ಮಧ್ಯಸ್ಥಿಕೆ ಕ್ರಮಗಳು ಈ ಮುಂದಿನಂತಿವೆ:

ಎ) ಶೀಘ್ರ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ವೇತನ ಸಹಾಯಧನ ಒದಗಿಸುವುದು.

ಬಿ) ವಿಶ್ವದ ಪ್ರಮುಖ ತಯಾರಕರುಗಳೊಂದಿಗೆ ಮಾಡಿಕೊಳ್ಳುವ ಜಂಟಿ ಉದ್ಯಮಗಳು ಮತ್ತು ಕಾರ್ಯತಂತ್ರ ಮೈತ್ರಿಗಳಿಗೆ ಪ್ರೋತ್ಸಾಹಿಸುವುದು.

ಸಿ) ರಾಜ್ಯದಲ್ಲಿ ಖರೀದಿ ಮಳಿಗೆಗಳು ಮತ್ತು ಅಂತರರಾಷ್ಟ್ರೀಯ ಚಿಲ್ಲರೆ ಉಡುಪು ಮಾರಾಟಗಾರರ ಬೆಳವಣಿಗೆಯ ಬಗ್ಗೆ ವಿಶೇಷ ಗಮನಹರಿಸಿ, ಅವುಗಳನ್ನು ಉತ್ತೇಜಿಸುವುದು.

ಡಿ) ಉಡುಪು ಮತ್ತು ವಸ್ತ್ರ ತಯಾರಿಕೆಗೆ ಸಂಬಂಧಿಸಿದ ಅಗತ್ಯ ಮೂಲ ಕೌಶಲ್ಯಗಳ ಅಭಿವೃದ್ಧಿಗೆ ಕೌಶಲ್ಯಾಭಿವೃದ್ಧಿ ನೆರವು.

## 6.7 ಫ್ಯಾಷನ್/ ಖರೀದಿ ಮಳಿಗೆಗಳು (ಬೈಯಿಂಗ್ ಹೌಸ್)



ವೇಗದ ಆಧುನಿಕ ಫ್ಯಾಷನ್ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದು, ಕರ್ನಾಟಕವು ಮೂಲ ಉತ್ಪಾದನೆಗೆ ಶೀಘ್ರ ಮತ್ತು ಹೆಚ್ಚು ಆರ್ಥಿಕ ಸಂಪನ್ಮೂಲವನ್ನು ಒದಗಿಸುವಂಥ ಜವಳಿ ಮತ್ತು ಉಡುಪು–ತಯಾರಿಕಾ ಕೇಂದ್ರವಾಗಿರುವುದರಿಂದ ವಿದೇಶಿ ಉಡುಪು ಚಿಲ್ಲರೆ ಮಾರಾಟಗಾರರಿಗೆ ಕರ್ನಾಟಕವು ಅತ್ಯಂತ ಬೇಡಿಕೆಯ ಮಾರುಕಟ್ಟೆಯಾಗುವ ಹಲವಾರು ಅಂಶಗಳನ್ನು ಹೊಂದಿದೆ. ಆದ್ದರಿಂದ ಕರ್ನಾಟಕವು ಹೆಚ್ಚಿನ ಚಿಲ್ಲರೆ ಮಾರಾಟ ತಾಣವಾಗುವ ಉದ್ದೇಶದಿಂದ ಮತ್ತು ಕರ್ನಾಟಕದಲ್ಲಿ ಮಾರಾಟ ಕೇಂದ್ರಗಳ ಬೆಳವಣಿಗೆಗೆ ಮತ್ತು ಅಂತರ ರಾಷ್ಟ್ರೀಯ ಉಡುಪು ಚಿಲ್ಲರೆ ಮಾರಾಟಗಾರರನ್ನು ಉತ್ತೇಜಿಸುವ ಸಲುವಾಗಿ ಈ ನೂತನ ನೀತಿಯು ಕಂಪನಿಗಳು/ ಜವಳಿ ಘಟಕಗಳು ಕರ್ನಾಟಕದಲ್ಲಿ ತಮ್ಮ ಮಳಿಗೆಗಳನ್ನು ಮತ್ತು ನೋಂದಾಯಿತ ಕಚೇರಿಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುತ್ತದೆ.

## 6.8 ತಾಂತ್ರಿಕ ಜವಳಿ ಉದ್ಯಮ



ಮೌಲ್ಯಯುತ ಜವಳಿ ಸರಣಿಯಲ್ಲಿ ತಾಂತ್ರಿಕ ಜವಳಿ ಉದ್ಯಮವು ಪ್ರಮುಖ ಉದಯೋನ್ಮುಖ ವಲಯಗಳಲ್ಲೊಂದಾಗಿದ್ದು, ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ತಾಂತ್ರಿಕ ಜವಳಿ ವಲಯದ ಅಭಿವೃದ್ಧಿಗೆ ವಿಶೇಷ ಒತ್ತನ್ನು ನೀಡುತ್ತಿದೆ. ಕರ್ನಾಟಕವು ಬಹುದೊಡ್ಡ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಮಾರುಕಟ್ಟೆಯನ್ನು ಹೊಂದಿರುವ ತಾಂತ್ರಿಕ ಜವಳಿ ಮತ್ತು ನೇಯ್ಗೆಯೇತರ ಜವಳಿ ತಯಾರಿಕೆಗಾಗಿ ಜಾಗತಿಕ ಹಬ್ ಆಗುವ ಎಲ್ಲಾ ಸಾಮರ್ಥ್ಯವನ್ನು ಹೊಂದಿದೆ. ಇದಕ್ಕಾಗಿ ಇಲ್ಲಿ ಕರ್ನಾಟಕವು ತಾಂತ್ರಿಕ ಜವಳಿಯ ವಿಧಗಳಾದ ಬಿಲ್ಡ್ ಟೆಕ್, ಕ್ಲಾತ್ ಟೆಕ್, ಹೋಮ್ ಟೆಕ್ ಮತ್ತು ಮೆಡ್ ಟೆಕ್ ನಂತಹ ತಾಂತ್ರಿಕ ಜವಳಿಗೆ ಪ್ರಮುಖ ಮಾರುಕಟ್ಟೆಯಾಗಿದ್ದು, ಮೈಸೂರು, ಹಾಸನ ಮತ್ತು ಬೆಂಗಳೂರು ನಗರಗಳು ತಾಂತ್ರಿಕ ಜವಳಿ ಉದ್ಯಮಕ್ಕೆ ಪ್ರಮುಖ ಮಾರುಕಟ್ಟೆ ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ. ಆದ್ದರಿಂದ ಉತ್ಪಾದನೆ, ತಾಂತ್ರಿಕತೆ ಮತ್ತು ಸಂಶೋಧನಾಭಿವೃದ್ಧಿಗಳಂತಹ ಮುಖ್ಯ ಕ್ಷೇತ್ರಗಳಲ್ಲಿ ಉದಯೋನ್ಮುಖ ತಾಂತ್ರಿಕ ಜವಳಿ ಉದ್ಯಮಕ್ಕೆ ಸೌಲಭ್ಯ ಕಲ್ಪಿಸಲು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯು ತಾಂತ್ರಿಕ ಜವಳಿ ಉದ್ಯಮಕ್ಕೆ ವಿಶೇಷ ಒತ್ತನ್ನು ನೀಡಿದೆ ಮತ್ತು ರಾಜ್ಯದಲ್ಲಿ ಜವಳಿ ಘಟಕಗಳ ಸುಸ್ಥಿರತೆಯನ್ನು ಸಾಧಿಸುವ ಗುರಿಯನ್ನು ಹೊಂದಿರುವ ವಲಯದ ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ.

ತಾಂತ್ರಿಕ ಜವಳಿ ಉದ್ಯಮಕ್ಕೆ ಸಂಬಂಧಿಸಿದಂತೆ ನೂತನ ನೀತಿಯ ಅಡಿಯಲ್ಲಿ ಬೆಂಬಲಿಸಬೇಕಾದ ನಿರ್ದಿಷ್ಟ ಮಧ್ಯಸ್ಥಿಕೆ ಕ್ರಮಗಳು ಈ ಮುಂದಿನಂತಿವೆ:

ಎ) ರಾಜ್ಯದಲ್ಲಿ ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ತಾಂತ್ರಿಕ ಜವಳಿ ಉದ್ಯಮಕ್ಕೆ ಸಂಬಂಧಿಸಿದಂತೆ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸುವುದು.

ಬಿ) ಗುಣಮಟ್ಟದ ತಾಂತ್ರಿಕ ಜವಳಿ ಉತ್ಪನ್ನಗಳ ಅಭಿವೃದ್ಧಿಗೆ ಮತ್ತು ತಾಂತ್ರಿಕ ಜವಳಿ ಉತ್ಪನ್ನಗಳನ್ನು ಅಳವಡಿಸಿಕೊಳ್ಳುವ ಬಳಕೆದಾರರಿಗೆ ನೆರವಾಗುವುದು.

ಸಿ) ತಾಂತ್ರಿಕ ಜವಳಿ ನೂಲುಗಳ (ನೈಸರ್ಗಿಕ ಮತ್ತು ಕೃತಕ ನೂಲುಗಳು) ಅಭಿವೃದ್ಧಿಗಾಗಿ ಆ ಕ್ಷೇತ್ರದಲ್ಲಿ ಸಂಶೋಧನಾಭಿವೃದ್ಧಿ (ಆರ್ & ಡಿ) ಯೋಜನೆಗಳನ್ನು ಪ್ರೋತ್ಸಾಹಿಸುವುದು.

ಡಿ) ತಾಂತ್ರಿಕ ಜವಳಿ ಉತ್ಪಾದನೆಗಳ ನೂತನ ಉತ್ಪನ್ನದ ಅಭಿವೃದ್ಧಿಗೆ ಬೆಂಬಲ ನೀಡುವುದು, ಅವುಗಳ ತಯಾರಿಕೆ ಮತ್ತು ಮಾರುಕಟ್ಟೆ ಚಟುವಟಿಕೆಗಳನ್ನು ಸುಸೂತ್ರಗೊಳಿಸುವುದು.

ಇ) ಮಾದರಿಗಳನ್ನು ಪ್ರದರ್ಶನಕ್ಕಿಡುವುದು, ಜಾಗೃತಿ ಕಾರ್ಯಕ್ರಮಗಳು, ಪುಸ್ತಕಗಳು ಮತ್ತು ಪತ್ರಿಕೆಗಳ ಪ್ರಕಟಣೆ ಹಾಗೂ ತಾಂತ್ರಿಕ ಮಾಹಿತಿ ನೀಡುವ ಪ್ರಕಟಣೆಗಳ ಮೂಲಕ ತಾಂತ್ರಿಕ ಜವಳಿ ಉತ್ಪನ್ನಗಳ ತಯಾರಕರು ಮತ್ತು ಬಳಕೆದಾರರಿಗೆ ಮಾಹಿತಿ ಪ್ರಚಾರ ಮಾಡಲು ಅನುಕೂಲ ಕಲ್ಪಿಸುವುದು.

## 6.9 ರೇಷ್ಮೆ



ಕರ್ನಾಟಕವು ಭಾರತದಲ್ಲಿ ಅತಿ ಹೆಚ್ಚು ಹಿಪ್ಪು ನೇರಳೆ ರೇಷ್ಮೆಯನ್ನು ಉತ್ಪಾದಿಸುವ ರಾಜ್ಯವಾಗಿದೆ. ದೇಶದ ಸರಿಸುಮಾರು ಶೇಕಡಾ 49ರಷ್ಟು ಹಿಪ್ಪು ನೇರಳೆ ರೇಷ್ಮೆಯನ್ನು ಕರ್ನಾಟಕ ರಾಜ್ಯದಲ್ಲಿ ಉತ್ಪಾದಿಸಲಾಗುತ್ತಿದೆ. 2016–17ನೇ ಸಾಲಿನಲ್ಲಿ, ಭಾರತದಲ್ಲಿ ಅಂದಾಜು 19.533 ಮೆಟ್ರಿಕ್ ಟನ್‌ಗಳಷ್ಟು ಹಿಪ್ಪು ನೇರಳೆ ರೇಷ್ಮೆಯು ಉತ್ಪಾದನೆಯಾಗಿದ್ದು, ಅದರಲ್ಲಿ ಕರ್ನಾಟಕದ ಪಾಲು 9571 ಮೆಟ್ರಿಕ್ ಟನ್‌ಗಳಷ್ಟಿತ್ತು. ಕರ್ನಾಟಕದ ಮೈಸೂರು ಮತ್ತು ಬೆಂಗಳೂರು ಉತ್ತರ ಜಿಲ್ಲೆಗಳು ರೇಷ್ಮೆ ಬೆಳೆಗೆ ಪ್ರಸಿದ್ಧಿ ಪಡೆದಿವೆ ಮತ್ತು ಭಾರತದಲ್ಲಿಯೇ ರೇಷ್ಮೆ ಉತ್ಪಾದನೆಗೆ ಮುಖ್ಯ ಕೊಡುಗೆ ನೀಡಿರುವುದರಿಂದ ಇವುಗಳನ್ನು "ರೇಷ್ಮೆ ನಗರ" ಎಂದು ಕರೆಯಲಾಗುತ್ತಿದೆ. ಬೇಡಿಕೆ–ಪೂರೈಕೆ ಸವಾಲುಗಳನ್ನು ಎದುರಿಸುವ ಸಲುವಾಗಿ ಮತ್ತು ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತನ್ನದೆಯಾದ ಛಾಪನ್ನು ಗಟ್ಟಿಗೊಳಿಸುವ ಸಲುವಾಗಿ ಕರ್ನಾಟಕದಲ್ಲಿ ರೇಷ್ಮೆ ಉದ್ಯಮದಲ್ಲಿ ವೈವಿಧ್ಯತೆಯನ್ನು ತರುವುದು ಅಗತ್ಯವಿದೆ. ರೇಷ್ಮೆ ಉದ್ಯಮದ ಮಹತ್ವ ಮತ್ತು ಉದ್ಯೋಗ ಸೃಷ್ಟಿಗೆ ಇರುವ ಅದರ ವ್ಯಾಪ್ತಿಯನ್ನು ಪರಿಗಣಿಸಿ, ರೇಷ್ಮೆ ಉದ್ಯಮವನ್ನು ರಾಜ್ಯದ ಆರ್ಥಿಕತೆಯ ಮುಂಚೂಣಿಗೆ ತರಲು ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಎ) ರೇಷ್ಮೆ ವ್ಯವಸಾಯಕ್ಕೆ ಪುಷ್ಟಿಕೊಡಲು ಖಾಸಗಿ ವಲಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸಲಾಗುವುದು.

ಬಿ) ರೇಷ್ಮೆ ಬಣ್ಣ ಹಾಕುವ/ ಸಂಸ್ಕರಿಸುವ/ ನೇಯ್ಗೆ ಯಂತ್ರೋಪಕರಣಗಳಿಗಾಗಿ, ರೇಷ್ಮೆ ಉದ್ಯಮಿಗಳು, ನೇಕಾರರು ಮತ್ತು ನೇಕಾರರ ಗುಂಪುಗಳಿಗೆ ಬಂಡವಾಳ ಸಹಾಯಧನದ ನೆರವು ನೀಡುವುದು.

ಸಿ) ನೂಲು ಸುತ್ತುವ ಮತ್ತು ನೇಯ್ಗೆ ಚಟುವಟಿಕೆಗಳ ಕ್ಲಸ್ಟರಿಂಗ್ ಅನ್ನು ಉತ್ತೇಜಿಸುವುದು ಮತ್ತು ಉತ್ಪಾದಕರು ಮತ್ತು ಕೈಗಾರಿಕೆಯ ನಡುವೆ ಸಂಪರ್ಕಗಳನ್ನು ಬಲಪಡಿಸುವುದು.

ಡಿ) ನಿಯತ ಸಮಾವೇಶಗಳು ಮತ್ತು ಅಂಗಡಿಗಳ ಮೂಲಕ, ಮಾರುಕಟ್ಟೆ ಉತ್ಪನ್ನಗಳಿಗೆ ಸಂಪೂರ್ಣ ಸಂಪರ್ಕಗಳನ್ನು ಒದಗಿಸಲು ಮಾರುಕಟ್ಟೆ ಹಬ್‌ಗಳನ್ನು ಸೃಜಿಸುವುದು.

ಇ) ರೇಷ್ಮೆ ಅಭಿವೃದ್ಧಿ / ತರಬೇತಿ ಕುರಿತು, "ಸಮರ್ಥ" (SAMARTH) ಕೇಂದ್ರ ಸರ್ಕಾರದ ರೇಷ್ಮೆ ಉಪಕ್ರಮಗಳನ್ನು ರಾಜ್ಯದಲ್ಲಿಯೂ ಸಹ ಅನುಷ್ಠಾನಗೊಳಿಸುವುದು.

## 6.10 ಉಣ್ಣೆ



ಭಾರತದ ಒಟ್ಟು ಉಣ್ಣೆ ಉತ್ಪಾದನೆಯ ಸರಿಸುಮಾರು ಶೇ.12ರಷ್ಟು ಉಣ್ಣೆಯನ್ನು ಕರ್ನಾಟಕವು ಉತ್ಪಾದಿಸುತ್ತದೆ. 2017–18ನೇ ಸಾಲಿನಲ್ಲಿ (ನವೆಂಬರ್, 2017ರವರೆಗೂ) ಉಣ್ಣೆ ರಫ್ತು ರೂ.6.06 ಕೋಟಿಗಳಷ್ಟಿದ್ದು, ಸುಮಾರು 2663 ಟನ್‌ಗಳಷ್ಟು ಉಣ್ಣೆಯನ್ನು ಉತ್ಪಾದಿಸಲಾಗಿತ್ತು. ರಾಜ್ಯದಲ್ಲಿ ಉಣ್ಣೆಗೆ ಸಂಬಂಧಿಸಿದಂತೆ ಮೌಲ್ಯವರ್ಧಿತ ಸಂಸ್ಕರಣೆ ಮತ್ತು ಮಾರುಕಟ್ಟೆ ಸೌಲಭ್ಯಗಳ ಲಭ್ಯತೆಯು ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ. ಇದನ್ನು ಸಾಧಿಸಲು ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು:

ಎ) ಆಧುನಿಕ ಉಣ್ಣೆ ನೂಲು ಸ್ಪಿನ್ನಿಂಗ್ ಘಟಕಗಳನ್ನು ಸ್ಥಾಪಿಸುವುದಕ್ಕಾಗಿ ಬಂಡವಾಳ ಸಹಾಯಧನ ನೆರವು ನೀಡುವುದು.

ಬಿ) ಉಣ್ಣೆ ಕ್ಲಸ್ಟರ್ ಪ್ರದೇಶಗಳಲ್ಲಿ ಉಣ್ಣೆ ಮಾರುಕಟ್ಟೆ ಸಂಕೀರ್ಣಗಳನ್ನು ಸ್ಥಾಪಿಸುವುದರ ಮೂಲಕ ಮಾರುಕಟ್ಟೆ ಸಂಪರ್ಕಗಳನ್ನು ಅಭಿವೃದ್ಧಿಪಡಿಸುವುದು.

ಸಿ) ಉಣ್ಣೆ ಸಿದ್ಧ ಉತ್ಪನ್ನಗಳನ್ನು ವೈವಿಧ್ಯಗೊಳಿಸುವುದರ ಮೇಲೆ ಗಮನವನ್ನು ಕೇಂದ್ರೀಕರಿಸುವುದು.

ಡಿ) ಉಣ್ಣೆಯ ಉತ್ಪನ್ನ ಅಭಿವೃದ್ಧಿಗಾಗಿ ನೇಯ್ಗೆಯೇತರ ಮತ್ತು ನೇಯ್ಗೆಯ ಉತ್ಪನ್ನಗಳಿಗೆ ಸಂಬಂಧಿಸಿದ ಸ್ಥಾವರ ಹಾಗೂ ಸ್ಪಿನ್ನಿಂಗ್, ವೀವಿಂಗ್, ಡೈಯಿಂಗ್, ಸಂಸ್ಕರಣೆ ಮತ್ತು ಫಿನಿಷಿಂಗ್‌ಗೆ ಸಂಬಂಧಿಸಿದ ಸೌಕರ್ಯಗಳಂತಹ ಮೂಲ ಸೌಲಭ್ಯಗಳ ಬೆಂಬಲ ನೀಡುವುದು.

ಇ) ಉಣ್ಣೆ ಸಂಗ್ರಹಣೆ, ಸಂಸ್ಕರಣೆ, ಉತ್ಪಾದನೆ ಮತ್ತು ಮಾರುಕಟ್ಟೆಯ ಮೇಲ್ವಿಚಾರಣೆ ಮಾಡಲು ಹಾಗೂ ನಿರ್ವಹಿಸಲು ಹೆಚ್ಚು ಪ್ರಯತ್ನಗಳನ್ನು ಮಾಡುವುದು.

ಎಫ್) ಅಗತ್ಯ – ಮೂಲ ಕೌಶಲ್ಯಗಳ ಅಭಿವೃದ್ಧಿಗೆ ಕೌಶಲ್ಯಾಭಿವೃದ್ಧಿಯ ಬೆಂಬಲ ನೀಡುವುದು.

# 7. ಇತರ ಸ್ಕೀಮುಗಳ ಅಡಿಯಲ್ಲಿ ನೆರವನ್ನು ಕ್ರೋಢೀಕರಿಸುವುದು

ಜವಳಿ ಮಂತ್ರಾಲಯದ ಟಿಯುಎಫ್‌ಎಸ್‌ನಂತಹ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ನೆರವನ್ನು ಭಾರತ ಸರ್ಕಾರವು ಈ ನೀತಿಯ ಅಡಿಯಲ್ಲಿ ಲಭ್ಯವಿರುವ ನೆರವಿನೊಂದಿಗೆ ವಾಣಿಜ್ಯೋದ್ಯಮಿಗಳ ಸಮೂಹ/ ಕೈಗಾರಿಕಾ ಸಂಘಗಳು / ಎಸ್‌ಪಿವಿಗಳು / ಘಟಕಗಳ ಮೂಲಕ ಕ್ರೋಢೀಕರಿಸಬಹುದಾಗಿದೆ. ಆದರೆ, ಅಂತಹ ಕ್ರೋಢೀಕರಣದ ಸಂದರ್ಭದಲ್ಲಿ, ಕೈಗಾರಿಕೆಯ ಕೊಡುಗೆಯು ಪ್ರತಿ ಯೋಜನಾ ವೆಚ್ಚದ ಶೇ.15ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

ಈ ನೀತಿಯ ಅಡಿಯಲ್ಲಿ ಅನುಮತಿಸಲಾದ ಯೋಜನೆಗಳು ರಾಜ್ಯದ ಕೈಗಾರಿಕಾ ನೀತಿಯ ಅಡಿಯಲ್ಲಿನ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ಕ್ಲೇಮು ಮಾಡುವುದಕ್ಕೆ ಅರ್ಹವಾಗಿರುವುದಿಲ್ಲ.

## 8. ಜವಳಿ ಉದ್ಯಮಗಳಿಗಾಗಿ ನೀಡಲಾಗುವ ನೀತಿ ಪ್ರೋತ್ಸಾಹಕಗಳು

### 8.1 ಸಾಲ ಆಧಾರಿತ ಬಂಡವಾಳ ಸಹಾಯಧನ

ಎ) ಎಂಎಸ್‌ಎಂಇ ಉದ್ಯಮಗಳಿಗಾಗಿ ಸಾಲ ಸಂಪರ್ಕ ಬಂಡವಾಳ ಸಹಾಯಧನ: ಥ್ರಸ್ಟ್ ಸೆಕ್ಟರ್‌ಗಳು ಮತ್ತು ಇನ್ನಿತರ ವಿಭಾಗಗಳಿಗೆ ಸಂಬಂಧಿಸಿದಂತೆ, ಈ ಕೆಳಗೆ ಸೂಚಿಸಲಾದ ಪರಿಮಿತಿಗಳನುಸಾರ ಅರ್ಹ ಸ್ಥಿರಾಸ್ಥಿಗಳ ಮೇಲಿನ ಬಂಡವಾಳ ಸಹಾಯಧನಕ್ಕೆ ಹೊಸ/ವಿಸ್ತರಿಸಲಾಗುತ್ತಿರುವ/ಆಧುನೀಕರಿಸುತ್ತಿರುವ/ ವೈವಿಧ್ಯಗೊಳಿಸುತ್ತಿರುವ ಉದ್ಯಮಗಳು ಅರ್ಹವಾಗಿರುತ್ತವೆ.

| ಎಂಎಸ್‌ಎಂಇಗಳಿಗಾಗಿ ಬಂಡವಾಳ ಸಹಾಯಧನ | | | | |
|---|---|---|---|---|
| ವಿಭಾಗಗಳು | ವಲಯ 1 | ವಲಯ 2 | ವಲಯ 3 | ವಲಯ 4 |
| ಒತ್ತು (Thrust) ನೀಡಲಾದ ವಲಯಗಳು | ಸ್ಥಿರಾಸ್ಥಿಗಳ ಶೇಕಡಾ30ರಷ್ಟು | ಸ್ಥಿರಾಸ್ಥಿಗಳ ಶೇಕಡಾ25ರಷ್ಟು | ಸ್ಥಿರಾಸ್ಥಿಗಳ ಶೇಕಡಾ20ರಷ್ಟು | – |
| ಇತರೆ | ಸ್ಥಿರಾಸ್ಥಿಗಳ ಶೇಕಡಾ25ರಷ್ಟು | ಸ್ಥಿರಾಸ್ಥಿಗಳ ಶೇಕಡಾ 20ರಷ್ಟು | ಸ್ಥಿರಾಸ್ಥಿಗಳ ಶೇಕಡಾ15ರಷ್ಟು | |
| ಹೆಚ್ಚುವರಿ ಸಹಾಯಧನ | ಪ.ಜಾ/ ಪ.ಪಂ ವ್ಯಕ್ತಿಗಳು/ ಅಂಗವಿಕಲರು/ ಅಲ್ಪಸಂಖ್ಯಾತರು/ ಮಾಜಿ ಸೈನಿಕರು/ ಮಹಿಳೆಯರಿಗಾಗಿ ಸ್ಥಿರಾಸ್ತಿಗಳ ಮೌಲ್ಯದ ಮೇಲೆ ಶೇಕಡಾ5 ರಷ್ಟು ಹೆಚ್ಚುವರಿ ಬಂಡವಾಳ ಸಹಾಯಧನ. | | | |

ಬಿ) ಬೃಹತ್ ಉದ್ಯಮಗಳಿಗಾಗಿ ಸಾಲ ಆಧಾರಿತ ಬಂಡವಾಳ ಸಹಾಯಧನ: ಒತ್ತು ನೀಡಲಾದ ವಲಯಗಳು ಮತ್ತು ಇನ್ನಿತರ ವಿಭಾಗಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ಸೂಚಿಸಲಾದ ಪರಿಮಿತಿಗಳನುಸಾರ ಅರ್ಹ ಸ್ಥಿರಾಸ್ತಿಗಳ ಮೇಲಿನ ಬಂಡವಾಳ ಸಹಾಯಧನಕ್ಕೆ ನೂತನವಾದ / ವಿಸ್ತರಣೆಗೊಳ್ಳುತ್ತಿರುವ/ ಆಧುನೀಕರಿಸುತ್ತಿರುವ / ವೈವಿಧ್ಯೀಕರಿಸುತ್ತಿರುವ ಉದ್ಯಮಗಳು ಅರ್ಹವಾಗಿರುತ್ತವೆ.

| ಬೃಹತ್ ಉದ್ಯಮಗಳಿಗಾಗಿ ಬಂಡವಾಳ ಸಹಾಯಧನ | | | | |
|---|---|---|---|---|
| ವಿಭಾಗಗಳು | ವಲಯ 1 | ವಲಯ 2 | ವಲಯ 3 | ವಲಯ 4 |
| ಒತ್ತು ನೀಡಲಾದ ವಲಯಗಳು | ಸ್ಥಿರಾಸ್ಥಿಗಳ ಶೇಕಡಾ 25ರಷ್ಟು | ಸ್ಥಿರಾಸ್ಥಿಗಳ ಶೇಕಡಾ 20ರಷ್ಟು | ಸ್ಥಿರಾಸ್ಥಿಗಳ ಶೇಕಡಾ 15ರಷ್ಟು | – |
| ಇತರೆ | ಸ್ಥಿರಾಸ್ಥಿಗಳ ಶೇಕಡಾ 20ರಷ್ಟು | ಸ್ಥಿರಾಸ್ಥಿಗಳ ಶೇಕಡಾ 15ರಷ್ಟು | ಸ್ಥಿರಾಸ್ಥಿಗಳ ಶೇಕಡಾ 10ರಷ್ಟು | |
| ಹೆಚ್ಚುವರಿ ಸಹಾಯಧನ | ಪ.ಜಾ/ ಪ.ಪಂ ವ್ಯಕ್ತಿಗಳು/ ಅಂಗವಿಕಲರು/ ಅಲ್ಪಸಂಖ್ಯಾತರು/ ಮಾಜಿ ಸೈನಿಕರು/ ಮಹಿಳೆಯರಿಗಾಗಿ ಸ್ಥಿರಾಸ್ತಿಗಳ ಮೌಲ್ಯದ ಮೇಲೆ ಶೇಕಡಾ 5 ರಷ್ಟು ಹೆಚ್ಚುವರಿ ಬಂಡವಾಳ ಸಹಾಯಧನ. | | | |

## 8.2 ಬಡ್ಡಿ ಸಹಾಯಧನ

ಸಮಸ್ಯೆ ಮುಕ್ತವಾಗಿ ಕಾರ್ಯನಿರ್ವಹಿಸುವ ಸಂಬಂಧ ಉದ್ದಿಮೆದಾರರು ಮತ್ತು ಜವಳಿ ಘಟಕಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ, ಬಡ್ಡಿ ಸಹಾಯಧನದ ರೂಪದಲ್ಲಿ ಅವರಿಗೆ ಹಣಕಾಸಿನ ನೆರವನ್ನು ನೀಡಲಾಗುವುದು. ಅಂತಹ ಬಡ್ಡಿ ಸಹಾಯಧನವನ್ನು ಮೊದಲನೇ 5 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ಪ್ರತಿವರ್ಷ ಶೇಕಡಾ 5ರ ಬಡ್ಡಿ ದರದಲ್ಲಿ ಬೃಹತ್ ಘಟಕಗಳಿಗೆ ಮಾತ್ರ ನೀಡಲಾಗುವುದು.

<table>
<tr><th colspan="3">ಬೃಹತ್ ಉದ್ಯಮಗಳಿಗಾಗಿ ಬಡ್ಡಿ ಸಹಾಯಧನ</th></tr>
<tr><th>ವಿಭಾಗಗಳು</th><th>ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು</th><th>ವಲಯ 4</th></tr>
<tr><td>ಒತ್ತು (ಥ್ರಸ್ಟ್) ನೀಡಲಾದ ವಲಯಗಳು</td><td rowspan="2">ಮೊದಲ 5 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ವಾರ್ಷಿಕ ಶೇಕಡಾ 5 ರಷ್ಟು ಬಡ್ಡಿ ದರದಲ್ಲಿ ಬಡ್ಡಿ ಸಹಾಯಧನ.</td><td rowspan="2">–</td></tr>
<tr><td>ಇತರೆ</td></tr>
</table>

## 8.3 ವಿದ್ಯುತ್ ಸಹಾಯಧನ

ಇಂಧನ ಉಳಿತಾಯದ ಬೇಡಿಕೆ ಮತ್ತು ಕಡಿಮೆ ಇಂಧನ ಬಳಕೆಯನ್ನು ಸಾಧಿಸುವುದಕ್ಕೆ ಒತ್ತಾಯ – ಇವೆರಡೂ ಇಂದಿನ ಜವಳಿ ಉದ್ಯಮದ ಅತಿದೊಡ್ಡ ಸವಾಲುಗಳಾಗಿವೆ. ತಾಂತ್ರಿಕ ಜವಳಿಗಳು ಹಾಗೂ (ಸರ್ಕಾರ ಅಥವಾ ಖಾಸಗಿಯವರಿಂದ ಖರೀದಿಸಿದ) ಅಸಂಪ್ರದಾಯಿಕ ಇಂಧನ ಮೂಲಗಳ ಬಳಕೆಯೂ ಸೇರಿದಂತೆ ಜವಳಿ ಉದ್ಯಮಗಳ ಎಲ್ಲಾ ಮೌಲ್ಯ ಸರಣಿಯ ಚಟುವಟಿಕೆಗಳಿಗಾಗಿ ಉದ್ಯಮ ಘಟಕಗಳು ಪಾವತಿಸಿದ ವಿದ್ಯುತ್ ವೆಚ್ಚವನ್ನು ಮರು ಸಂದಾಯ ಮಾಡಲಾಗುವುದು. ಹೈ–ಟೆಕ್ ವಿದ್ಯುತ್ ಮಗ್ಗ ಘಟಕಗಳ ಸಂದರ್ಭದಲ್ಲಿ, ವಿದ್ಯುತ್ ಸಂಪರ್ಕವು 20ಎಚ್‌ಪಿ ಗಿಂತ ಹೆಚ್ಚಿಗೆ ಇರತಕ್ಕದ್ದು. ವಾಣಿಜ್ಯ ಉತ್ಪಾದನೆಯನ್ನು ಪ್ರಾರಂಭಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಈ ಸಹಾಯಧನವು ಅರ್ಹತೆಯುಳ್ಳದ್ದಾಗಿರುತ್ತದೆ.

### ಎ) ಎಂಎಸ್‌ಎಂಇ ಉದ್ಯಮಗಳಿಗಾಗಿ ವಿದ್ಯುತ್ ಸಹಾಯಧನ

<table>
<tr><th colspan="3">ಎಂಎಸ್‌ಎಂಇಗಳಿಗಾಗಿ ವಿದ್ಯುತ್ ಸಹಾಯಧನ</th></tr>
<tr><th>ವಿಭಾಗಗಳು</th><th>ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು</th><th>ವಲಯ 4</th></tr>
<tr><td>ಸ್ಪಿನ್ನಿಂಗ್</td><td>5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.2/–ರಂತೆ ವಿದ್ಯುತ್ ವೆಚ್ಚದ ಮರು ಸಂದಾಯ.</td><td rowspan="6">–</td></tr>
<tr><td>ನೇಯ್ಗೆ (ಏರ್ಜೆಟ್ ಮಗ್ಗಗಳು, ರೇಪಿಯರ್ ಮಗ್ಗಗಳು, ಎಲೆಕ್ಟ್ರಾನಿಕ್ ಜಕಾರ್ಡ್)</td><td>5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.2/–ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ.</td></tr>
<tr><td>ಸಂಸ್ಕರಣೆಯ ಸಂಯೋಜಿತ ಘಟಕಗಳು</td><td rowspan="3">5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.1/–ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ.</td></tr>
<tr><td>ತಾಂತ್ರಿಕ ಜವಳಿಗಳು</td></tr>
<tr><td>ಇತರೆ</td></tr>
<tr><td>ಅಸಂಪ್ರದಾಯಿಕ/ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆ</td><td>5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.2/–ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ.</td></tr>
</table>

ಬಿ) ಬೃಹತ್ ಉದ್ಯಮಗಳಿಗಾಗಿ ವಿದ್ಯುತ್ ಸಹಾಯಧನ

| ಎಂಎಸ್‌ಎಂಇಗಳಿಗಾಗಿ ವಿದ್ಯುತ್ ಸಹಾಯಧನ | | |
|---|---|---|
| ವಿಭಾಗಗಳು | ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು | ವಲಯ 4 |
| ಸ್ಪಿನ್ನಿಂಗ್ | 5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.2/-ರಂತೆ ವಿದ್ಯುತ್ ವೆಚ್ಚದ ಮರು ಸಂದಾಯ. | - |
| ನೇಯ್ಗೆ (ಏರ್ಜೆಟ್ ಮಗ್ಗಗಳು, ರೇಪಿಯರ್ ಮಗ್ಗಗಳು, ಎಲೆಕ್ಟ್ರಾನಿಕ್ ಜಕಾರ್ಡ್) | 5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.1/-ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. | |
| ಸಂಸ್ಕರಣೆಯ ಸಂಯೋಜಿತ ಘಟಕಗಳು | 5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.2/-ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. | |
| ತಾಂತ್ರಿಕ ಜವಳಿಗಳು | 5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.1/-ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. | |
| ಇತರೆ | | |
| ಅಸಂಪ್ರದಾಯಿಕ/ ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆ | 5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.2/-ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. | |

## 8.4 ನೌಕರರ ರಾಜ್ಯ ವಿಮೆ (ಇಎಸ್‌ಐ) ಮತ್ತು ನೌಕರರ ಭವಿಷ್ಯ ನಿಧಿ (ಇಪಿಎಫ್) ಸಹಾಯಧನ

ನೌಕರರ ರಾಜ್ಯ ವಿಮೆ (ಇಎಸ್‌ಐ) ಮತ್ತು ನೌಕರರ ಭವಿಷ್ಯ ನಿಧಿ (ಇಪಿಎಫ್) ಕಡೆಗೆ ನಿಯೋಜಕರು ಭರಿಸಿದ ವೆಚ್ಚವನ್ನು ಮರುಸಂದಾಯ ಮಾಡಲು ಎಂಎಸ್‌ಎಂಇ ಘಟಕಗಳಿಗೆ ಸರ್ಕಾರ ಅವಕಾಶ ಕಲ್ಪಿಸಿದೆ. ಎಂಎಸ್‌ಎಂಇ ಯೋಜನೆಗಳಿಗಾಗಿ, ಸರಕು ಪಟ್ಟಿ ದಾಖಲೆಯ ಪ್ರಕಾರ, ಉದ್ದಿಮೆದಾರರು ಮಾಡಿದ ನೈಜ ಸಂದಾಯಗಳ ಮೇಲೆ ಮರುಸಂದಾಯ ಮಾಡಲಾಗುತ್ತದೆ. ಈ ನೆರವು ವಾಣಿಜ್ಯ ಉತ್ಪಾದನೆಯ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಲಭ್ಯವಿರುತ್ತದೆ.

| ಎಂಎಸ್‌ಎಂಇ ಉದ್ದಿಮೆಗಳಿಗಾಗಿ, ನೌಕರರ ರಾಜ್ಯ ವಿಮೆ ಮತ್ತು ನೌಕರರ ಭವಿಷ್ಯ ನಿಧಿ ಸಹಾಯಧನ | | |
|---|---|---|
| ವಿಭಾಗಗಳು | ವಲಯ 4 ಅನ್ನು ಹೊರತುಪಡಿಸಿ ಎಲ್ಲಾ ವಲಯಗಳು | ವಲಯ 4 |
| ಒತ್ತು ನೀಡಲಾದ ವಲಯಗಳು | ಎಲ್ಲಾ ನೂತನ ಘಟಕಗಳಿಗಾಗಿ 5 ವರ್ಷಗಳ ಅವಧಿಯವರೆಗೆ ಪ್ರತಿ ತಿಂಗಳು ಪ್ರತಿಯೊಬ್ಬ ನೌಕರರ ವೇತನ ದರದಂತೆ ಇಪಿಎಫ್ ಮತ್ತು ಇಎಸ್‌ಐ ಸಹಯಾಧನವಾಗಿ ನಿಯೋಜಿತರ ವಂತಿಗೆಯ ಶೇಕಡಾ 75ರಷ್ಟನ್ನು ಮರುಸಂದಾಯ ಮಾಡಲಾಗುತ್ತದೆ. | - |
| ಇತರೆ | | |

## 8.5 ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ರಿಯಾಯಿತಿ ಶುಲ್ಕಗಳು

(I) ಕೈಗಾರಿಕಾ ಜಮೀನು/ ಹಂಚಿಕೆ ಮಾಡಲಾದ ನಿವೇಶನಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಪತ್ರ, ಗುತ್ತಿಗೆ ಹಾಗೂ ಮಾರಾಟ ಮತ್ತು ಕ್ರಯ ಪತ್ರಗಳನ್ನು ಬರೆಸುವುದು; (ii) ಗುತ್ತಿಗೆ ಮೇಲೆ ತೆಗೆದುಕೊಂಡ ಕೈಗಾರಿಕಾ ಶೆಡ್‌ಗಳು/ ನಿವೇಶನಗಳ ವಿಷಯವಾಗಿ ಭೋಗ್ಯ ಪತ್ರಗಳನ್ನು ಬರೆಸುವುದು ಹಾಗೂ (iii) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು ಮತ್ತು ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಇನ್ನಿತರ ಏಜೆನ್ಸಿಗಳಿಂದ ದೀರ್ಘವಾಗಿ ಹಣಕಾಸು ನಿಧಿಗಳನ್ನು ಪಡೆಯುವುದಕ್ಕಾಗಿ ಬರೆದುಕೊಟ್ಟ ಅಡಮಾನ ಪತ್ರ, ಈಡು ಪತ್ರ ಮುಂತಾದ ಭದ್ರತಾ ದಸ್ತಾವೇಜುಗಳು ಸೇರಿದಂತೆ, ಸಾಲ ಮತ್ತು ಋಣಭಾರ ಪತ್ರಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಮುದ್ರಾಂಕ ಶುಲ್ಕದ ವಿನಾಯಿತಿ ಮತ್ತು ಪ್ರತಿ ರೂ.1000 ಕ್ಕೆ ರೂ.1/– ರ ದರದಲ್ಲಿ ನೋಂದಣಿ ರಿಯಾಯಿತಿ ಶುಲ್ಕಗಳು ಇರತಕ್ಕದ್ದು.

| ಎಂಎಸ್‌ಎಂಇ ಮತ್ತು ಬೃಹತ್ ಉದ್ಯಮಗಳಿಗಾಗಿ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ರಿಯಾಯಿತಿ ನೋಂದಣಿ ಶುಲ್ಕಗಳು | | |
|---|---|---|
| ವಿಭಾಗಗಳು | ವಲಯ 4 ಅನ್ನು ಹೊರತುಪಡಿಸಿ ಎಲ್ಲಾ ವಲಯಗಳು | ವಲಯ 4 |
| ಜವಳಿ ವಿಭಾಗ | ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ಪ್ರತಿ ರೂ.1000ಕ್ಕೆ ರೂ.1/–ರ ದರದಲ್ಲಿ ನೋಂದಣಿ ರಿಯಾಯಿತಿ ಶುಲ್ಕಗಳು. | – |

## 8.6 ಅಸ್ತಿತ್ವದಲ್ಲಿರುವ ಮತ್ತು ನೂತನ ಉದ್ಯಮಗಳಿಗೆ ವಿಸರ್ಜನೆ ಸಂಸ್ಕರಣಾ ಘಟಕ

ಸ್ವಚ್ಛ ಮತ್ತು ಪರಿಸರ ಸ್ನೇಹಿ ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಹಸಿರು ಕ್ರಮಗಳನ್ನು ಉತ್ತೇಜಿಸುವ ಸಲುವಾಗಿ ಮತ್ತು ಜೆಡ್‌ಎಲ್‌ಡಿ ಕ್ರಮಗಳನ್ನು ಪ್ರೋತ್ಸಾಹಿಸುವುದಕ್ಕೆ ವಿಸರ್ಜನೆ ಸಂಸ್ಕರಣಾ ಘಟಕಗಳನ್ನು (ಇಟಿಪಿಗಳು) ಸ್ಥಾಪಿಸುವುದಕ್ಕಾಗಿ ಶೇಕಡಾ.50ರಷ್ಟು ಬಂಡವಾಳ ಸಹಾಯಧನ ಅಥವಾ ರೂ.5 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಸಂಯೋಜಿತ ಮತ್ತು ಸಂಸ್ಕರಣಾ ಘಟಕಗಳಿಗಾಗಿ ರಾಜ್ಯದಾದ್ಯಂತ ಎಲ್ಲಾ ಸ್ಥಳಗಳಲ್ಲಿಯೂ ನೀಡಲಾಗುವುದು.

## 9. ಗಾರ್ಮೆಂಟ್‌ಗಳಿಗಾಗಿ ನೀಡಲಾಗುವ ನೀತಿ ಪ್ರೋತ್ಸಾಹಕಗಳು

### 9.1 ಸಾಲ ಆಧಾರಿತ ಬಂಡವಾಳ ಸಹಾಯಧನ

ಎ) ಎಂಎಸ್‌ಎಂಇ ಉದ್ಯಮಗಳಿಗಾಗಿ ಸಾಲ ಆಧಾರಿತ ಬಂಡವಾಳ ಸಹಾಯಧನ: ಹೊಸ/ವಿಸ್ತರಣೆಗೊಳ್ಳುತ್ತಿರುವ/ಆಧುನೀಕರಣಗೊಳ್ಳುತ್ತಿರುವ/ವೈವಿಧ್ಯೀಕರಿಸುತ್ತಿರುವ ಉದ್ಯಮಗಳು. ಗಾರ್ಮೆಂಟ್ ಕಾರ್ಯಗಳಿಗಾಗಿ ಈ ಕೆಳಗೆ ಸೂಚಿಸಲಾದ ಪರಿಮಿತಿಗಳಿಗನುಸಾರ, ಅರ್ಹ ಸ್ಥಿರಾಸ್ತಿಗಳ ಮೇಲಿನ ಬಂಡವಾಳ ಸಹಾಯಧನಕ್ಕೆ ಅರ್ಹವಾಗಿರುತ್ತವೆ.

| ಎಂಎಸ್‌ಎಂಇ ಉದ್ಯಮಗಳಿಗಾಗಿ ಬಂಡವಾಳ ಸಹಾಯಧನ | | | | |
|---|---|---|---|---|
| ವಿಭಾಗಗಳು | ವಲಯ 1 | ವಲಯ 2 | ವಲಯ 3 | ವಲಯ 4 |
| ಗಾರ್ಮೆಂಟ್ (ಸಿದ್ಧ ಉಡುಪು ಘಟಕ) | ಸ್ಥಿರಾಸ್ತಿಗಳ ಶೇಕಡ25ರಷ್ಟು | ಸ್ಥಿರಾಸ್ತಿಗಳ ಶೇಕಡ20ರಷ್ಟು | ಸ್ಥಿರಾಸ್ತಿಗಳ ಶೇಕಡ15ರಷ್ಟು | – |
| ಹೆಚ್ಚುವರಿ ಸಹಾಯಧನ | ಪ.ಜಾ/ಪ.ಪಂಗಡದ ವ್ಯಕ್ತಿಗಳು/ ಅಂಗವಿಕಲರು/ ಅಲ್ಪಸಂಖ್ಯಾತರು/ ಮಾಜಿ–ಸೈನಿಕರು/ ಮಹಿಳೆಯರಿಗಾಗಿ ಸ್ಥಿರಾಸ್ತಿಗಳ ಮೌಲ್ಯದ ಮೇಲೆ ಶೇಕಡಾ 5ರಷ್ಟು ಹೆಚ್ಚುವರಿ ಬಂಡವಾಳ ಸಹಾಯಧನ | | | – |

ಬಿ) ಬೃಹತ್ ಉದ್ಯಮಗಳಿಗಾಗಿ ಸಾಲ ಆಧಾರಿತ ಬಂಡವಾಳ ಸಹಾಯಧನ: ಹೊಸ/ವಿಸ್ತರಣೆಗೊಳ್ಳುತ್ತಿರುವ/ಆಧುನೀಕರಣಗೊಳ್ಳುತ್ತಿರುವ/ವೈವಿಧ್ಯೀಕರಿಸುತ್ತಿರುವ ಉದ್ಯಮಗಳು ಗಾರ್ಮೆಂಟ್ ಕಾರ್ಯಕ್ಕಾಗಿ ಈ ಕೆಳಗೆ ಸೂಚಿಸಲಾದ ಪರಿಮಿತಿಗಳಿಗೆ ಅನುಸಾರ ಅರ್ಹ ಸ್ಥಿರಾಸ್ತಿಗಳ ಮೇಲೆ ಬಂಡವಾಳ ಸಹಾಯಧನಕ್ಕೆ ಅರ್ಹವಾಗಿರುತ್ತವೆ.

| ಬೃಹತ್ ಉದ್ಯಮಗಳಿಗಾಗಿ ಬಂಡವಾಳ ಸಹಾಯಧನ | | | | |
|---|---|---|---|---|
| ವಿಭಾಗಗಳು | ವಲಯ 1 | ವಲಯ 2 | ವಲಯ 3 | ವಲಯ 4 |
| ಗಾರ್ಮೆಂಟ್ (ಸಿದ್ಧ ಉಡುಪು ಘಟಕ) | ಸ್ಥಿರಾಸ್ತಿಗಳ ಶೇಕಡ20ರಷ್ಟು | ಸ್ಥಿರಾಸ್ತಿಗಳ ಶೇಕಡ15ರಷ್ಟು | ಸ್ಥಿರಾಸ್ತಿಗಳ ಶೇಕಡ10ರಷ್ಟು | – |
| ಹೆಚ್ಚುವರಿ ಸಹಾಯಧನ | ಪ.ಜಾ/ಪ.ಪಂಗಡದ ವ್ಯಕ್ತಿಗಳು/ ಅಂಗವಿಕಲರು/ ಅಲ್ಪಸಂಖ್ಯಾತರು/ ಮಾಜಿ–ಸೈನಿಕರು/ ಮಹಿಳೆಯರಿಗಾಗಿ ಸ್ಥಿರಾಸ್ತಿಗಳ ಮೌಲ್ಯದ ಮೇಲೆ ಶೇಕಡಾ5ರಷ್ಟು ಹೆಚ್ಚುವರಿ ಬಂಡವಾಳ ಸಹಾಯಧನ | | | – |

### 9.2 ಬಡ್ಡಿ ಸಹಾಯಧನ

ಸಮಸ್ಯೆ ಮುಕ್ತವಾಗಿ ಕಾರ್ಯನಿರ್ವಹಿಸುವ ಸಂಬಂಧ ಉದ್ದಿಮೆದಾರರು ಮತ್ತು ಜವಳಿ ಘಟಕಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ, ಬಡ್ಡಿ ಸಹಾಯಧನದ ರೂಪದಲ್ಲಿ ಅವರಿಗೆ ಹಣಕಾಸಿನ ನೆರವನ್ನು ನೀಡಲಾಗುವುದು. ಅಂತಹ ಬಡ್ಡಿ ಸಹಾಯಧನವನ್ನು ಮೊದಲನೇ 5 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ಪ್ರತಿವರ್ಷ ಶೇಕಡಾ5ರ ಬಡ್ಡಿ ದರದಲ್ಲಿ ಬೃಹತ್ ಘಟಕಗಳಿಗೆ ಮಾತ್ರ ನೀಡಲಾಗುವುದು.

| ಬೃಹತ್ ಉದ್ಯಮಗಳಿಗಾಗಿ ಬಡ್ಡಿ ಸಹಾಯಧನ | | |
|---|---|---|
| ವಿಭಾಗಗಳು | ವಲಯ 4 ಅನ್ನು ಹೊರತುಪಡಿಸಿ ಎಲ್ಲಾ ವಲಯಗಳು | ವಲಯ 4 |
| ಸಿದ್ಧ ಉಡುಪುಗಳು | ಮೊದಲ 5 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ವಾರ್ಷಿಕ ಶೇಕಡಾ5 ರಷ್ಟು ಬಡ್ಡಿ ದರದಲ್ಲಿ ಬಡ್ಡಿ ಸಹಾಯಧನ. | – |

## 9.3 ವಿದ್ಯುತ್ ಸಹಾಯಧನ

ಇಂಧನ ಉಳಿತಾಯದ ಬೇಡಿಕೆ ಮತ್ತು ಕಡಿಮೆ ಇಂಧನ ಬಳಕೆಯನ್ನು ಸಾಧಿಸುವುದಕ್ಕೆ ಒತ್ತಾಯ – ಇವೆರಡೂ ಇಂದಿನ ಜವಳಿ ಉದ್ಯಮದ ಅತಿದೊಡ್ಡ ಸವಾಲುಗಳಾಗಿವೆ. ಸಿದ್ಧ ಉಡುಪುಗಳಿಗೆ ಸಂಬಂಧಿಸಿದ ಘಟಕಗಳು ಪಾವತಿಸಿದ ವಿದ್ಯುತ್ ವೆಚ್ಚವನ್ನು ಮರು ಸಂದಾಯ ಮಾಡಲಾಗುವುದು. ವಾಣಿಜ್ಯ ಉತ್ಪಾದನೆಯನ್ನು ಪ್ರಾರಂಭಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಈ ಸಹಾಯಧನವು ಅರ್ಹತೆಯುಳ್ಳದ್ದಾಗಿರುತ್ತದೆ.

| ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ ವಿದ್ಯುತ್ ಸಹಾಯಧನ | | | | |
|---|---|---|---|---|
| ವಿಭಾಗಗಳು | ವಲಯ 1 | ವಲಯ 2 | ವಲಯ 3 | ವಲಯ 4 |
| ಸಿದ್ಧ ಉಡುಪು | 5 ವರ್ಷಗಳ ಅವಧಿಗಾಗಿ ಪ್ರತಿ ಯುನಿಟ್‌ಗೆ ರೂ.1/– ರಂತೆ ವಿದ್ಯುತ್ ವೆಚ್ಚದ ಮರುಪಾವತಿಯನ್ನು ಸಂದಾಯ ಮಾಡಿದೆ | | | – |

## 9.4 ವೇತನ ಸಹಾಯಧನ

ಕರ್ನಾಟಕವು ಬಹಳ ಹಿಂದಿನಿಂದಲೂ ದೃಢವಾದ ಗಾರ್ಮೆಂಟ್ (ಸಿದ್ಧ ಉಡುಪು) ಉದ್ಯಮವನ್ನು ಹೊಂದಿದೆ. ಸಿದ್ಧ ಉಡುಪು ತಯಾರಿಕಾ ಕೈಗಾರಿಕೆಯು ಹೆಚ್ಚಿನ ಕಾರ್ಮಿಕರಿಗೆ ಪ್ರೋತ್ಸಾಹ ಮತ್ತು ಕಡಿಮೆ ವೆಚ್ಚದ ಪ್ರೋತ್ಸಾಹಕವಾಗಿದೆ. ಈ ಉದ್ಯಮವು ಮಹಿಳಾ ಸ್ನೇಹಿ ಉದ್ಯೋಗವನ್ನು ಸೃಜಿಸಿ ಬೃಹತ್ ಸಂಖ್ಯೆಯಲ್ಲಿ ಮಹಿಳೆಯರಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸುತ್ತದೆ. ಈ ವಲಯವು ಹೊಸ ಉದ್ಯೋಗ ಅವಕಾಶಗಳನ್ನು ಸೃಜಿಸುವ ಸಾಮರ್ಥ್ಯ ಹೊಂದಿರುವುದರಿಂದ, ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–2024 ಕರ್ನಾಟಕದ ಸ್ಥಳೀಯ ಜನರಿಗೆ ಹೊಸ ಉದ್ಯೋಗವನ್ನು ಸೃಜಿಸುವ ಕನಿಷ್ಠ 200 ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗ ನೀಡಿದ ಮಧ್ಯಮ ಕೈಗಾರಿಕೆಗೆ ಮತ್ತು 500 ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗ ನೀಡಿದ ಬೃಹತ್ ಉದ್ಯಮಗಳಿಗೆ ಐದು ವರ್ಷಗಳವರೆಗೆ ಮಾತ್ರ ಸಹಾಯಧನವನ್ನು ನೀಡಲಾಗುವುದು.

| ಮಧ್ಯಮ ಮತ್ತು ಬೃಹತ್ ಉದ್ದಿಮೆಗಳಿಗಾಗಿ ವೇತನ ಸಹಾಯಧನ | | | |
|---|---|---|---|
| ವಲಯ 1 | ವಲಯ 2 | ವಲಯ 3 | ವಲಯ 4 |
| ರೂ.1500/– ಪ್ರತಿ ಉದ್ಯೋಗಿಗೆ | ರೂ.1000 ಪ್ರತಿ ಉದ್ಯೋಗಿಗೆ | | – |

## 9.5 ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ರಿಯಾಯಿತಿ ಶುಲ್ಕಗಳು

(i) ಕೈಗಾರಿಕಾ ಜಮೀನು/ ಹಂಚಿಕೆ ಮಾಡಲಾದ ನಿವೇಶನಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಪತ್ರ, ಗುತ್ತಿಗೆ ಹಾಗೂ ಮಾರಾಟ ಮತ್ತು ಕ್ರಯ ಪತ್ರಗಳನ್ನು ಬರೆಸುವುದು; (ii) ಗುತ್ತಿಗೆ ಮೇಲೆ ತೆಗೆದುಕೊಂಡ ಕೈಗಾರಿಕಾ ಶೆಡ್‌ಗಳು/ ನಿವೇಶನಗಳ ವಿಷಯವಾಗಿ ಭೋಗ್ಯ ಪತ್ರಗಳನ್ನು ಬರೆಸುವುದು ಹಾಗೂ (iii) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು ಮತ್ತು ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಇನ್ನಿತರ ಏಜೆನ್ಸಿಗಳಿಂದ ದೀರ್ಘವಾಗಿ ಹಣಕಾಸು ನಿಧಿಗಳನ್ನು ಪಡೆಯುವುದಕ್ಕಾಗಿ ಬರೆದುಕೊಟ್ಟ ಅಡಮಾನ ಪತ್ರ, ಈಡು ಪತ್ರ ಮುಂತಾದ ಭದ್ರತಾ ದಸ್ತಾವೇಜುಗಳು ಸೇರಿದಂತೆ, ಸಾಲ ಮತ್ತು ಋಣಭಾರ ಪತ್ರಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಮುದ್ರಾಂಕ ಶುಲ್ಕದ ವಿನಾಯಿತಿ ಮತ್ತು ಪ್ರತಿ ರೂ.1000ಕ್ಕೆ ರೂ.1/– ರ ದರದಲ್ಲಿ ನೋಂದಣಿ ರಿಯಾಯಿತಿ ಶುಲ್ಕಗಳು ಇರತಕ್ಕದ್ದು. .

| ಎಸ್‌ಎಂಇ ಮತ್ತು ಬೃಹತ್ ಉದ್ಯಮಗಳಿಗಾಗಿ ಮುಂದ್ರಾಂಕ ಶುಲ್ಕ ವಿನಾಯಿತಿ | | |
|---|---|---|
| ವಿಭಾಗಗಳು | ವಲಯ 4 ಅನ್ನು ಹೊರತುಪಡಿಸಿ ಎಲ್ಲಾ ವಲಯಗಳು | ವಲಯ 4 |
| ಸಿದ್ಧ ಉಡುಪುಗಳು | ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ಪ್ರತಿ ರೂ.1000ಕ್ಕೆ ರೂ.1/– ರ ದರದಲ್ಲಿ ನೋಂದಣಿ ರಿಯಾಯಿತಿ ಶುಲ್ಕಗಳು. | – |

## 9.6 ನೌಕರರ ರಾಜ್ಯ ವಿಮೆ (ಇಎಸ್‌ಐ) ಮತ್ತು ನೌಕರರ ಭವಿಷ್ಯ ನಿಧಿ (ಇಪಿಎಫ್) ಸಹಾಯಧನ

ನೌಕರರ ರಾಜ್ಯ ವಿಮೆ (ಇಎಸ್‌ಐ) ಮತ್ತು ನೌಕರರ ಭವಿಷ್ಯ ನಿಧಿ (ಇಪಿಎಫ್) ಕಡೆಗೆ ನಿಯೋಜಕರು ಭರಿಸಿದ ವೆಚ್ಚವನ್ನು ಮರುಸಂದಾಯ ಮಾಡಲು ಎಂಎಸ್‌ಎಂಇ ಘಟಕಗಳಿಗೆ ಸರ್ಕಾರ ಅವಕಾಶ ಕಲ್ಪಿಸಿದೆ. ಎಂಎಸ್‌ಎಂಇ ಯೋಜನೆಗಳಿಗಾಗಿ, ಸರಕು ಪಟ್ಟಿ ದಾಖಲೆಯ ಪ್ರಕಾರ, ಉದ್ದಿಮೆದಾರರು ಮಾಡಿದ ನೈಜ ಸಂದಾಯಗಳ ಮೇಲೆ ಮರುಸಂದಾಯ ಮಾಡಲಾಗುತ್ತದೆ. ಈ ನೆರವು ವಾಣಿಜ್ಯ ಉತ್ಪಾದನೆಯ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಲಭ್ಯವಿರುತ್ತದೆ.

| ಎಂಎಸ್‌ಎಂಇ ಉದ್ದಿಮೆಗಳಿಗಾಗಿ, ನೌಕರರ ರಾಜ್ಯ ವಿಮೆ ಮತ್ತು ನೌಕರರ ಭವಿಷ್ಯ ನಿಧಿ | | |
|---|---|---|
| ವಿಭಾಗಗಳು | ವಲಯ 4 ಅನ್ನು ಹೊರತುಪಡಿಸಿ ಎಲ್ಲಾ ವಲಯಗಳು | ವಲಯ 4 |
| ಸಿದ್ಧ ಉಡುಪು ವಲಯ | ಎಲ್ಲಾ ನೂತನ ಘಟಕಗಳಿಗಾಗಿ 5 ವರ್ಷಗಳ ಅವಧಿಯವರೆಗೆ ಪ್ರತಿ ತಿಂಗಳು ಪ್ರತಿಯೊಬ್ಬ ನೌಕರರ ವೇತನ ದರದಂತೆ ಇಪಿಎಫ್ ಮತ್ತು ಇಎಸ್‌ಐ ಸಹಾಯಧನವಾಗಿ ನಿಯೋಜಿತರ ವಂತಿಗೆಯ ಶೇಕಡಾ75ರಷ್ಟನ್ನು ಮರುಸಂದಾಯ ಮಾಡಲಾಗುತ್ತದೆ. | – |

# 10. ಮೆಗಾ ಘಟಕಗಳಿಗಾಗಿ ವಿಶೇಷ ಪ್ಯಾಕೇಜ್

ಕೈಮಗ್ಗ ಮತ್ತು ಜವಳಿ ಇಲಾಖೆಯು ಮೆಗಾ ಯೋಜನೆಗಳನ್ನು ಪ್ರೋತ್ಸಾಹಿಸುವುದು ಮತ್ತು ರಾಜ್ಯದಲ್ಲಿ ಉದ್ಯೋಗ ಸೃಜನೆ ಚಟುವಟಿಕೆಗಳು ಮತ್ತು ಅಂತರ್ಗತ ವಲಯ ಅಭಿವೃದ್ಧಿಗೆ ಬಹುಪಯೋಗಿ ಪರಿಣಾಮಕಾರಿಯಾಗಿರುವ ಮತ್ತು ಸಮಗ್ರವಾಗಿರುವ ಜವಳಿ ಮತ್ತು ಸಿದ್ಧ ಉಡುಪುಗಳಲ್ಲಿ ಮೆಗಾ ಯೋಜನಾ ಘಟಕಗಳನ್ನು ಉತ್ತೇಜಿಸಲು ಮತ್ತು ಸೌಲಭ್ಯ ಕಲ್ಪಿಸಲು ಉದ್ದೇಶಿಸಿದೆ.

ಬೃಹತ್ ಉದ್ಯಮಗಳಿಗಾಗಿ ಸೂಚಿಸಲಾದ ಪ್ರೋತ್ಸಾಹಕಗಳು/ ರಿಯಾಯಿತಿಗಳನ್ನು ಮೀರಿ ಮೆಗಾ ಉದ್ಯಮಗಳೆಂದು ಅರ್ಹತೆ ಪಡೆಯುವುದಕ್ಕೆ ಈ ಕೆಳಕಂಡ ಅಂಶಗಳ ಪ್ರಕಾರ ಪ್ರಕರಣವಾರು ಪ್ರೋತ್ಸಾಹಕಗಳು/ ರಿಯಾಯಿತಿಗಳ ಪ್ಯಾಕೇಜ್ ಅನ್ನು ಪರಿಗಣಿಸಲಾಗುವುದು.

- **ಮೆಗಾ ಜವಳಿ ಘಟಕಗಳು**– ರೂ.300 ಕೋಟಿಗಳಿಗಿಂತ ಹೆಚ್ಚಿನ ಸ್ಥಿರಾಸ್ತಿಗಳಲ್ಲಿ ಹೂಡಿಕೆ ಮತ್ತು ಮೊದಲ ರೂ.300 ಕೋಟಿಗಳ ಹೂಡಿಕೆಗೆ ಕನಿಷ್ಠ 350 ಜನರಿಗೆ ಉದ್ಯೋಗ ಮತ್ತು ಪ್ರಮಾಣಾನುಸಾರವಾಗಿ ಪ್ರತಿ ಹೆಚ್ಚುವರಿ ರೂ.100 ಕೋಟಿ ಹೂಡಿಕೆಗೆ ಹೆಚ್ಚುವರಿ 75 ಜನರಿಗೆ ಉದ್ಯೋಗಾವಕಾಶ.

- **ಮೆಗಾ ಸಿದ್ಧ ಉಡುಪು ಘಟಕಗಳು**– ರೂ.200 ಕೋಟಿಗಳಿಗಿಂತ ಹೆಚ್ಚಿನ ಸ್ಥಿರಾಸ್ತಿಯಲ್ಲಿ ಹೂಡಿಕೆ ಮತ್ತು ಮೊದಲ ರೂ.200 ಕೋಟಿಗಳ ಹೂಡಿಕೆಗೆ ಕನಿಷ್ಠ 3000 ಜನರಿಗೆ ಉದ್ಯೋಗಾವಕಾಶ ಮತ್ತು ಪ್ರಮಾಣಾನುಸಾರವಾಗಿ ಪ್ರತಿ ಹೆಚ್ಚುವರಿ ರೂ.100 ಕೋಟಿಗಳ ಹೂಡಿಕೆಗೆ ಹೆಚ್ಚುವರಿ 1000 ಉದ್ಯೋಗಾವಕಾಶಗಳು.

## 11. ಪ್ರೋತ್ಸಾಹಧನದ ಮೇಲಿನ ಮಿತಿ

- ನೀತಿಯ ಉಪಬಂಧಗಳಿಗನುಸಾರವಾಗಿ ನೀಡಲಾದ ಒಟ್ಟಾರೆ ಪ್ರೋತ್ಸಾಹಧನವು ಕಲ್ಯಾಣ ಕರ್ನಾಟಕವಲ್ಲದ ಪ್ರದೇಶದಲ್ಲಿನ ಬೃಹತ್ ಮತ್ತು ಎಂಎಸ್ಎಂಇ ಘಟಕಗಳಿಗಾಗಿ ಸ್ಥಿರ ಬಂಡವಾಳ ಹೂಡಿಕೆಯು ಶೇ.40ರಷ್ಟು ಮೀರತಕ್ಕದ್ದಲ್ಲ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಬೃಹತ್ ಮತ್ತು ಎಂಎಸ್ಎಂಇ ಘಟಕಗಳಿಗಾಗಿ ಸ್ಥಿರ ಬಂಡವಾಳ ಹೂಡಿಕೆಯು ಶೇ.50ರಷ್ಟು ಮೀರತಕ್ಕದ್ದಲ್ಲ.
- ಒತ್ತು ನೀಡುವ (ಥ್ರಸ್ಟ್ ಸೆಕ್ಟಾರ್) ವಲಯದ ಘಟಕಗಳಿಗಾಗಿ ಸ್ಥಿರ ಬಂಡವಾಳ ಹೂಡಿಕೆಯ ಶೇ.5ರಷ್ಟು ಹೆಚ್ಚುವರಿ ಪ್ರೋತ್ಸಾಹಧನ.
- ರಾಜ್ಯಾದ್ಯಂತ ಸ್ಥಾಪಿಸಲಾದ ಪ್ರಧಾನ(ಆ್ಯಂಕರ್) ಘಟಕಗಳಿಗಾಗಿ ಸ್ಥಿರ ಬಂಡವಾಳ ಹೂಡಿಕೆಯ ಶೇ.5ರಷ್ಟು ಹೆಚ್ಚುವರಿ ಪ್ರೋತ್ಸಾಹಧನ.
- ಎಸ್‌ಸಿ/ಎಸ್‌ಟಿ ಉದ್ಯಮಿಗಳು/ ವಿಕಲಚೇತನ ವ್ಯಕ್ತಿಗಳು, ಅಲ್ಪಸಂಖ್ಯಾತರು/ ನಿವೃತ್ತ ಪುರುಷ/ ಮಹಿಳೆಯರಿಗೆ ಪ್ರಮಾಣಬದ್ಧ ಪ್ಯಾಕೇಜ್ ಅನ್ನು ಮೀರಿ ಶೇ.5ರಷ್ಟು ಹೆಚ್ಚುವರಿ ಪ್ರೋತ್ಸಾಹಧನ.
- ಮಂಜೂರಾದ ಪ್ರೋತ್ಸಾಹಧನವನ್ನು ಪಡೆಯಲು ವಿವರವಾದ ಮಾರ್ಗಸೂಚಿಗಳನ್ನು ಕಾರ್ಯನಿರ್ವಹಣಾ ಕೈಪಿಡಿಯಲ್ಲಿ ಉಲ್ಲೇಖಿಸಲಾಗುವುದು ಮತ್ತು ಪ್ರೋತ್ಸಾಹಧನಗಳನ್ನು ಐದು ವರ್ಷಗಳ ಅವಧಿಗೆ ಹಂಚಿಕೆ ಮಾಡಲಾಗುವುದು.

## 12. ಮೂಲಭೂತ ಸೌಕರ್ಯ ಅಭಿವೃದ್ಧಿ

### 12.1 ಗ್ರೀನ್‌ಫೀಲ್ಡ್ ಜವಳಿ ಪಾರ್ಕ್‌ಗಳಿಗಾಗಿ ಸಾಮಾನ್ಯ ಮೂಲಭೂತ ಸೌಕರ್ಯ



ರಾಜ್ಯದಲ್ಲಿ ಗ್ರೀನ್‌ಫೀಲ್ಡ್ ಜವಳಿ ಮತ್ತು ಸಿದ್ಧ ಉಡುಪುಗಳ ಕೈಗಾರಿಕಾ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಮತ್ತು ವೆಚ್ಚ ಕಡಿತ ಮಾಡುವುದು, ಗುಣಮಟ್ಟ ಹೆಚ್ಚಿಸುವುದು ಮತ್ತು ಒಟ್ಟಾರೆ ಸ್ಪರ್ಧಾತ್ಮಕತೆಗೆ ಕೈಗಾರಿಕೆಯನ್ನು ಸಶಕ್ತಗೊಳಿಸಲು ಒಂದು ಕ್ಲಸ್ಟರ್ ಆಧಾರಿತ ಅಭಿವೃದ್ಧಿ ಕಾರ್ಯತಂತ್ರವನ್ನು ಮುಂದುವರೆಸಲಾಗುವುದು. ಈ ಪಾರ್ಕ್‌ಗಳಿಗೆ, ವಲಯಗಳಿಗೆ, ಸಂಯೋಜಿತ ಜವಳಿ ಉತ್ಪನ್ನ ಸೌಕರ್ಯಗಳು ಎಂದರೆ, ನೂಲುವಿಕೆ, ನೇಯುವಿಕೆ, ಸಂಸ್ಕರಣೆ, ಉಡುಪು ತಯಾರಿಕೆ ಮತ್ತು ಅಗತ್ಯವಿರಬಹುದಾದ ಇತರೆ ಪೂರಕ ಘಟಕಗಳು ಅಥವಾ ನೇಯುವಿಕೆ ಅಥವಾ ಸಂಸ್ಕರಣೆ ಮುಂತಾದ ವಲಯ ನಿರ್ದಿಷ್ಟ ಚಟುವಟಿಕೆಗಳು ಮುಂತಾದವುಗಳು ಒಳಗೊಳ್ಳುತ್ತವೆ.

ಎ) **ಅರ್ಹತೆ:** ಪ್ರತ್ಯೇಕ ಉದ್ಯಮ/ ಉದ್ಯಮಿಗಳ ತಂಡವನ್ನೊಳಗೊಂಡ ಬಳಕೆದಾರರ ಉದ್ಯಮವು ರಚಿಸಿದ / ವಿಶೇಷ ಉದ್ದೇಶಿತ ವಾಹಕ (ಎಸ್‌ಪಿವಿ)ವು ಪೂರಕ ಸಹಾಯಧನಕ್ಕಾಗಿ ಈ ಮುಂದಿನಂತೆ ಅರ್ಹವಾಗಿರುತ್ತದೆ:

- ಅಭಿವೃದ್ಧಿಪಡಿಸಲಾಗುತ್ತಿರುವ ಜವಳಿ ಪಾರ್ಕ್ ಕನಿಷ್ಠ 15 ಎಕರೆ ವಿಸ್ತೀರ್ಣವನ್ನು ಹೊಂದಿರತಕ್ಕದ್ದು.
- ಬಳಕೆದಾರರ ಉದ್ಯಮದಿಂದ ವೈಯಕ್ತಿಕವಾಗಿ, ಗ್ರೀನ್‌ಫೀಲ್ಡ್ ಜವಳಿ ಪಾರ್ಕ್ / ಗ್ರೀನ್‌ಫೀಲ್ಡ್ ಜವಳಿ ಪಾರ್ಕ್‌ಗಳಿಗಾಗಿ ಸಾಮಾನ್ಯ ಮೂಲಭೂತ ಸೌಕರ್ಯವನ್ನು ಸ್ಥಾಪಿಸುವುದಕ್ಕಾಗಿಯೂ ಸಹ ಮುಂದೆ ಬರಬಹುದು.
- ವಿಶೇಷ ಉದ್ದೇಶಿತ ವಾಹಕ (ಬಳಕೆ ಉದ್ಯಮದಿಂದ ಒಬ್ಬ ಅಥವಾ ಐವರು ಉದ್ಯಮಿಗಳು) ಎಸ್‌ಪಿವಿಯನ್ನು ಸ್ಥಾಪಿಸುವುದಕ್ಕೆ ಒಟ್ಟಾಗಿ ಬರಬೇಕು. ಸಂಘಗಳೂ ಸಹ ಸದಸ್ಯರಾಗಿ ಎಸ್‌ಪಿವಿಯನ್ನು ಸೇರಬಹುದು.
- ಪ್ರತ್ಯೇಕ ಉದ್ಯಮ/ ವಿಶೇಷ ಉದ್ದೇಶಿತ ವಾಹಕವು ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಶೇಕಡ 100ರಷ್ಟು ಈಕ್ವಿಟಿಯನ್ನು ಹೊಂದಿರತಕ್ಕದ್ದು. ಯೋಜನೆಯು ಪೂರ್ಣಗೊಂಡ ನಂತರ ಪ್ರತ್ಯೇಕ ಉದ್ಯಮವು/ ಎಸ್‌ಪಿವಿಯು ಕನಿಷ್ಠ ಶೇಕಡಾ 51ರಷ್ಟು ಈಕ್ವಿಟಿ ಹೊಂದಿರತಕ್ಕದ್ದು ಮತ್ತು ಬಾಕಿ ಶೇ. 49ನ್ನು ರಚನಾತ್ಮಕ ಪಾಲುದಾರರು/ ಡೆವಲಪರ್‌ಗಳು/ ಸರ್ಕಾರದ ಏಜೆನ್ಸಿಗಳು ಮುಂತಾದವರು ಹೊಂದಿರಬಹುದು. ಒಂದು ವೇಳೆ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಪ್ರತ್ಯೇಕ ಉದ್ಯಮ/ ಎಸ್ಪಿವಿಯು ತನ್ನ ಈಕ್ವಿಟಿಯ ಬಾಧ್ಯತೆಯನ್ನು ಕಡಿಮೆಗೊಳಿಸಲು ಬಯಸಿದರೆ, ಆ ಕುರಿತು ಕರ್ನಾಟಕ ಸರ್ಕಾರದ ಕೈಮಗ್ಗ ಮತ್ತು ಜವಳಿ ಇಲಾಖೆಯ ಪೂರ್ವಾನುಮೋದನೆ ಪಡೆಯುವ ಮೂಲಕ ಹಾಗೆ ಮಾಡತಕ್ಕದ್ದು.
- ಬಳಕೆದಾರರ ಉದ್ಯಮವು ಪ್ರತ್ಯೇಕ ಉದ್ಯಮದ/ ಎಸ್‌ಪಿವಿಯ ಕನಿಷ್ಠ ಶೇ. 51ರಷ್ಟು ಈಕ್ವಿಟಿಯನ್ನು ಹೊಂದಿರತಕ್ಕದ್ದು. ಉಳಿದ ಶೇ. 49ರಷ್ಟನ್ನು ರಚನಾತ್ಮಕ ಪಾಲುದಾರರು/ ಡೆವಲಪರ್ ಗಳು/ ಸರ್ಕಾರದ ಏಜೆನ್ಸಿಗಳು ಮುಂತಾದವರು ಹೊಂದಿರಬಹುದು.

ಬಿ) ಸಬ್ಸಿಡಿಗಾಗಿ ಕೆಳಕಂಡ ಘಟಕಾಂಶಗಳು ಅರ್ಹವಾಗಿರುತ್ತವೆ:

- ಕಾರ್ಖಾನೆ ಕಟ್ಟಡ
- ಈ ಕೆಳಕಂಡಂತಹ ಸಾಮಾನ್ಯ ಮೂಲಭೂತ ಸೌಕರ್ಯಗಳು:
  - ಆವರಣ ಗೋಡೆ
  - ರಸ್ತೆಗಳು
  - ಚರಂಡಿ ವ್ಯವಸ್ಥೆ
  - ಕೊಳಚೆ ನೀರು ಸಂಸ್ಕರಣಾ ಘಟಕ
  - ನೀರು ಪೂರೈಕೆ
  - ಸ್ವಯಂ ವಿದ್ಯುತ್ ಉತ್ಪಾದನಾ ಸ್ಥಾವರ/ ಪರ್ಯಾಯ ವಿದ್ಯುತ್ ಮೂಲವನ್ನೊಳಗೊಂಡಂತೆ ವಿದ್ಯುತ್ ಸರಬರಾಜು
  - ಸಾಮಾನ್ಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ

- ತ್ಯಾಜ್ಯ ವಿಲೇವಾರಿ ಸೌಲಭ್ಯಗಳು
- ದೂರಸಂಪರ್ಕ ವ್ಯವಸ್ಥೆಗಳು
- ವಿದ್ಯುತ್, ನೀರು ಮತ್ತು ಪಾರ್ಕ್‌ಗೆ ಸಂಪರ್ಕ ರಸ್ತೆಗಳನ್ನು ಒಳಗೊಂಡಂತೆ ಬಾಹ್ಯ ಮೂಲಭೂತ ಸೌಕರ್ಯಗಳು.

▶ ಮೂಲಭೂತ ಸೌಕರ್ಯವನ್ನಾಧರಿಸಿದ ಯಾವುದೇ ಇತರೆ ಅಗತ್ಯತೆಗಳು (ಈ ಕೆಳಕಂಡಂತಹ ಸಾಮಾನ್ಯ ಸೌಕರ್ಯಗಳಿಗಾಗಿ ಕಟ್ಟಡ)

- ಪರೀಕ್ಷಣಾ ಪ್ರಯೋಗಾಲಯ
- ವಿನ್ಯಾಸ ಕೇಂದ್ರ
- ತರಬೇತಿ ಕೇಂದ್ರ
- ವ್ಯಾಪಾರ/ ಪ್ರದರ್ಶನ ಕೇಂದ್ರ
- ಗೋದಾಮು ಸೌಲಭ್ಯ
- ಕಚ್ಚಾ ವಸ್ತುಗಳ ಡಿಪೋ/ ಸಂಗ್ರಹಾಗಾರ
- ಮಕ್ಕಳ ಪಾಲನಾ ಗೃಹ (ಶಿಶುವಿಹಾರ), ಕ್ಯಾಂಟಿನ್, ಮಲಗುವ ಕೋಣೆ, ಮನೋರಂಜನಾ ಸೌಲಭ್ಯಗಳು ಮುಂತಾದ ಕಾರ್ಮಿಕರ ಸೌಲಭ್ಯಗಳು.
- ಸೇವೆ ಒದಗಿಸುವವರ ಕಚೇರಿ ಕಟ್ಟಡಗಳು
- ಬ್ಯಾಂಕ್‌ಗಳು/ ಎಟಿಎಂ ಇತ್ಯಾದಿಗಳಿಗಾಗಿ ಕಟ್ಟಡಗಳು
- ಅಗ್ನಿಶಾಮಕ ಇತ್ಯಾದಿಗಳಿಗಾಗಿ ಕಟ್ಟಡಗಳು.

ಯೋಜನೆಗಳಿಗೆ ಸಂಬಂಧಿಸಿದ ಜಮೀನುಗಳು ಪ್ರೋತ್ಸಾಹಧನವನ್ನು ನೀಡುವುದಕ್ಕೆ ಅರ್ಹ ಘಟಕಾಂಶವಾಗುವುದಿಲ್ಲ; ಆದರೆ, ಅವು ಬ್ಯಾಂಕ್/ ಹಣಕಾಸು ಸಂಸ್ಥೆಗಳ ಅನುಮೋದನೆಗಾಗಿ ಮತ್ತು ಸ್ವತಃ ಉದ್ಯಮಿಗಳು ಹಣ ಹೂಡುವುದಕ್ಕೆ ಅಗತ್ಯವಾಗಿರುವಂತಹ ಯೋಜನೆಯ ವೆಚ್ಚದ ಭಾಗವಾಗಬಹುದು.

ಸಿ) **ಸಹಾಯಧನ:** ಪ್ರತ್ಯೇಕ ಉದ್ಯಮಕ್ಕೆ ಗ್ರೀನ್‌ಫೀಲ್ಡ್ ಪಾರ್ಕ್‌ಗಳ ಸಾಮಾನ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಅವು ಯಾವ ವಲಯಗಳಿವೆ ಎಂಬುದನ್ನು ಪರಿಗಣಿಸದೆ ಪ್ರತಿ ಪಾರ್ಕ್ ಯೋಜನೆಗೆ ಯೊಜನಾ ವೆಚ್ಚದ ಶೇ.25ರಷ್ಟು ಅಥವಾ ರೂ.25 ಕೋಟಿಗಳವರೆಗೆ ಯಾವುದು ಕಡಿಮೆಯೋ ಅಷ್ಟು ಮೊತ್ತದ ಒಂದು ಬಾರಿಯ ಸಹಾಯಧನ ನೆರವನ್ನು ಒದಗಿಸಲಾಗುವುದು. ಎಸ್‌ಪಿವಿಗೆ ಗ್ರೀನ್‌ಫೀಲ್ಡ್ ಕಾರ್ಕ್‌ಗಳ ಸಾಮಾನ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಅವು ಯಾವ ವಲಯಗಳಿವೆ ಎಂಬುದನ್ನು ಪರಿಗಣಿಸದೆ ಪ್ರತಿ ಪಾರ್ಕ್ ಯೋಜನೆಗೆ ಯೊಜನಾ ವೆಚ್ಚದ ಶೇ.40ರಷ್ಟು ಅಥವಾ ರೂ.40 ಕೋಟಿಗಳವರೆಗೆ ಯಾವುದು ಕಡಿಮೆಯೋ ಅಷ್ಟು ಮೊತ್ತದ ಒಂದು ಬಾರಿಯ ಸಹಾಯಧನ ನೆರವನ್ನು ಒದಗಿಸಲಾಗುವುದು. ಹಾಗೆಯೇ, ಈಗಾಗಲೇ ಕೇಂದ್ರ ಸರ್ಕಾರದ ಯಾವುದೇ ಯೋಜನೆಯ ಅಡಿಯಲ್ಲಿ ಅನುಮೋದನೆ ಪಡೆದು ಹಣಕಾಸು ನೆರವನ್ನು ಪಡೆಯುತ್ತಿರುವ ಯೋಜನೆಗಳು ನೀತಿ ಅವಧಿಯಲ್ಲಿ ಅಂತಹ ಯೋಜನೆಗಳ ಅಡಿಯಲ್ಲಿ ಹೊಸ ಅನುಮೋದನೆ ಪಡೆಯಬಹದಾಗಿದ್ದು, ಅವುಗಳಿಗೆ ಅಂತಹ ಪಾರ್ಕ್ ಯೋಜನೆಗಳಿಗಾಗಿ ರಾಜ್ಯ ಸರ್ಕಾರದ ಪೂರಕ ಪ್ರೋತ್ಸಾಹಧನವಾಗಿ ಯೋಜನಾ ವೆಚ್ಚದ ಹೆಚ್ಚುವರಿ ಶೇ.10ರಷ್ಟು ಮೊತ್ತವನ್ನು ಮಾತ್ರ ಒದಗಿಸಲಾಗುತ್ತದೆ. ರಾಜ್ಯ ಸರ್ಕಾರದಿಂದ ಬೆಂಬಲ ಸಹಾಯಧನವನ್ನು 4 ಸಮಾನ ಕಂತುಗಳಲ್ಲಿ ನೀಡಲಾಗುವುದು. ಪ್ರೋತ್ಸಾಹಧನದ ವಿವರಣೆಯ ಮೈಲುಗಲ್ಲುಗಳನ್ನು ನೀತಿಯ ಕಾರ್ಯನಿರ್ವಹಣಾ ಕೈಪಿಡಿಯಲ್ಲಿ ವಿವರಿಸಲಾಗುವುದು. ಅದು ಆಯಾ ಅಭಿವೃದ್ಧಿ ಮೈಲುಗಲ್ಲುಗಳನ್ನು ಸಹ ನಿಗದಿಪಡಿಸುತ್ತದೆ.

## 12.2. ಬ್ರೌನ್‌ಫೀಲ್ಡ್ ಸಮೂಹ ಅಭಿವೃದ್ಧಿ:

ವಿಸ್ತರಣೆ ಅಥವಾ ತಂತ್ರಜ್ಞಾನದ ಉನ್ನತೀಕರಣದ ಮೂಲಕ ಸುಸ್ಥಿರ ಬೆಳವಣಿಗೆಯನ್ನು ಸಾಧಿಸುವುದಕ್ಕೆ ಮತ್ತು ಅಂತರಾಷ್ಟ್ರೀಯವಾಗಿ ಸ್ಪರ್ಧಾತ್ಮಕತೆಯನ್ನು ಸಾಧಿಸುವ ಉದ್ದೇಶದಿಂದ ಪ್ರಸ್ತುತ ಜವಳಿ ಘಟಕಗಳನ್ನು ಹೊಂದಿರುವ ಕೈಗಾರಿಕಾ ಎಸ್ಟೇಟ್‌ಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಸಮೂಹ ಆಧಾರಿತ ಅಭಿವೃದ್ಧಿ ಕಾರ್ಯತಂತ್ರವನ್ನು ಮುಂದುವರಿಸಲಾಗುವುದು.

**ಎ) ಅರ್ಹತೆ:**

- ಪ್ರತ್ಯೇಕ ಉದ್ಯಮ/ ಬಳಕೆದಾರ ಕೈಗಾರಿಕೆಯಿಂದ ಮತ್ತು/ ಅಥವಾ ಕನಿಷ್ಠ 5 ಜನರ ಘಟಕಗಳನ್ನು ಹೊಂದಿರುವ ಪ್ರಸ್ತುತ ಕೈಗಾರಿಕಾ ಎಸ್ಟೇಟ್‌ಗಳ ಸಿಇಟಿಪಿ/ ಎಸ್‌ಪಿವಿ ಯಂತಹ ಸಮಾನ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾಡಿಕೊಂಡ ಕೈಗಾರಿಕಾ ಸಂಘಗಳಿಂದ ಕನಿಷ್ಠ ಒಂದು ಅಥವಾ ಐವರು ಉದ್ಯಮಿಗಳನ್ನು ವೈಯಕ್ತಿಕ ವಿಶೇಷ ಉದ್ದೇಶಿತ ವಾಹಕ (ಎಸ್‌ಪಿವಿ).

- ಸಾಮಾನ್ಯ ಮೂಲಭೂತ ಸೌಕರ್ಯಗಳೆಂದರೆ, ಪರೀಕ್ಷಾ ಸೌಲಭ್ಯಗಳು, ಇತ್ಯಾದಿಗಳಂತಹ ಸಿಇಟಿಪಿ, ಎಸ್‌ಟಿಪಿ, ಸೌಲಭ್ಯಗಳಾಗಿರುತ್ತವೆ.

**ಬಿ) ಧನಸಹಾಯ:** ಪ್ರತ್ಯೇಕ ಉದ್ಯಮ/ಎಸ್‌ಪಿವಿಗೆ ಬ್ರೌನ್‌ಫೀಲ್ಡ್ ಸಮೂಹದ ಸಾಮಾನ್ಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಿಕ್ಕಾಗಿ ಅವು ಯಾವ ವಲಯದಲ್ಲಿವೆ ಎಂಬುದನ್ನು ಲೆಕ್ಕಿಸದೆ ಯೋಜನಾ ವೆಚ್ಚದ ಶೇ.40ರಷ್ಟು ಅಥವಾ ಪ್ರತಿಯೊಂದು ಕೈಗಾರಿಕಾ ಎಸ್ಟೇಟ್ ಯೋಜನೆಗೆ ರೂ.12 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತದ ಒಂದು ಬಾರಿಯ ಸಹಾಯಧನದ ನೆರವನ್ನು ಒದಗಿಸಲಾಗುವುದು. ಪ್ರೋತ್ಸಾಹಧನದ ವಿತರಣೆಯ ಮೈಲುಗಲ್ಲುಗಳನ್ನು ನೀತಿಯ ಕಾರ್ಯಾಚರಣೆ ಕೈಪಿಡಿಯಲ್ಲಿ ವಿವರಿಸಲಾಗುವುದು. ಇದು ಆಯಾ ಅಭಿವೃದ್ಧಿ ಮೈಲುಗಲ್ಲುಗಳನ್ನು ಸಹ ನಿಗದಿಪಡಿಸುತ್ತದೆ.

## 12.3. ಸಾಮಾನ್ಯ ತ್ಯಾಜ್ಯ ಜಲ ಸಂಸ್ಕರಣಾ ಸ್ಥಾವರ ಮತ್ತು ಹಾನಿಕಾರಕ ತ್ಯಾಜ್ಯ ವಿಲೇವಾರಿ ಸೌಲಭ್ಯ:

ಇಂದು, ಜವಳಿ ಉದ್ಯಮವು ಅಪಾರ ಪ್ರಮಾಣದ ವಸ್ತುಗಳನ್ನು ಮತ್ತು ಇಂಧನ ಸಂಪನ್ಮೂಲಗಳನ್ನು ಬಳಸುವ ಹಾಗೂ ಪರಿಸರದ ಮೇಲೆ ಬಹು ದೊಡ್ಡ ಪ್ರಮಾಣದ ಋಣಾತ್ಮಕ ಪರಿಣಾಮವನ್ನು ಬೀರುವಂತಹ ಅಪಾರ ಪ್ರಮಾಣದ ತ್ಯಾಜ್ಯವನ್ನು ಉತ್ಪಾದಿಸುವ ವಾತಾವರಣವನ್ನು ಎದುರಿಸುತ್ತಿದೆ. ಶೂನ್ಯ ತ್ಯಾಜ್ಯ ವಿಲೇವಾರಿಯು ಜವಳಿ ಕೈಗಾರಿಕೋದ್ಯಮವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲುಗಳಲ್ಲಿ ಒಂದಾಗಿದೆ. ಆದುದರಿಂದ, ಸಾಮಾನ್ಯ ತ್ಯಾಜ್ಯ ಜಲ ಸಂಸ್ಕರಣಾ ಘಟಕಗಳು / ಹಾನಿಕಾರಕ ತ್ಯಾಜ್ಯ ವಿಲೇವಾರಿ ಸೌಲಭ್ಯಗಳ ಸ್ಥಾಪನೆಗಾಗಿ ಒಂದು ಬಾರಿಯ ಸಹಾಯಧನವನ್ನು ಒದಗಿಸುವುದಕ್ಕಾಗಿ ಉದ್ದೇಶಿಸಲಾಗಿದೆ.



ಎ) **ಅರ್ಹತೆ:** ಎಲ್ಲಾ ಪ್ರದೇಶಗಳಾದ್ಯಂತ ಇರುವ ಪ್ರತ್ಯೇಕ ಉದ್ಯಮವು ಕನಿಷ್ಠ ಒಂದು ಅಥವಾ ಐದು ಉದ್ಯಮಿಗಳ ತಂಡವನ್ನು ಹೊಂದಿರುವ ಬಳಕೆದಾರರ ಉದ್ಯಮವು ಸ್ಥಾಪಿಸಿದ / ಎಸ್‌ಪಿವಿಯು ಸಹಾಯಧನಕ್ಕೆ ಅರ್ಹವಾಗಿರುತ್ತವೆ.

ಬಿ) **ಯೋಜನಾ ಘಟಕಾಂಶಗಳು:** ಬೆಂಬಲ ಸಹಾಯಧನದ ಉದ್ದೇಶಕ್ಕಾಗಿ ಯೋಜನಾ ವೆಚ್ಚವು ಈ ಕೆಳಕಂಡ ಘಟಕಾಂಶಗಳನ್ನು ಒಳಗೊಂಡಿರತಕ್ಕದ್ದು:

- ರಸ್ತೆಗಳು, ನೀರು ಸರಬರಾಜು, ವಿದ್ಯುತ್, ಇತ್ಯಾದಿಯಂತಹ ಮೂಲಭೂತ ಸೌಕರ್ಯಗಳು (ಭೂಮಿ ಮತ್ತು ಭೂ-ಅಭಿವೃದ್ಧಿ ವೆಚ್ಚಗಳನ್ನು ಹೊರತುಪಡಿಸಿ).
- ಕಟ್ಟಡ
- ಸ್ಥಾವರ ಮತ್ತು ಯಂತ್ರೋಪಕರಣ

ಸಿ) **ಧನಸಹಾಯ:** ಪ್ರತ್ಯೇಕ ಉದ್ಯಮಕ್ಕೆ ಎಸ್‌ಪಿವಿಗಳಿಗೆ ಯೋಜನಾ ವೆಚ್ಚದ ಶೇ.50ರವರೆಗೆ ಒಂದು ಬಾರಿಯ ಸಹಾಯಧನದ ನೆರವನ್ನು ನೀಡಲಾಗುವುದು ಮತ್ತು ಕೈಮಗ್ಗ ಯೋಜನೆಗಳ ಸಂದರ್ಭದಲ್ಲಿ, ಸಹಾಯಧನವನ್ನು ಯೋಜನಾ ವೆಚ್ಚದ ಶೇ.80ಕ್ಕೆ ಸೀಮಿತಗೊಳಿಸಲಾಗುತ್ತದೆ. ಈ ಒಂದು ಬಾರಿ ಅನುದಾನದ ನೆರವು, ಇತರೆ ಎಲ್ಲಾ ಪ್ರೋತ್ಸಾಹಧನವನ್ನು ಸಹ ಒಳಗೊಳ್ಳುತ್ತದೆ. ಭಾರತ ಸರ್ಕಾರದ ಯಾವುದೇ ಯೋಜನೆಯ ಅಡಿಯಲ್ಲಿ ಹಣಕಾಸು ನೆರವನ್ನು ಪಡೆಯುತ್ತಿರುವ ಯೋಜನೆಗಳ ಸಂದರ್ಭದಲ್ಲಿ, ಸಹಾಯಧನವು ಯೋಜನಾ ವೆಚ್ಚದ ಶೇ. 20ರಷ್ಟು ಅಥವಾ ರೂ.5 ಕೋಟಿ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಮಿತಿಗೊಳಿಸಲಾಗುವುದು. ನೇರವನ್ನು ನಾಲ್ಕು ಸಮನಾಂತರ ಕಂತುಗಳಲ್ಲಿ ನೀಡಲಾಗುವುದು. ಪ್ರೋತ್ಸಾಹಧನದ ವಿತರಣೆಯ ಮೈಲುಗಲ್ಲುಗಳನ್ನು ನೀತಿಯ ಕಾರ್ಯಾಚರಣೆಗಳ ಕೈಪಿಡಿಯಲ್ಲಿ ವಿವರಿಸಲಾಗುವುದು. ಇದು ಆಯಾ ಅಭಿವೃದ್ಧಿ ಮೈಲುಗಲ್ಲುಗಳನ್ನು ಸಹ ನಿಗದಿಪಡಿಸುತ್ತದೆ.

## 13. ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ಉನ್ನತೀಕರಣ




ಕೌಶಲ್ಯವುಳ್ಳ ಮಾನವಶಕ್ತಿಯ ಲಭ್ಯತೆ ಮತ್ತು ಅರ್ಹತೆಗಳು ಜಾಗತಿಕವಾಗಿ ಸ್ಪರ್ಧಾತ್ಮಕವಾಗಲು ಜವಳಿ ಮತ್ತು ಸಿದ್ಧ ಉಡುಪು ಉದ್ಯಮಕ್ಕೆ ಪೂರ್ವಅಗತ್ಯತೆಗಳಾಗಿವೆ. ಆದುದರಿಂದ ಕರ್ನಾಟಕದಲ್ಲಿ ಈ ನೀತಿಯು ಜವಳಿ ವಲಯದಲ್ಲಿ ಉನ್ನತಮಟ್ಟದ ಮೌಲ್ಯದ ಸರಪಳಿಯಲ್ಲಿನ ಕೌಶಲ್ಯಗಳಿಗೆ ಹಾಗೂ ವಿವಿಧ ಉಪವಲಯಗಳಿಗಾಗಿ ಅಗತ್ಯತೆ ಆಧಾರಿತ ಕೌಶಲ್ಯಗಳಿಗೆ ಸಾಕಷ್ಟು ಆದ್ಯತೆ ಮತ್ತು ಒತ್ತನ್ನು ನೀಡುವುದಷ್ಟೇ ಅಲ್ಲದೆ, ಜವಳಿ ಕೌಶಲ್ಯ ಕಲಿಕೆ / ಕೌಶಲ್ಯದ ಭೋದನೆಗೆ ಸಂಬಂಧಿಸಿದ ಕೌಶಲ್ಯಾಭಿವೃದ್ಧಿಯ ಬಗ್ಗೆ, ತಂತ್ರಜ್ಞಾನ ಆಧಾರಿತ ಕೌಶಲ್ಯದ ಬಗ್ಗೆ ಮತ್ತು ಕೌಶಲ್ಯದ ಮೂಲ ಸೌಕರ್ಯದ ಅಭಿವೃದ್ಧಿಯ ಬಗ್ಗೆ ಒತ್ತು ನೀಡುತ್ತದೆ. ಇದು ನೀತಿ ಅವಧಿಯಲ್ಲಿ ಕನಿಷ್ಠ 5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿ ನಿರುದ್ಯೋಗಿ ಯುವಕರನ್ನು ತರಬೇತುಗೊಳಿಸುವ ಗುರಿಯನ್ನು ಹೊಂದಿದೆ.

(ಎ) **ಜವಳಿ ಮೂಲಭೂತ ಸೌಕರ್ಯದ ಉನ್ನತೀಕರಣ ಮತ್ತು ನಿಧಿಯ ನೆರವು:** ಜವಳಿ ಮೌಲ್ಯದ ಸರಪಳಿಯಲ್ಲಿ ಶೈಕ್ಷಣಿಕ ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ತೊಡಗಿಕೊಂಡಿರುವ ಪ್ರಖ್ಯಾತ ಸಂಸ್ಥೆಗಳಿಗೆ ಕ್ಯಾಂಪಸಿನಲ್ಲಿ ತರಬೇತಿ ಸೌಲಭ್ಯಗಳನ್ನು ಉನ್ನತೀಕರಣಗೊಳಿಸುವುದಕ್ಕಾಗಿ ಹಣಕಾಸಿನ ನೆರವನ್ನು ಒದಗಿಸಲಾಗುವುದು. ಜವಳಿ ಮೂಲಭೂತ ಸೌಕರ್ಯಗಳ ಉನ್ನತೀಕರಣವನ್ನು ಸಮರ್ಥಿಸುವ ಅನುಮೋದಿತ ಡಿಪಿಆರ್ ಆಧಾರದ ಮೇಲೆ ಸಂಸ್ಥೆಗಳಿಗೆ ರೂ.1ಕೋಟಿಯವರೆಗೆ ಹಣಕಾಸಿನ ನೆರವನ್ನು ನೀಡಲಾಗುವುದು. ಈ ಕಾರ್ಯನೀತಿಯ ಅವಧಿಯಲ್ಲಿ ಜವಳಿ ಮೂಲಭೂತ ಸೌಕರ್ಯಗಳ ಉನ್ನತೀಕರಣಕ್ಕಾಗಿ ಮೂರು ಸಂಸ್ಥೆಗಳಿಗೆ ಬೆಂಬಲವನ್ನು ನೀಡಲಾಗುವುದು.

(ಬಿ) **ಹಾಲಿ ಇರುವ ಶಿಕ್ಷಣ ಸಂಸ್ಥೆಗಳು/ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು (ಎಸ್‌ಡಿಸಿಗಳು) ಬಲಪಡಿಸುವುದು:** ಕೈಮಗ್ಗ ಮತ್ತು ಜವಳಿ ಇಲಾಖೆಯು ಈವರೆಗೆ 144 ಕೌಶಲ್ಯ ಅಭಿವೃದ್ಧಿ ಕೇಂದ್ರಗಳು ಮತ್ತು 168 ಖಾಸಗಿ ತರಬೇತಿ ಕೇಂದ್ರಗಳಿಗೆ ಹಣಕಾಸು ನೆರವನ್ನು ಒದಗಿಸಿದೆ ಮತ್ತು ಈವರೆಗೂ 1,65,200 ಸಿಬ್ಬಂದಿಗಳು ತರಬೇತಿಯನ್ನು ಪಡೆದುಕೊಂಡಿದ್ದಾರೆ. ಕೈಮಗ್ಗ ಮತ್ತು ಜವಳಿ ಇಲಾಖೆಯ ಹಣಕಾಸು ನೆರವಿನ ಮಧ್ಯಸ್ಥಿಕೆ ಕ್ರಮಗಳು ತರಬೇತಿ ವೆಚ್ಚಕ್ಕೆ ನೆರವು ನೀಡುವುದನ್ನು ಒಳಗೊಳ್ಳುವುದರಲ್ಲದೆ ಅವು ಈ ಕೆಳಕಂಡಂತಿವೆ:

- ಒಂದು ವೇಳೆ ತರಬೇತಿ ಬೋಧಕರು, ಜವಳಿ ಮತ್ತು ಉಡುಪು ವಲಯದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳು ಮತ್ತು ಫಲಾನುಭವಿಗಳಿಗೆ ತರಬೇತಿ ನೀಡುವ ಸಾಮರ್ಥ್ಯವನ್ನು ಹೊಂದಿದ್ದರೆ, ಅವರಿಗೆ ತರಬೇತಿ ವೆಚ್ಚದ ಕಡೆಗೆ ಬೆಂಬಲವನ್ನು ನೀಡಲಾಗುವುದು. ಕೈಮಗ್ಗ ಮತ್ತು ಜವಳಿ ಇಲಾಖೆಯ ಹಣಕಾಸು ನೆರವಿನ ಮೂಖಾಂತರ ಮೂಲಭೂತ ಸೌಕರ್ಯಗಳನ್ನು ಸೃಜಿಸಲಾಗಿದ್ದರೆ, ಪ್ರತಿಯೊಬ್ಬ ಪ್ರತಿಫಲಾನುಭವಿಗೆ 45 ದಿನಗಳಿಗೆ ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗಾದರೆ ರೂ.9500 ಮತ್ತು ಖಾಸಗಿ ಕೇಂದ್ರಗಳಿಗಾದರೆ ರೂ.11,000 ದಂತೆ ತರಬೇತಿ ವೆಚ್ಚದ ಕಡೆಗೆ ನೆರವನ್ನು ನೀಡಲಾಗುವುದು.
- ತರಬೇತಿ ವೆಚ್ಚದ ವಿಂಗಡಣಾ ವಿವರಗಳು ಈ ಕೆಳಗಿನಂತಿವೆ.
- ತರಬೇತಿ ಫಲಾನುಭವಿಯ ಶಿಷ್ಯವೇತನ ರೂ.3,500/–
- ಕಚ್ಚಾ ವಸ್ತುಗಳ ಕಡೆಗೆ ಬೆಂಬಲ – ರೂ.1,000/–
- ಸಂಸ್ಥೆಯ ಶುಲ್ಕದ ನೆರವು – ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗಾಗಿ ರೂ.5000/– ಮತ್ತು ಖಾಸಗಿ ತರಬೇತಿ ಕೇಂದ್ರಗಳಿಗಾಗಿ ರೂ.6500/–
  - ಇದಕ್ಕೆ ಯಾವುದೇ ರೀತಿಯ ಮಾರ್ಪಾಟುಗಳನ್ನು ಮಾಡುವುದಕ್ಕೆ ಉನ್ನತ ಮಟ್ಟದ ಸಬಲೀಕರಣ ಸಮಿತಿಯು (ಹೆಚ್.ಎಲ್.ಇ.ಸಿ) ತೀರ್ಮಾನಿಸಬಹುದು.

(ಸಿ) **ಹೊಸ ಯೋಜನೆ ಅನುಷ್ಠಾನದ ಏಜೆನ್ಸಿಗಳಿಗೆ ಬೆಂಬಲ:** ಒಂದು ವೇಳೆ, ಬೃಹತ್ ಉದ್ಯಮಗಳು ಜವಳಿ ಮತ್ತು ಉಡುಪು ಕ್ಷೇತ್ರದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳು ಮತ್ತು ಫಲಾನುಭವಿಗಳಿಗೆ ತರಬೇತಿ ನೀಡುವ ಸಾಮರ್ಥ್ಯವನ್ನು ಹೊಂದಿದ್ದರೆ, ಯುಕ್ತ ಜಾಗರೂಕತೆ ವಹಿಸುವುದಕ್ಕೆ ಒಳಪಟ್ಟು ಅವುಗಳಿಗೆ ತರಬೇತಿ ವೆಚ್ಚದ ಕಡೆಗೆ ನೆರವನ್ನು ನೀಡಬೇಕು. ಈ ಪ್ರಕರಣದಲ್ಲಿ ಪ್ರತಿ ಫಲಾನುಭವಿಗೆ ರೂ.11,000/– ಸಹಾಯಧನವನ್ನು ನೀಡತಕ್ಕದ್ದು.

### ಧನಸಹಾಯ ಮೈಲಿಗಲ್ಲುಗಳು:

(ಡಿ) **ಕರ್ನಾಟಕ ಸರ್ಕಾರದಿಂದ ತರಬೇತಿ ಕಾರ್ಯಕ್ರಮಗಳಿಗೆ ನೀಡುವ ಅನುದಾನದ ನೆರವು ಎರಡು ಮೈಲಿಗಲ್ಲುಗಳನ್ನು ಆಧರಿಸಿರುತ್ತದೆ:**

- ಮೊದಲ ಮೈಲಿಗಲ್ಲು, ತರಬೇತಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸುವುದು–ಫಲಾನುಭವಿಗೆ ಶೇ.100ರಷ್ಟು ಶಿಷ್ಯವೇತನ ಮತ್ತು ಮೊದಲ ಮೈಲಿಗಲ್ಲನ್ನು ಸಾಧಿಸುವ ತರಬೇತಿ ಕೇಂದ್ರಗಳಿಗೆ ಅರ್ಹ ನಿಧಿಯ ಶೇ.50ರಷ್ಟನ್ನು ನೀಡಲಾಗುವುದು.

- ಫಲಾನುಭವಿಗೆ ಉದ್ಯೋಗವನ್ನು ಕಲ್ಪಿಸಿದ ಮೇಲೆ 60 ದಿನಗಳು ಪೂರ್ಣಗೊಂಡ ನಂತರ ಎರಡನೇ ಮೈಲಿಗಲ್ಲು ಸಾಧನೆಯಾಗುತ್ತದೆ; ಅರ್ಹ ನಿಧಿಯಲ್ಲಿ ಉಳಿದ ಶೇ. 50ರಷ್ಟು ಪಾವತಿಯನ್ನು ಎರಡನೇ ಮೈಲುಗಲ್ಲು ಸಾಧಿಸಿದ ನಂತರ ತರಬೇತಿ ಕೇಂದ್ರಗಳಿಗೆ ನೀಡಲಾಗುವುದು.

(ಇ) **ನೇಮಕಾತಿ ಮಾನದಂಡ:** ನೇಮಕಾತಿಯನ್ನು ಖಾತ್ರಿಪಡಿಸುವ ಸಲುವಾಗಿ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ಕೈಗಾರಿಕಾ ಅವಶ್ಯಕತೆಗಳೊಂದಿಗೆ ಸಂಪರ್ಕ ಕಲ್ಪಿಸಲಾಗುವುದು. ನೇಮಕಾತಿಯ ಕನಿಷ್ಠ ಶೇ.80ರಷ್ಟು ಸಾಧನೆಯನ್ನು ಪಿಐಎಸ್‌ಗಳು (PIAs)/ಸಂಸ್ಥೆಗಳೇ ಮಾಡತಕ್ಕದ್ದು.

## 14. ಸಾಮರ್ಥ್ಯ ವೃದ್ಧಿಗೆ ಬೆಂಬಲ:

ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರಕ್ಕಾಗಿ, ಸಾಮರ್ಥ್ಯ ವೃದ್ಧಿ ಮತ್ತು ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳ ಮೇಲೆ ಹೆಚ್ಚು ಒತ್ತು ನೀಡುವ ಅವಶ್ಯಕತೆಯಿದೆ. ಕರ್ನಾಟಕ ಸರ್ಕಾರವು ಸುಸ್ಥಿರ ಗೋಚರಿತ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮತ್ತು ಸಾಧನೆಗೆ ಅಗತ್ಯವಾದ ಜ್ಞಾನ ಮತ್ತು ಕೌಶಲ್ಯಗಳೊಂದಿಗೆ ಸಜ್ಜುಗೊಳಿಸುವ ಮೂಲಕ ಎಲ್ಲಾ ಹಿತಾಸಕ್ತಿದಾರರುಗಳಿಗೆ ಆಸರೆ ಮತ್ತು ಪರಿಣತಿಯ ಬೆಂಬಲವನ್ನು ಒದಗಿಸಲು ಶ್ರಮಿಸುತ್ತದೆ. ನೀತಿಯ ಅವಧಿಯಲ್ಲಿ ಬೆಂಬಲಿಸಲಾಗುವ ಸಾಮರ್ಥ್ಯ ವೃದ್ಧಿ ಉಪಕ್ರಮಗಳು ಈ ಕೆಳಗಿನಂತಿವೆ:




(ಎ) ಮಾರುಕಟ್ಟೆ ಅಭಿವೃದ್ಧಿ ಮತ್ತು ಬ್ರ್ಯಾಂಡಿಂಗ್: ಜಾಗತಿಕ ಮತ್ತು ಉದಯೋನ್ಮುಖ ಸ್ವದೇಶಿ ಮಾರುಕಟ್ಟೆಗಳನ್ನು ಪರಿಣಾಮಕಾರಿಯಾಗಿ ತಲುಪಲು ವ್ಯಕ್ತಿಗಳು/ ಉದ್ಯಮಿಗಳ ಸಮೂಹ/ ಘಟಕಗಳನ್ನು ಸಶಕ್ತಗೊಳಿಸುವುದು.

- **ಅರ್ಹತೆ:** ಈ ಮೇಲಿನ ಉಪಕ್ರಮಗಳಿಗಾಗಿ ನೆರವನ್ನು ಕೋರುವುದಕ್ಕಾಗಿ ಬೇಕಾದ ಅರ್ಹತೆಗಳು ಈ ಕೆಳಗಿನಂತಿವೆ:

  - ಪ್ರತ್ಯೇಕ ಉದ್ಯಮ ಅಥವಾ ರಾಜ್ಯದಲ್ಲಿ ಐದು ಉದ್ಯಮ ಘಟಕಗಳನ್ನು ಹೊಂದಿರುವ ಕನಿಷ್ಠ 5 ಉದ್ಯಮಿಗಳ ಸಮೂಹ/ ಕೈಗಾರಿಕಾ ಸಂಘಗಳು

  - ಕೇಂದ್ರ ಅಥವಾ ರಾಜ್ಯ ಸರ್ಕಾರದ ನೆರವಿನೊಂದಿಗೆ ಜವಳಿ ಪಾರ್ಕ್‌ಗಳು/ ನಿರ್ದಿಷ್ಟ ಜವಳಿ ವಲಯಗಳನ್ನು ಅಭಿವೃದ್ಧಿಪಡಿಸುತ್ತಿರುವ ಪ್ರತ್ಯೇಕ ಉದ್ಯಮಗಳು/ ಎಸ್‌ಪಿವಿಗಳು /ಕೈಗಾರಿಕಾ ಸಂಘಟನೆಗಳು.

- **ಯೋಜನಾ ಘಟಕಾಂಶಗಳು:** ನಿಧಿಯನ್ನು ಒದಗಿಸಲಾಗುವ ಯೋಜನಾ ಘಟಕಾಂಶಗಳು ಈ ಮುಂದಿನಂತಿವೆ:

    - ಅಂತರರಾಷ್ಟ್ರೀಯ ವಸ್ತುಪ್ರದರ್ಶನದಲ್ಲಿ ಭಾಗವಹಿಸುವಿಕೆ.
    - ವಿದೇಶಿ ಮತ್ತು ದೇಶಿ ಮಿಷನ್‌ಗಳಲ್ಲಿನ ವ್ಯವಹಾರದ ನಿಯೋಗಗಳು.
    - ಜಾಲತಾಣ/ ಕಿರುಹೊತ್ತಿಗೆ ಇತ್ಯಾದಿಗಳ ಅಭಿವೃದ್ಧಿ.
    - ಮಾರುಕಟ್ಟೆ ಸಂಶೋಧನೆ ಅಧ್ಯಯನಗಳನ್ನು ಕೈಗೆತ್ತಿಕೊಳ್ಳುವುದು.
    - ಅಂತರರಾಷ್ಟ್ರೀಯ ಮಾರುಕಟ್ಟೆ ಅಭಿವೃದ್ಧಿ ಸಮಾಲೋಚಕರನ್ನು ತೊಡಗಿಸಿಕೊಳ್ಳುವುದು.
    - ಬ್ರ್ಯಾಂಡ್‌ಗಳ ಅಭಿವೃದ್ಧಿ.
    - ಪ್ರಚಾರ
    - ಇತರ ಮಾರುಕಟ್ಟೆ ಉಪಕ್ರಮಗಳು

- **ಧನಸಹಾಯ:** ಈ ಉಪಕ್ರಮಕ್ಕಾಗಿ ಒದಗಿಸುವ ನಿಧಿಯ ನೆರವು ಯೋಜನಾ ವೆಚ್ಚದ ಶೇ. 50ರಷ್ಟು ಅಥವಾ 50 ಲಕ್ಷ ರೂಪಾಯಿಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವಾಗಿದ್ದು ಉಳಿದ ಮೊತ್ತವನ್ನು ಉದ್ಯಮಿಗಳ ಸಮೂಹ/ ಕೈಗಾರಿಕಾ ಸಂಘಗಳು ಭರಿಸುತ್ತವೆ. ನೆರವನ್ನು ಮರುಪಾವತಿ ಆಧಾರದ ಮೇಲೆ ಒದಗಿಸಲಾಗುವುದು.

(ಬಿ) **ವಿನ್ಯಾಸ ಅಭಿವೃದ್ಧಿ ಮತ್ತು ಉತ್ಪನ್ನ ವೈವಿಧ್ಯೀಕರಣ:** ವಿನ್ಯಾಸ ಅಭಿವೃದ್ಧಿಯ ಮೂಲಕ ಹೊಸ ಉತ್ಪನ್ನಗಳ ಅಭಿವೃದ್ಧಿಗಾಗಿ ಕೈಮಗ್ಗ ಉದ್ಯಮಿಗಳನ್ನು/ ಘಟಕಗಳನ್ನು ಸಶಕ್ತಗೊಳಿಸುವುದು.

- **ಅರ್ಹತೆ:** ಮೇಲಿನ ಉಪಕ್ರಮಕ್ಕಾಗಿ ನೆರವು ಕೋರಲು ಇರಬೇಕಾದ ಅರ್ಹತಾ ಮಾನದಂಡವು ಈ ಕೆಳಕಂಡಂತಿದೆ:

    - ರಾಜ್ಯದಲ್ಲಿ ಕೈಮಗ್ಗ ಉದ್ಯಮ ಘಟಕಗಳನ್ನು ಹೊಂದಿರುವ ವ್ಯಕ್ತಿ / ಕನಿಷ್ಠ 5 ಕೈಮಗ್ಗ ಉದ್ಯಮಿಗಳಿರುವ ಸಮೂಹ/ ಕೈಗಾರಿಕಾ ಸಂಸ್ಥೆಗಳು/ ಸಹಕಾರಿ ಸಂಘಗಳು.
    - ಕೇಂದ್ರ ಅಥವಾ ರಾಜ್ಯ ಸರ್ಕಾರಿ ನೆರವಿನ ಮೂಲಕ ಜವಳಿ ಪಾರ್ಕ್‌ಗಳನ್ನು (ಕೈಮಗ್ಗಗಳು)/ ಅಭಿವೃದ್ಧಿ ಪಡಿಸುತ್ತಿರುವ ವ್ಯಕ್ತಿಗಳು/ ಎಸ್‌ಪಿವಿಗಳು ನಿರ್ದಿಷ್ಟ ಜವಳಿ ವಲಯಗಳು.

- **ಯೋಜನಾ ಘಟಕಾಂಶಗಳು:** ಧನಸಹಾಯ ಒದಗಿಸಲಾಗುವ ಯೋಜನಾ ಘಟಕಗಳು ಈ ಮುಂದಿನಂತಿವೆ:

    - ವಿನ್ಯಾಸ ಮತ್ತು ಉತ್ಪನ್ನ ಅಭಿವೃದ್ಧಿಯಲ್ಲಿ ತೊಡಗಿರುವ ವಿನ್ಯಾಸಕಾರರ ವೆಚ್ಚ.
    - ಕಚ್ಚಾ ವಸ್ತುಗಳು, ವಿಶೇಷ ಯಂತ್ರಗಳ ವೆಚ್ಚ ಇತ್ಯಾದಿ ಯಾವುದಾದರೂ ಇದ್ದರೆ.
    - ಪರೀಕ್ಷೆ, ಪ್ರಮಾಣಿತ ವೆಚ್ಚಗಳು ಇತ್ಯಾದಿ.

- **ಧನಸಹಾಯ:** ಈ ಉಪಕ್ರಮಕ್ಕಾಗಿ ಒದಗಿಸುವ ನಿಧಿಯ ನೆರವು ಯೋಜನಾ ವೆಚ್ಚದ ಶೇ. 50ರಷ್ಟು ಅಥವಾ ರೂ.25 ಲಕ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವಾಗಿದ್ದು, ಉಳಿದ ಮೊತ್ತವನ್ನು ಉದ್ಯಮಿಗಳ ಸಮೂಹ/ ಕೈಗಾರಿಕಾ ಸಂಸ್ಥೆಗಳು/ ಸಹಕಾರಿ ಸಂಘಗಳು ಭರಿಸುತ್ತವೆ. ನೆರವನ್ನು ಮರುಪಾವತಿ ಆಧಾರದ ಮೇಲೆ ಒದಗಿಸಲಾಗುವುದು.

(ಸಿ) **ಮಾನದಂಡಗಳು ಮತ್ತು ಅನುಸರಣೆಗಳು:** ವಿವಿಧ ಅಂತರರಾಷ್ಟ್ರೀಯ ವ್ಯಾಪಾರ ಅವಶ್ಯಕತೆಗಳಿಗೆ ಅನುಸಾರವಾಗಿರಲು ಮಾನದಂಡಗಳನ್ನು ಅಳವಡಿಸಿಕೊಳ್ಳಲು ಉದ್ಯಮವನ್ನು ಶಕ್ತಗೊಳಿಸುವುದು.

➢ **ಅರ್ಹತೆ:** ಈ ಕೆಳಕಂಡ ಯಾವುದೇ ಅಂತರರಾಷ್ಟ್ರೀಯ ಮಾನ್ಯತೆ/ ಅಂಗೀಕೃತ ಮಾನದಂಡಗಳ ಮೇರೆಗೆ ಪ್ರಮಾಣಪತ್ರ/ ಮಾನ್ಯತೆ ಪಡೆದ ಯಾವುದೇ ಘಟಕ, ಆ ಮಾನದಂಡಗಳೆಂದರೆ:–

- ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್
- ಐಎಸ್‌ಓ – 9000 ಗುಣಮಟ್ಟ ನಿರ್ವಹಣ ವ್ಯವಸ್ಥೆ
- ಐಎಸ್‌ಓ – 14000 ಪರಿಸರ ನಿರ್ವಹಣ ವ್ಯವಸ್ಥೆ
- ಐಎಸ್‌ಓ – 18000 ವೃತ್ತಿಪರ ಆರೋಗ್ಯ ಮತ್ತು ಸುರಕ್ಷಾ ಪ್ರಮಾಣಕಗಳು
- ಸಾಮಾಜಿಕ ಹೊಣೆಗಾರಿಕೆ ಪ್ರಮಾಣಕಗಳು.
- ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಪರಿಸರ – ಇಛಿಂ–ಟಚಿಛಿಜಟ ಔಎಇ □ ಖಇಛ 100 ಇತ್ಯಾದಿ.
- ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮಗಳ ಪ್ರಮಾಣೀಕರಣ (ಸಾಮಾಜಿಕ ಹೊಣೆಗಾರಿಕೆ ಮತ್ತು ಸುಸ್ಥಿರ ವ್ಯವಹಾರ ಆಚರಣೆಗಳನ್ನು ಉತ್ತೇಜಿಸುವ ವಿಶ್ವಸಂಸ್ಥೆಯ ಉಪಕ್ರಮ) ಮತ್ತು "ಏಷ್ಯಾ ಮತ್ತು ಪೆಸಿಫಿಕ್ ದೇಶಗಳಿಗಾಗಿ ವಿಶ್ವಸಂಸ್ಥೆಯು ಆರ್ಥಿಕ ಮತ್ತು ಸಾಮಾಜಿಕ ಆಯೋಗ (UNESCAP).
- ಉತ್ತಮ ಮಾರುಕಟ್ಟೆ ಸ್ಥಿತಿಗತಿಯನ್ನು ಸಶಕ್ತಗೊಳಿಸುವ ಯಾವುದೇ ಇತರ ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಪ್ರಮಾಣೀಕರಣ.

➢ **ಧನಸಹಾಯ:** ಒಂದು ಪ್ರತ್ಯೇಕ ಘಟಕಕ್ಕೆ ಒದಗಿಸುವ ನಿಧಿಯ ನೆರವು ವೆಚ್ಚದ ಶೇ.50 ಅಥವಾ ರೂ.5 ಲಕ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವಾಗಿದ್ದು, ಉಳಿದ ಮೊತ್ತವನ್ನು ಫಲಾನುಭವಿ ಘಟಕವು ಭರಿಸುತ್ತದೆ. ವ್ಯವಸ್ಥೆ ಮಾಡಿದ ಸಮತೋಲನದೊಂದಿಗೆ ನೆರವನ್ನು ಮರುಪಾವತಿ ಆಧಾರದ ಮೇಲೆ ಒದಗಿಸಲಾಗುವುದು.

(ಡಿ) **ವ್ಯಾಪಾರದ ಅಭಿವೃದ್ಧಿ ಮತ್ತು ಅನುಕೂಲ ಕಲ್ಪಿಸುವುದು:** ರಾಜ್ಯದಲ್ಲಿ ಎಂಎಸ್‌ಎಂಇ ಪರಿಸರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಮತ್ತು ಎಂಎಸ್‌ಎಂಇ ವಲಯದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು, ನೀತಿಯು ವ್ಯಾಪಾರದ ಅಭಿವೃದ್ಧಿ, ನಿರ್ವಹಣೆ, ಸುಲಭಗೊಳಿಸುವಿಕೆಯನ್ನು ಪ್ರೋತ್ಸಾಹಿಸುವ ಮತ್ತು ಎಂಎಸ್‌ಎಂಇ ಯೊಂದಿಗೆ ಪ್ರಧಾನ ಉದ್ಯಮ ಘಟಕಗಳನ್ನು ಸಂಪರ್ಕಿಸಲು ಒಂದು ವೇದಿಕೆ ಕಲ್ಪಿಸುವ ಮತ್ತು ಉತ್ಪಾದನಾಸಾಮರ್ಥ್ಯ ಮತ್ತು ಗುಣಮಟ್ಟದ ಪ್ರಮಾಣಕಗಳ ನಿಬಂಧನೆಗಳಿಗನುಸಾರವಾಗಿ ವ್ಯಾಪಾರಿಗಳನ್ನು ಗುರುತಿಸುವ ಗುರಿಯನ್ನು ಹೊಂದಿದೆ.

(ಇ) **ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ (ಇಡಿಪಿ):** ಉದಯೋನ್ಮುಖ ದಕ್ಷ ಉದ್ಯಮಿ ಮೂಲಕ ಸಣ್ಣ ಮತ್ತು ಮಧ್ಯಮ ಉದ್ಯಮ (ಎಂಎಸ್‌ಎಂಇ)ಗಳಲ್ಲಿ ಗಣನೀಯ ಪ್ರಮಾಣದ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಜವಳಿ ಮತ್ತು ಉಡುಪು ವಲಯದಲ್ಲಿ ಸೂಕ್ತ ಉದ್ಯಮಿ ಸೃಜನಾ ಕಾರ್ಯಕ್ರಮಗಳನ್ನು ನಡೆಸಲು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸತಕ್ಕದ್ದು. ಜವಳಿ ನೀತಿಯ ಪ್ರಯೋಜನಗಳನ್ನು ಪ್ರಚಾರ ಮಾಡುವುದು ಮತ್ತು ಜವಳಿ ವಲಯದ ತಾಂತ್ರಿಕ ವಿಷಯದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಉದಯೋನ್ಮುಖ ಉದ್ಯಮಿಗಳಿಗೆ ಕೌಶಲ್ಯಗಳು ಮತ್ತು ನಡವಳಿಕೆಗಳ ಮೇಲೆ ವಿಶೇಷ ಒತ್ತು ನೀಡಿ ಉದ್ಯಮಶೀಲತೆಯ ಗುಣಮಟ್ಟಗಳ ಕುರಿತಾದ ಮೂಲಭೂತ ಜ್ಞಾನವನ್ನು ಕಾರ್ಯಕ್ರಮವು ನೀಡತಕ್ಕದ್ದು.

## 15. ಜವಳಿ / ತಾಂತ್ರಿಕ ಜವಳಿಗಳ ಉತ್ಕೃಷ್ಟತಾ ಕೇಂದ್ರ

ಮುಂಬರಲಿರುವ ವರ್ಷಗಳಲ್ಲಿ ತಾಂತ್ರಿಕ ಜವಳಿ ಉದ್ಯಮದ ಮಹತ್ವ ಮತ್ತು ಬೆಳವಣಿಗೆಯ ಸಾಮರ್ಥ್ಯವನ್ನು ಮನಗಂಡು, ಮುಂಬರಲಿರುವ ನೀತಿಯು ತಾಂತ್ರಿಕ ಜವಳಿಗಾಗಿ ಸಮರ್ಥ, ಸ್ಪರ್ಧಾತ್ಮಕ ಮತ್ತು ವಿಶ್ವದರ್ಜೆಯ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಜವಳಿ ವಲಯದ ಟ್ರೆಂಡ್‌ನಲ್ಲಿ ಬದಲಾವಣೆಯಾಗುತ್ತಿರುವುದರಿಂದ ಮತ್ತು ಜವಳಿಯು ಜ್ಞಾನಾಧಾರಿತ ಸಂಶೋಧನಾಧಾರಿತ ಉದ್ಯಮವಾಗಿರುವುದರಿಂದ ತಾಂತ್ರಿಕ ಜವಳಿ ಉತ್ಕೃಷ್ಟತಾ ಕೇಂದ್ರವನ್ನು ಕರ್ನಾಟಕ ಸರ್ಕಾರವು ಮುಂಚೂಣಿ ಪಾಲುದಾರ ಸಂಸ್ಥೆಯಾಗಿ ಸಹಕಾರಿ ವಿರ್ಪಾಟಿನಲ್ಲಿ ಅಗತ್ಯ



ಸಾಮರ್ಥ್ಯ ಹೊಂದಿರುವ ಸಂಸ್ಥೆಗಳು ಮತ್ತು ರಾಜ್ಯದ ಯಾವುದೇ ಪ್ರಧಾನ ತಾಂತ್ರಿಕ ಶಿಕ್ಷಣ ಸಂಸ್ಥೆಯ ಬೆಂಬಲದೊಂದಿಗೆ ರಾಜ್ಯದಲ್ಲಿ ಸ್ಥಾಪಿಸಲಾಗುವುದು. ತಾಂತ್ರಿಕ ಜವಳಿಯ ಉತ್ಕೃಷ್ಟತಾ ಕೇಂದ್ರಕ್ಕೆ ರಾಜ್ಯ ಸರ್ಕಾರವು ನೀತಿಯ ಅವಧಿಯಲ್ಲಿ ರೂ.10 ಕೋಟಿಗಳವರೆಗೂ ಅನುದಾನ ನೀಡುತ್ತದೆ.

ಎ) **ಅರ್ಹತೆ:** ಕರ್ನಾಟಕ ಸರ್ಕಾರವು ಮುಂಚೂಣಿ ಪಾಲುದಾರಿಕೆ ಹೊಂದಿರುವ ಸಹಕಾರ ವ್ಯವಸ್ಥೆಯ ಅಡಿಯಲ್ಲಿ ಯಾವುದೇ ಪ್ರಮುಖ ತಾಂತ್ರಿಕ ಶಿಕ್ಷಣ ಸಂಸ್ಥೆ ಅಥವಾ ಯಾವುದೇ ಇತರ ಸಂಸ್ಥೆ / ಸಂಶೋಧನಾ ಸಂಸ್ಥೆಯು ಜವಳಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲು ಅರ್ಹವಾಗಿರುತ್ತವೆ.

ಬಿ) ಉತ್ಕೃಷ್ಟತಾ ಕೇಂದ್ರದ ಮೂಲಕ ಕೈಗೆತ್ತಿಕೊಳ್ಳಲಾಗುವ ವಿವಿಧ ಚಟುವಟಿಕೆಗಳು ಈ ಕೆಳಕಂಡಂತಿವೆ:

- ಕೇಂದ್ರವು ಸಂಶೋಧನಾಭಿವೃದ್ಧಿ ಮತ್ತು ತರಬೇತಿ ಮೂಲಕ ಗುಣಮಟ್ಟದ ತಾಂತ್ರಿಕ ಜವಳಿ ಉತ್ಪನ್ನದ ಅಭಿವೃದ್ಧಿಯಲ್ಲಿ ಮತ್ತು ಹಲವು ಸಂಬಂಧಿತ ವಿಷಯಗಳ ಬಗ್ಗೆ ಮೂಲ ಜ್ಞಾನವನ್ನು ವಿಸ್ತರಿಸುವಲ್ಲಿ ಉತ್ಪಾದಕರಿಗೆ ನೆರವಾಗುವುದು. ತಾಂತ್ರಿಕ ಜವಳಿ ನೂಲುಗಳ ಅಭಿವೃದ್ಧಿ, (ನೈಸರ್ಗಿಕ ಮತ್ತು ಸಿಂಥೆಟಿಕ್ ನೂಲುಗಳು) ನೇಯ್ದ ಮತ್ತು ನೇಯದಿರುವ ಉತ್ಪನ್ನಗಳ ಅಭಿವೃದ್ಧಿ, ತಂತ್ರಜ್ಞಾನ ಉನ್ನತೀಕರಿಸಿದ ಉತ್ಪಾದನಾ ಪ್ರಕ್ರಿಯೆ, ವಿನ್ಯಾಸ ಮತ್ತು ಪರೀಕ್ಷಾ ಸೌಲಭ್ಯ ಮುಂತಾದವುಗಳಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ತರಬೇತಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

- ಉತ್ಕೃಷ್ಟತಾ ಕೇಂದ್ರವು ಜವಳಿ ವಲಯದಲ್ಲಿನ ವಿನ್ಯಾಸ ಅಭಿವೃದ್ಧಿ ಮಾಡುವ ಮತ್ತು ಮುಂಬರುವ ಟ್ರೆಂಡ್‌ಗಳ ಬಗ್ಗೆ ಮುನ್ನಿರೀಕ್ಷೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತದೆ. ಇದು ಕಾರ್ಯಗಾರಗಳನ್ನು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ನೆರವು ನೀಡುವುದಷ್ಟೇ ಅಲ್ಲದೆ, ಹೊಸ ಹೂಡಿಕೆದಾರರಿಗಾಗಿ ತಾಂತ್ರಿಕ ಪರಿಣತಿ ಸಾಧಿಸಲು ಕೈಗಾರಿಕಾ ತಜ್ಞರಿಂದ ದೃಢ ಮಾರ್ಗದರ್ಶಕ ನೆರವನ್ನು ಸಹ ಒದಗಿಸುತ್ತದೆ.

- ಅಂತರರಾಷ್ಟ್ರೀಯ ಗುಣಮಟ್ಟದನ್ವಯ ಉತ್ಪಾದನಾ ಪ್ರಕ್ರಿಯೆಗೆ ಮತ್ತು ಸಿದ್ಧ ಸರಕುಗಳಿಗಾಗಿ ಗುಣಮಟ್ಟ ಪ್ರಮಾಣೀಕರಣವನ್ನು ಕೂಡ ಮಾಡಲಾಗುವುದು. ಇದರಿಂದ ರಫ್ತಿಗೆ ಉತ್ತೇಜನ ದೊರೆಯುತ್ತದೆ.

- ಅಂತರರಾಷ್ಟ್ರೀಯ ಮಾನ್ಯತೆಯೊಂದಿಗೆ ಮತ್ತು ವಿದೇಶಿ ಸಂಸ್ಥೆಗಳು / ಪ್ರಯೋಗಾಲಯಗಳ ಸಹಯೋಗದೊಂದಿಗೆ ರಾಷ್ಟ್ರೀಯ/ ತಾಂತ್ರಿಕ ಜವಳಿಗಳ ಗುರುತಿಸಲಾದ ವಿಭಾಗಗಳ ಉತ್ಪನ್ನದ ಪರೀಕ್ಷೆ ಮತ್ತು ಮೌಲ್ಯಮಾಪನ ಸೌಲಭ್ಯಗಳು.

- ಅಂತರರಾಷ್ಟ್ರೀಯ ಮಾನ್ಯತೆಯೊಂದಿಗೆ ಮತ್ತು ವಿದೇಶಿ ಸಂಸ್ಥೆಗಳು/ ಪ್ರಯೋಗಾಲಯಗಳ ಸಹಯೋಗದೊಂದಿಗೆ ರಾಷ್ಟ್ರೀಯ/ ತಾಂತ್ರಿಕ ಜವಳಿಗಳ ಗುರುತಿಸಲಾದ ವಿಭಾಗಗಳ ಉತ್ಪನ್ನದ ಪರೀಕ್ಷೆ ಮತ್ತು ಮೌಲ್ಯಮಾಪನ ಸೌಲಭ್ಯಗಳು ತಾಂತ್ರಿಕ ಜವಳಿ ಕ್ಷೇತ್ರದಲ್ಲಿ ಭಾಗಿಯಾಗಿರುವ ನವೋದ್ಯಮಗಳಿಗೆ ನೆರವು ಮತ್ತು ಪೋಷಣೆಗಾಗಿ ಸಮಗ್ರ ಉದ್ಯಮ ಪರಿಸರ ವ್ಯವಸ್ಥೆ ಮತ್ತು ಬೆಳವಣಿಗೆ ಅವಕಾಶಗಳನ್ನು ಕಲ್ಪಿಸುವ ಗುರಿಯನ್ನು ಕರ್ನಾಟಕ ಸರ್ಕಾರವು ಹೊಂದಿದೆ. ಹೊಸ ಉತ್ಪನ್ನಗಳ ಅಭಿವೃದ್ಧಿಯನ್ನು ವೃದ್ಧಿಸುವುದಕ್ಕಾಗಿ, ತಾಂತ್ರಿಕ ಜವಳಿ ಉತ್ಪನ್ನಗಳ ಉತ್ಪಾದನೆ ಮತ್ತು ಮಾರುಕಟ್ಟೆ ಚಟುವಟಿಕೆಗಳನ್ನು ಸುವ್ಯವಸ್ಥೆಗೊಳಿಸುವ ಸಲುವಾಗಿ ಕೇಂದ್ರೀಕೃತ ನೆರವು ಕೇಂದ್ರಗಳನ್ನು ಸ್ಥಾಪಿಸಲಾಗುವುದು. ವಾಣಿಜ್ಯ ಉತ್ಪಾದನೆಗಾಗಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಹಾಗೂ ಮೂಲ ಮಾದರಿಯನ್ನು ಸಿದ್ಧಗೊಳಿಸಲು ಹೊಸ ಹೂಡಿಕೆದಾರರು ಈ ನೆರವು ಕೇಂದ್ರಗಳನ್ನು ಬಳಸಿಕೊಳ್ಳಬಹುದು.

- ಅಂತರರಾಷ್ಟ್ರೀಯ ಮಾನ್ಯತೆಯೊಂದಿಗೆ ಮತ್ತು ವಿದೇಶಿ ಸಂಸ್ಥೆಗಳು/ ಪ್ರಯೋಗಾಲಯಗಳ ಸಹಯೋಗದೊಂದಿಗೆ ರಾಷ್ಟ್ರೀಯ/ ತಾಂತ್ರಿಕ ಜವಳಿಗಳ ಗುರುತಿಸಲಾದ ವಿಭಾಗಗಳ ಉತ್ಪನ್ನದ ಪರೀಕ್ಷೆ ಮತ್ತು ಮೌಲ್ಯಮಾಪನ ಸೌಲಭ್ಯಗಳು ಉತ್ತಮ ವ್ಯವಹಾರ ಚಿಂತನೆಯನ್ನು ಹೊಂದಿರುವ ಆದರೆ ವಾಣಿಜ್ಯಾತ್ಮಕವಾಗಿ ಸೂಕ್ತ ಸಲಹಾತ್ಮಕ ಹಿನ್ನೆಲೆ ಹೊಂದಿರದ ಸಣ್ಣ ನವೋದ್ಯಮಗಳಿಗೆ ವೈವಿಧ್ಯಮಯವಾದ ವ್ಯವಹಾರದ ಪರಿಹಾರೋಪಾಯಗಳ ಬುಟ್ಟಿಯನ್ನು ನೆರವು ಕೇಂದ್ರವು ಒದಗಿಸಲಿದೆ. ಅವು ಪೂರ್ಣ ಉತ್ಪಾದನೆಯಲ್ಲಿ ತೊಡಗುವುದಕ್ಕೆ ಮುಂಚೆ ತಮ್ಮ ಆಲೋಚನೆಗಳ ಮೇಲೆ ಕಾರ್ಯನಿರ್ವಹಿಸಲು ಈ ಕೇಂದ್ರವು ಕಚೇರಿ ಸೌಲಭ್ಯಗಳು, ಹಂಚಿಕೆ ಸಂಪನ್ಮೂಲಗಳು ಮತ್ತು ವ್ಯವಹಾರ ಸಂಪರ್ಕ ನೆರವಿನ ಅಗಾಧ ಅವಕಾಶವನ್ನು ಒದಗಿಸಲಿದೆ.

- ಅಂತರರಾಷ್ಟ್ರೀಯ ಮಾನ್ಯತೆಯೊಂದಿಗೆ ಮತ್ತು ವಿದೇಶಿ ಸಂಸ್ಥೆಗಳು/ ಪ್ರಯೋಗಾಲಯಗಳ ಸಹಯೋಗದೊಂದಿಗೆ ರಾಷ್ಟ್ರೀಯ/ ತಾಂತ್ರಿಕ ಜವಳಿಗಳ ಗುರುತಿಸಲಾದ ವಿಭಾಗಗಳ ಉತ್ಪನ್ನದ ಪರೀಕ್ಷೆ ಮತ್ತು ಮೌಲ್ಯಮಾಪನ ಸೌಲಭ್ಯಗಳು ಉತ್ಕೃಷ್ಟತಾ ಕೇಂದ್ರವು ಮಾದರಿ ಪ್ರದರ್ಶನಗಳು, ಜಾಗೃತಿ ಕಾರ್ಯಕ್ರಮಗಳು, ಇ–ಗ್ರಂಥಾಲಯಗಳು, ವಿಡಿಯೋ ಕಾನ್ಫರೆನ್ಸ್ ಮತ್ತು ಪುಸ್ತಕ ಹಾಗೂ ಪತ್ರಿಕಾ ಪ್ರಕಟಣೆಗಳ ಮೂಲಕ ಜವಳಿ ಉತ್ಪನ್ನಗಳ ಉತ್ಪಾದಕರು ಮತ್ತು ಬಳಕೆದಾರರಿಗೆ ಮಾಹಿತಿಯನ್ನು ಪ್ರಚಾರ ಮಾಡುವ ಹಾಗೂ ತಾಂತ್ರಿಕ ಜ್ಞಾನವನ್ನು ನೀಡುವ ಸೌಲಭ್ಯಕ್ಕಾಗಿ ಮಾಹಿತಿ ಕೇಂದ್ರವನ್ನು ಸಹ ಸ್ಥಾಪಿಸಲಿದೆ.

## 16. ನೀತಿ ಅನುಷ್ಠಾನಕ್ಕಾಗಿ ಯೋಜಿತ ಆಯವ್ಯಯ ವೆಚ್ಚ

ಈ ನೀತಿಯ ಅನುಷ್ಠಾನಕ್ಕೆ ಮುಂದಿನ ಎಂಟು ಒಂಭತ್ತು ವರ್ಷಗಳವರೆಗೆ ಅಗತ್ಯವಿರುವ ಒಟ್ಟು ಆಯವ್ಯಯ ಮೊತ್ತವು ಸುಮಾರು ರೂ.2,289.86 ಕೋಟಿಗಳೆಂದು ನಿರೀಕ್ಷಿಸಲಾಗಿದೆ. ನೀತಿಯ ಅವಧಿಯಲ್ಲಿ (2019–2024) ಆಯವ್ಯಯ ಅಗತ್ಯತೆಯು ಸುಮಾರು ರೂ.1,582.17 ಕೋಟಿಗಳಾಗಿರುತ್ತದೆ. ಯೋಜಿತ ಆಯವ್ಯಯ ವೆಚ್ಚದ ವರ್ಷವಾರು ಹಂಚಿಕೆಯನ್ನು ಅನುಬಂಧ 2ರಲ್ಲಿ ತೋರಿಸಲಾಗಿದೆ.

## 17. ಸಮೀಕ್ಷೆ / ಮೇಲ್ವಿಚಾರಣೆ

ಈ ಮುಂದಿನ ಸಮಿತಿಗಳು ಈ ನೀತಿಯ ಪರಿಣಾಮಕಾರಿ ಅನುಷ್ಠಾನವನ್ನು ನೋಡಿಕೊಳ್ಳುತ್ತವೆ:

ಎ) **ಉನ್ನತ ಮಟ್ಟದ ಅಧಿಕಾರ ಸಮಿತಿ (ಎಚ್‌ಎಲ್‌ಇಸಿ):** ಇದನ್ನು ಕರ್ನಾಟಕ ಸರ್ಕಾರದ ಜವಳಿ ಸಚಿವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗುತ್ತದೆ, ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇವರು ಸಮಿತಿಯ ಸದಸ್ಯ ಕಾರ್ಯದರ್ಶಿ/ ಸಂಚಾಲಕರಾಗಿರುತ್ತಾರೆ. ಸಮಿತಿಯು ಕರ್ನಾಟಕ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಮತ್ತು ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ಉನ್ನತ ಮಟ್ಟದ ಸಬಲೀಕರಣ ಸಮಿತಿಯು (ಎಚ್‌ಎಲ್‌ಇಸಿ) ನೀತಿಯನ್ನು ಅನುಷ್ಠಾನಗೊಳಿಸುವುದಕ್ಕೆ ಹಾಗೂ ನೀತಿಯ ಅಡಿಯಲ್ಲಿನ ಯೋಜನೆಗಳನ್ನು ಮೇಲ್ವಿಚಾರಣೆ ಮಾಡುವುದಕ್ಕೆ ಜವಾಬ್ದಾರಿಯಾಗಿರುತ್ತದೆ. ಎಚ್‌ಎಲ್‌ಇಸಿಯು ನಿಯತಕಾಲಿಕವಾಗಿ ನೀತಿಯ ಅನುಷ್ಠಾನವನ್ನು ಪರಿಶೀಲಿಸುತ್ತಾ, ಕೈಗಾರಿಕೆಯ ಬೇಡಿಕೆಯನ್ನು ಆಧರಿಸಿ, ಹಲವಾರು ಮಧ್ಯಸ್ಥಿಕೆ ಕ್ರಮಗಳ ಮೂಲಕ ನಿಧಿಯ ಮರುಹಂಚಿಕೆಯನ್ನೂ ಸಹ ಮಾಡುತ್ತದೆ. ಇದು ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಯೋಜನಾ ಅನುಷ್ಠಾನ ಸಮಿತಿ (ಎಸ್‌ಎಲ್‌ಪಿಐಸಿ)ಗೆ ಸಂಪೂರ್ಣ ಬಳಕೆ ಮತ್ತು ಸಲಹೆ ಒದಗಿಸುವುದರಲ್ಲಿ ನೆರವು ನೀಡುತ್ತದೆ.

ಬಿ) **ರಾಜ್ಯಮಟ್ಟದ ಯೋಜನಾ ಅನುಷ್ಠಾನ ಸಮಿತಿ (ಎಸ್‌ಎಲ್‌ಪಿಐಸಿ):** ಇದನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗುವುದು. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇವರು ಸಮಿತಿಯ ಸದಸ್ಯ ಕಾರ್ಯದರ್ಶಿ/ ಸಂಚಾಲಕರಾಗಿರುತ್ತಾರೆ. ಸಮಿತಿಯು ಕರ್ನಾಟಕ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಮತ್ತು ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ಎಸ್‌ಎಲ್‌ಪಿಐಸಿಯು ನೀತಿಯ ಅನುಷ್ಠಾನಕ್ಕಾಗಿ ವಿವರವಾದ ಕಾರ್ಯನಿರ್ವಹಣಾ ಪ್ರಕ್ರಿಯೆಗಳ ಅಭಿವೃದ್ಧಿಗೆ ಮತ್ತು ನೀತಿಯ ಅಡಿಯಲ್ಲಿನ ಯೋಜನೆಗಳಿಗಾಗಿ ಪ್ರೋತ್ಸಾಹಧನದ ಮಂಜೂರಾತಿ ಹಾಗೂ ಮೇಲ್ವಿಚಾರಣೆಗೆ ಜವಾಬ್ದಾರಿಯಾಗಿರುತ್ತದೆ. ಬೃಹತ್ ಮತ್ತು ಪ್ರಧಾನ (ಆ್ಯಂಕರ್) ಉದ್ದಿಮೆಗಳ ಅಡಿಯಲ್ಲಿ ಬರುವ ಎಲ್ಲಾ ಘಟಕಗಳಿಗೆ ಯೋಜನೆಗಳ ಅನುಮೋದನೆ ಮತ್ತು ಮಂಜೂರಾತಿಯನ್ನು ಎಸ್‌ಎಲ್‌ಪಿಐಸಿಯು ಮಾಡುತ್ತದೆ.

ಸಿ) **ಕೇಂದ್ರ ಕಚೇರಿ ಅನುಮೋದನಾ ಸಮಿತಿ (ಎಚ್‌ಓಎಸಿ):** ಇದನ್ನು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗುವುದು. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇವರು ಸಮಿತಿಯ ಸಂಚಾಲಕರಾಗಿರತಕ್ಕದ್ದು. ಸಮಿತಿಯು ಬೆಸ್ಕಾಂ, ಕೆಎಸ್‌ಪಿಸಿಬಿ, ಡಿಐಸಿ, ಕೆಯುಎಂ ಮುಂತಾದ ಕರ್ನಾಟಕ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು, ಬ್ಯಾಂಕುಗಳ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ಕೇಂದ್ರ ಕಚೇರಿ ಅನುಮೋದನಾ ಸಮಿತಿಯು ಮೆಗಾ ಯೋಜನೆಗಳು, ಗ್ರೀನ್‌ಫೀಲ್ಡ್ ಟೆಕ್ಸ್‌ಟೈಲ್ಸ್ ಪಾರ್ಕ್‌ಗಳು, ಬ್ರೌನ್‌ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್‌ಗಳು ಹಿಂದುಳಿದ ಪ್ರದೇಶಗಳೆಂದು ಗುರುತಿಸಲಾದ ಪ್ರದೇಶಗಳಲ್ಲಿನ ಜವಳಿ ಉದ್ದಿಮೆಗಳ ಸ್ಥಾಪನೆಗೆ ಸಂಬಂಧಿಸಿದ ಹಲವಾರು ಹೂಡಿಕೆ ಪ್ರಸ್ತಾವನೆಗಳನ್ನು ಪರೀಕ್ಷಿಸತಕ್ಕದ್ದು. ಪ್ರಸ್ತಾವನೆಗಳನ್ನು ಯುಕ್ತ ಶಿಫಾರಸ್ಸುಗಳೊಂದಿಗೆ ಅನುಮೋದನೆಗಾಗಿ ರಾಜ್ಯಮಟ್ಟದ ಯೋಜನಾ ಅನುಷ್ಠಾನ ಸಮಿತಿ (ಎಸ್‌ಎಲ್‌ಪಿಐಸಿ) ಯ ಮುಂದೆ ಇರಿಸತಕ್ಕದ್ದು. ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಡಿಯಲ್ಲಿ ಬರುವ ಎಲ್ಲಾ ಘಟಕಗಳಿಗೆ

ಯೋಜನೆಯ ಅನುಮೋದನೆ ಮತ್ತು ಮಂಜೂರಾತಿಯನ್ನು ಕೇಂದ್ರ ಕಚೇರಿ ಅನುಮೋದನೆ ಸಮಿತಿಯೇ ಮಾಡುತ್ತದೆ.

ಡಿ) ಜಿಲ್ಲಾ ಕಚೇರಿ ಅನುಮೋದನಾ ಸಮಿತಿ (ಡಿಓಎಸಿ): ಇದನ್ನು ವಿಭಾಗೀಯ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗುವುದು. ಸಮಿತಿಯು ಜಿಲ್ಲಾ ಕೈಗಾರಿಕಾ ಕೇಂದ್ರ, ಎಸ್ಕಾಂ ಪ್ರತಿನಿಧಿಗಳನ್ನು, ಪ್ರಮುಖ ಜಿಲ್ಲಾ ವ್ಯವಸ್ಥಾಪಕರು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಯನ್ನು ಒಳಗೊಂಡಿರತಕ್ಕದ್ದು. ಸಮಿತಿಯು ಸಣ್ಣ ಉದ್ದಿಮೆಗೆ ಸಂಬಂಧಿಸಿದಂತೆ ಮಂಜೂರಾತಿ ಮತ್ತು ಅನುಮೋದನೆ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

ನೀತಿಯ ಪ್ರತಿಯೊಂದು ಘಟಕಾಂಶಗಳಿಗಾಗಿ ವಿವರವಾದ ಕಾರ್ಯನಿರ್ವಹಣಾ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಪ್ರಕಟಿಸಲಾಗುವುದು.

## 18. ನೀತಿಯ ಅನುಷ್ಠಾನ :

(ಎ) ಕೈಮಗ್ಗ ಮತ್ತು ಜವಳಿ ಇಲಾಖೆಯು ಕೇಂದ್ರೀಕೃತ ಮತ್ತು ಸಮನ್ವಯಿಕ ಪ್ರಯತ್ನಗಳೊಂದಿಗೆ ನೀತಿಯನ್ನು ಅನುಷ್ಠಾನಗೊಳಿಸತಕ್ಕದ್ದು. ರಾಜ್ಯಾದ್ಯಂತ ರಚನಾತ್ಮಕ ನಮೂನೆಯಲ್ಲಿ ನೀತಿಯನ್ನು ನಿರ್ವಹಿಸುವುದಕ್ಕೆ ಇಲಾಖೆಯು ಜವಾಬ್ದಾರಿಯಾಗಿರತಕ್ಕದ್ದು. ಪ್ರಸ್ತುತ ನಿರ್ವಹಣಾ ನಮೂನೆಯನ್ನು ಪರಿಶೀಲಿಸತಕ್ಕದ್ದು.

(ಬಿ) ತಾಂತ್ರಿಕ ಜವಳಿಯು ಜವಳಿ ಮೌಲ್ಯದ ಸರಪಳಿಯಲ್ಲಿ ಸಾಕಷ್ಟು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತಿರುವ ಉಪ–ವಲಯವಾಗಿದೆ. ಆದ್ದರಿಂದ ಉದ್ದಿಮೆಯ ಅಗತ್ಯತೆಗಳಿಗೆ ಪ್ರತಿಕ್ರಿಯಿಸುವಂತಹ ಅವಶ್ಯಕ ಸಾಮರ್ಥ್ಯವನ್ನು ಹೊಂದುವುದು ಕೈಮಗ್ಗಗಳು ಮತ್ತು ಜವಳಿ ಇಲಾಖೆಗೆ ಅವಶ್ಯಕವಾಗಿದೆ. ನಮೂನೆಯು ಕೈಗಾರಿಕೆಯ ಅಗತ್ಯತೆಗಳಿಗೆ ಪ್ರತಿಸ್ಪಂದಿಸಬಲ್ಲ ಮತ್ತು ಎಲ್ಲಾ ಸಂಬಂಧಪಟ್ಟ ಹಿತಾಸಕ್ತಿದಾರರುಗಳ ನಡುವಿನ ತಿಳುವಳಿಕೆಯ ಅಂತರವನ್ನು ತುಂಬಲು ಸಮರ್ಥವಾಗಿರತಕ್ಕದ್ದು.

(ಸಿ) ನೀತಿಯನ್ನು ನಿರ್ವಹಿಸಲು, ಕೈಮಗ್ಗ ಮತ್ತು ಜವಳಿ ಇಲಾಖೆಯು ನೀತಿಯ ಅನುಷ್ಠಾನಕ್ಕಾಗಿ ಕಾಲಕಾಲಕ್ಕೆ ಹಲವಾರು ಸಮಿತಿಗಳು ಮತ್ತು ಕೈಗಾರಿಕೆಯ ಹಿತಾಸಕ್ತಿದಾರರೊಂದಿಗೆ ಸಮನ್ವಯ ಸಾಧಿಸಬೇಕು.

(ಡಿ) ನೀತಿಯ ಮೇರೆಗಿನ ಯೋಜನಾ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿನ ವೆಚ್ಚವು ಕೈಮಗ್ಗ ಮತ್ತು ಜವಳಿ ಇಲಾಖೆಯ ಮೂಲಕ ನಡೆಸುವ ಎಲ್ಲಾ ಚಟುವಟಿಕೆಗಳಿಗಾಗಿ ಮೀಸಲಿರಿಸಿದ ಮೂಲನಿಧಿಯ ಶೇ.10 ಆಗಿರತಕ್ಕದ್ದು.

(ಇ) ರಾಜ್ಯದಲ್ಲಿ ನೀತಿಯ ನಿರ್ವಹಣೆಯ ಭಾಗವಾಗಿ ನಡೆಸಲಾಗುವ ಹಲವಾರು ಚಟುವಟಿಕೆಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು ಆದರೆ ಅಷ್ಟಕ್ಕೆ ಮಾತ್ರವೇ ಸೀಮಿತವಾಗಿರಬಾರದು:

- ನೀತಿ ಮತ್ತು ಅದರ ಪ್ರಯೋಜನಗಳನ್ನು ಕೈಗಾರಿಕೆಗೆ ವಿಸ್ತರಿಸುವುದು.
- ರಾಜ್ಯದ ವಿವಿಧ ಸ್ಥಳಗಳಲ್ಲಿ ಕಾರ್ಯಗಾರಗಳನ್ನು ನಡೆಸುವುದು.

- ಕಿರುಹೊತ್ತಿಗೆ/ ಕರಪತ್ರಗಳನ್ನು ಮುದ್ರಿಸುವುದು.

- ಜಾಲತಾಣದಲ್ಲಿ ಪ್ರಕಟಿಸುವುದು ಮತ್ತು ಅದನ್ನು ನಿರ್ವಹಿಸುವುದು.

- ಉದ್ಯಮದಾರರನ್ನು ಆಹ್ವಾನಿಸಿ ರೋಡ್ ಶೋಗಳನ್ನು ಆಯೋಜಿಸುವುದು.

- ವಿವಿಧ ರೋಡ್ ಶೋಗಳು ಮತ್ತು ಮಾರುಕಟ್ಟೆ ರಚನಾ ಉಪಕ್ರಮಗಳಲ್ಲಿ, ಕೈಗಾರಿಕಾ ಹಿತಾಸಕ್ತಿದಾರರೊಂದಿಗೆ ಇರುವುದಕ್ಕಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧಿಕಾರಿಗಳು ವಿದೇಶಕ್ಕೆ ಭೇಟಿ ನೀಡುವುದು.

- ಮಾರುಕಟ್ಟೆ, ಕಾರ್ಮಿಕ ಮಾಹಿತಿ ಇತ್ಯಾದಿಗಳ ಕುರಿತ ಮತ್ತು ವಿವಿಧ ಜಿಲ್ಲೆಗಳಿಂದ ಬರುವ ಕ್ರೋಢೀಕೃತ ಮಾಹಿತಿಗಳ ಕುರಿತ ದತ್ತಾಂಶವನ್ನು ರಚಿಸುವ ಸಲುವಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಮಾರುಕಟ್ಟೆ ಬೌದ್ಧಿಕ ಘಟಕ ಸ್ಥಾಪನೆಗೆ ಅಥವಾ ಅಂತಹ ಚಟುವಟಿಕೆಗಳನ್ನು ಹೊರಗುತ್ತಿಗೆ ನೀಡುವುದಕ್ಕೆ ಸಂಬಂಧಿಸಿದ ವೆಚ್ಚಗಳು.

- ಕೈಗಾರಿಕಾ ಘಟಕಗಳು ಮತ್ತು ತರಬೇತಿ ಸಂಸ್ಥೆಗಳು ಹಾಗೂ ಇತರ ಏಜೆನ್ಸಿಗಳಂತಹ ಇತರ ವಿವಿಧ ಹಿತಾಸಕ್ತಿದಾರರೊಂದಿಗೆ ಸಕ್ರಿಯವಾಗಿ ಸಂಪರ್ಕದಲ್ಲಿರುವುದು ಮತ್ತು ಅಲ್ಲಿಗೆ ಭೇಟಿ ನೀಡುವುದು.

- ಅನುಷ್ಠಾನದ ಪ್ರಗತಿಯ ನಿರ್ವಹಣೆಗಾಗಿ ಮಾಹಿತಿ ತಂತ್ರಜ್ಞಾನ ಮೂಲಸೌಲಭ್ಯದ ಸ್ಥಾಪನೆ.

- ಕಾಲಕಾಲಕ್ಕೆ ವಿಹಿತವಾಗಬಹುದಾದ ಹಲವಾರು ವಿಶೇಷ ಚಟುವಟಿಕೆಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಹಲವು ಸಲಹೆಗಾರರ ನೇಮಕಾತಿ.

- ಹಿಂದಿನ ನೀತಿಯ ಅವಧಿಯಲ್ಲಿ ಹೂಡಿಕೆ ಮಾಡಿದ ಮತ್ತು ಹಿಂದಿನ ನೀತಿಯ ಅವಧಿಯಲ್ಲಿ ಪ್ರೋತ್ಸಾಹಧನವನ್ನು ಕೋರಿದ ಹೂಡಿಕೆದಾರರಿಗೆ ಹಿಂದಿನ ನೀತಿಯ ಮೇರೆಗೆ ಬೆಂಬಲವನ್ನು ಮುಂದುವರಿಸಬೇಕು. ಹಿಂದಿನ ನೀತಿ ಅವಧಿಯಲ್ಲಿ ಹೂಡಿಕೆ ಮಾಡಿದ ಮತ್ತು ಹಿಂದಿನ ನೀತಿಯ ಅವಧಿಯಲ್ಲಿ ಯಾವುದೇ ಪ್ರೋತ್ಸಾಹಧನವನ್ನು ಕೋರಿರದ ಹೂಡಿಕೆದಾರರಿಗೆ ಹೊಸ ನೀತಿಯ ಅಡಿಯಲ್ಲಿ (ಹೊಸ ನೀತಿಯು ಘೋಷಣೆಯಾದ ದಿನಾಂಕದಿಂದ) ಪ್ರೋತ್ಸಾಹಧನಕ್ಕೆ ಬೇಡಿಕೆ ಸಲ್ಲಿಸಲು 06 ತಿಂಗಳ ಕಾಲಮಿತಿಯನ್ನು ನೀಡಲಾಗುವುದು.

(ಎಫ್) ಈ ಪ್ರೋತ್ಸಾಹಧನ ಮತ್ತು ರಿಯಾಯಿತಿಗಳ ನಿರ್ವಹಣೆಗಾಗಿ ಪ್ರತ್ಯೇಕ ಕಾರ್ಯಾಚರಣೆ ಕೈಪಿಡಿಯಲ್ಲಿ ಮಾರ್ಗಸೂಚಿಗಳನ್ನು, ರಾಜ್ಯ ಮಟ್ಟದ ಯೋಜನಾ ಅನುಷ್ಠಾನ ಸಮಿತಿ (ಎಸ್‌ಎಲ್‌ಪಿಐಸಿ)ಯ ಅನುಮೋದನೆಯೊಂದಿಗೆ ಸಂಬಂಧಪಟ್ಟ ಏಜೆನ್ಸಿಗಳು/ ಅಧಿಕಾರಿಗಳ ಮಾರ್ಗದರ್ಶನಕ್ಕಾಗಿ ಹೊರಡಿಸಲಾಗುವುದು.

(ಜಿ) ಈ ನೀತಿಯಲ್ಲಿ (ಈ ಹಿಂದಿನ ನೀತಿಯನ್ನು ಒಳಗೊಂಡಂತೆ) ವಿವರಿಸಲಾದ ನೀತಿಯ ಕ್ರಮಗಳು, ಪ್ರೋತ್ಸಾಹಧನ ಮತ್ತು ರಿಯಾಯಿತಿಗಳನ್ನು ವ್ಯಾಖ್ಯಾನಿಸಲು ಎಸ್‌ಎಲ್‌ಪಿಐಸಿಯು ಅಧಿಕೃತವಾಗಿರತಕ್ಕದ್ದು ಹಾಗೂ ಅದರ ನಿರ್ಣಯವೇ ಅಂತಿಮವಾಗಿರತಕ್ಕದ್ದು.

(ಎಚ್) 2013–18ರ ನೂತನ ಜವಳಿ ನೀತಿಯು 01.11.2018 ರಿಂದ ಹೊಸ ನೀತಿ ಘೋಷಣೆಯಾಗುವವರೆಗಿನ ಅವಧಿಯಲ್ಲಿ ಮಾಡಿದ ಹೂಡಿಕೆಗಳಿಗೆ ಅನ್ವಯವಾಗುತ್ತದೆ. ನೂತನ ಜವಳಿ ಮತ್ತು ಸಿದ್ಧುಡುಪು ನೀತಿ 2019–24 ಸರ್ಕಾರದ ಆದೇಶ ಹೊರಡಿಸಲಾದ ದಿನಾಂಕದಿಂದ 5 ವರ್ಷಗಳ ಅವಧಿಗೆ ಅಥವಾ ಹೊಸ ನೀತಿ ಘೋಷಣೆಯಾಗುವವರೆಗೆ ಸಿಂಧುವಾಗಿರತಕ್ಕದ್ದು.

## ಅನುಬಂಧ 1: ನೂತನ ಜವಳಿ ನೀತಿ (2013–2018)ರ ಮೇರೆಗಿನ ಹೂಡಿಕೆಗಳ ಚಿತ್ರಣ

1. ಭಾರತದ ಮೊದಲ ರಾಜ್ಯ ಜವಳಿ ನೀತಿಯನ್ನು ಜಾರಿಗೆ ತಂದಿರುವುದು ಕರ್ನಾಟಕದ ಮಹತ್ವದ ಸಾಧನೆಗಳಲ್ಲೊಂದು. ಸರ್ಕಾರವು 2008ನೇ ಇಸವಿಯಲ್ಲಿ ಐದು ವರ್ಷಗಳ ಅವಧಿಗಾಗಿ "ಸುವರ್ಣ ವಸ್ತ್ರನೀತಿ 2008–2013" ಎಂಬ ಹೆಸರಿನ ಜವಳಿ ನೀತಿಯನ್ನು ಘೋಷಣೆ ಮಾಡಿತು. ಆನಂತರ 2013ರಲ್ಲಿ ಅದರ ಜವಳಿ ನೀತಿಯನ್ನು ಮುಂದಿನ ಐದು ವರ್ಷಗಳ ಅವಧಿಗೆ "ನೂತನ ಜವಳಿ ನೀತಿ 2013–18" ಎಂಬ ಹೆಸರಿನಲ್ಲಿ ಘೋಷಣೆ ಮಾಡಿತು.

2. "ಸುವರ್ಣ ವಸ್ತ್ರನೀತಿ 2008–2013" ನೀತಿಯು ವಲಯದ ಸಮಗ್ರ ಅಭಿವೃದ್ಧಿಯ ಕಡೆಗೆ ಒತ್ತು ನೀಡಿತ್ತು. ಜವಳಿ ಮೌಲ್ಯ ಸರಪಳಿ ಚಟುವಟಿಕೆಗಳನ್ನು ಬಲಪಡಿಸುವುದು, ಜವಳಿ ಮತ್ತು ಗಾರ್ಮೆಂಟ್ ಘಟಕಗಳನ್ನು ಭೌಗೋಳಿಕವಾಗಿ ವಿಸ್ತರಿಸುವುದು, ಮಾನವ ಸಂಪನ್ಮೂಲ ಅಭಿವೃದ್ಧಿ, ಮೂಲಭೂತ ಸೌಕರ್ಯದ ಅಭಿವೃದ್ಧಿ, ಮಾರುಕಟ್ಟೆ ಅಭಿವೃದ್ಧಿ, ವಿಷಯವಾಗಿ ಸಾಮರ್ಥ್ಯ ವೃದ್ಧಿ, ವಿನ್ಯಾಸ ಅಭಿವೃದ್ಧಿ ಮತ್ತು ಉತ್ಪನ್ನವನ್ನು ವೈವಿಧ್ಯೀಕರಿಸುವುದು, ಇಡೀ ಜವಳಿ ಮೌಲ್ಯ ಸರಪಳಿಯನ್ನು ತಾಂತ್ರಿಕವಾಗಿ ಉನ್ನತೀಕರಿಸುವುದು ಮತ್ತು ಗುಣಮಟ್ಟ ಹಾಗೂ ಅನುಸರಣೆ ವಿಷಯಗಳು ಮಧ್ಯಸ್ಥಿಕೆ ಕ್ರಮಗಳಿಗಾಗಿ ಗಮನಹರಿಸಬೇಕಾದ ಕ್ಷೇತ್ರಗಳಾಗಿವೆ. 2008–2013ರ ಜವಳಿ ನೀತಿಯ ಅವಧಿಯಲ್ಲಿ, ಕರ್ನಾಟಕವು ಈ ವಲಯದಲ್ಲಿ ರೂ.5710 ಕೋಟಿ ಮೌಲ್ಯದ ಹೂಡಿಕೆಯನ್ನು ಸೆಳೆದಿದ್ದು, ಇದು ನಿಗದಿಪಡಿಸಲಾಗಿದ್ದ ರೂ.10,000 ಕೋಟಿ ಹೂಡಿಕೆಯ ಗುರಿಯ ಶೇ.57.1 ರಷ್ಟಾಗಿದೆ. ರೂ.3326 ಕೋಟಿ ಮೌಲ್ಯದ (ಅಂದಾಜು) ಯೋಜನೆಗಳು ಅನುಷ್ಠಾನ ಅಥವಾ ಕಾರ್ಯಾಚರಣೆ ಹಂತದಲ್ಲಿವೆ. ಈ ಹೂಡಿಕೆಯನ್ನು ಸಿದ್ಧ ಉಡುಪುಗಳ ವಲಯದಲ್ಲಿ ಮಾತ್ರವಲ್ಲದೆ ನೂಲುವುದು, ಸಂಸ್ಕರಣೆ ಮತ್ತು ನೇಯ್ಗೆ ವಲಯಕ್ಕೂ ಸಹ ಮಾಡಲಾಗಿದೆ. ಪಾಲಿಸಿಯ ಅವಧಿಯಲ್ಲಿ ರಾಜ್ಯದಲ್ಲಿ 2,67,053 ಲಕ್ಷ ಉದ್ಯೋಗವನ್ನು ಸೃಷ್ಟಿಸಲಾಗಿದ್ದು, ಇದು ನಿಗದಿಪಡಿಸಿಕೊಂಡಿದ್ದ 5,00,000 ಉದ್ಯೋಗದ ಗುರಿಯ ಶೇ.53.41 ರಷ್ಟು ಮಾತ್ರವೇ ಆಗಿದೆ.

3. ಸುವರ್ಣ ವಸ್ತ್ರ ನೀತಿ (2008–2013) ಅವಧಿಯಲ್ಲಿ (ಕೈಮಗ್ಗ, ವಿದ್ಯುತ್ ಮಗ್ಗ, ಸ್ಪಿನ್ನಿಂಗ್, ಸಂಸ್ಕರಣೆ, ಗಾರ್ಮೆಂಟ್ಸ್ ಗಳು ಮತ್ತು ತಾಂತ್ರಿಕ ಜವಳಿಗಳಂತಹ) ವಲಯಗಳಲ್ಲಿ ಕೈಮಗ್ಗ, ವಿದ್ಯುತ್ ಮಗ್ಗ, ಸ್ಪಿನ್ನಿಂಗ್, ಸಂಸ್ಕರಣೆ, ಗಾರ್ಮೆಂಟ್ಸ್ ಮತ್ತು ತಾಂತ್ರಿಕ ಜವಳಿ ವಲಯಕ್ಕೆ ಕ್ರಮವಾಗಿ ರೂ.1 ಕೋಟಿ, ರೂ.72 ಕೋಟಿ, ರೂ.1764 ಕೋಟಿ, ರೂ.185 ಕೋಟಿ, ರೂ.2682 ಕೋಟಿ ಮತ್ತು ರೂ.1006 ಕೋಟಿಗಳ ಹೂಡಿಕೆಯು ಹರಿದುಬಂದಿದೆ. ಗಾರ್ಮೆಂಟ್ಸ್ ವಲಯವು ನೀತಿಯ ಅವಧಿಯಲ್ಲಿ ಅತ್ಯಂತ ಹೆಚ್ಚು ಎಂದರೆ, ರೂ.2682 ಕೋಟಿ ಮೌಲ್ಯದ ಹೂಡಿಕೆಯನ್ನು ಸೆಳೆದಿದ್ದು, ಒಟ್ಟು ಉದ್ಯೋಗದ (2,67,053) ಬಹುಪಾಲು ಶೇ.94 (2,51,326) ರಷ್ಟು ಉದ್ಯೋಗವನ್ನು ಸೃಜಿಸಿದೆ.

4. ಸುವರ್ಣ ವಸ್ತ್ರ ನೀತಿ (ಎಸ್‌ವಿಎನ್) 2008–13ರ ಅಡಿಯಲ್ಲಿ ತೆಗೆದುಕೊಳ್ಳಲಾದ ಉಪಕ್ರಮಗಳನ್ನೇ ನೂತನ ಜವಳಿ ನೀತಿ (ಎನ್‌ಜಿಎನ್) 2013–18ರ ಅಡಿಯಲ್ಲಿ ಮುಂದುವರಿಸಲು ಯೋಜಿಸಲಾಗಿತ್ತು. ನೂತನ ಜವಳಿ ನೀತಿಯು ಕರ್ನಾಟಕದ ಎಲ್ಲಾ ನೀತಿ ಅವಧಿಯಲ್ಲಿ ರೂ.10,000 ಕೋಟಿಗಳ ಹೂಡಿಕೆ ಮತ್ತು 5ಲಕ್ಷ ಉದ್ಯೋಗ ಸೃಷ್ಟಿಯ ಗುರಿಯೊಂದಿಗೆ ಪ್ರದೇಶಗಳಲ್ಲಿಯೂ ನೂಲಿನಿಂದ ಸಿದ್ಧ ಉತ್ಪನ್ನಗಳವರೆಗೆ ಸಮಗ್ರ ಜವಳಿ ಮೌಲ್ಯ ಸರಣಿಯಲ್ಲಿ ಉನ್ನತ ಮತ್ತು ಸುಸ್ಥಿರ ಬೆಳವಣಿಗೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

5. ಕರ್ನಾಟಕವನ್ನು ಉನ್ನತ ಗುಣಮಟ್ಟದ ಜವಳಿ ಉತ್ಪನ್ನಗಳ ಉತ್ಪಾದಕ ರಾಜ್ಯವಾಗಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕರ್ನಾಟಕವನ್ನು ಜಾಗತಿಕ ನಾಯಕನನ್ನಾಗಿಸುವಂತೆ ಕರ್ನಾಟಕದ ಜವಳಿ ಮತ್ತು ಗಾರ್ಮೆಂಟ್ ಕೈಗಾರಿಕೆಯನ್ನು ಸ್ಥಾಪಿಸುವುದು ನೂತನ ಜವಳಿ ನೀತಿಯ ದೂರದೃಷ್ಟಿಯಾಗಿದೆ. ಜವಳಿ ಮೌಲ್ಯ ಸರಪಳಿ ಚಟುವಟಿಕೆಗಳನ್ನು ಬಲಪಡಿಸುವುದು, ಕೌಶಲ್ಯಾಭಿವೃದ್ಧಿ ಮತ್ತು ಮೇಲ್ದರ್ಜೆಗೇರಿಸುವುದು, ಮೌಲ್ಯ ಸರಪಳಿಯ ಎಲ್ಲಾ ವಲಯಗಳಿಗೆ ಬಂಡವಾಳವನ್ನು ಸೆಳೆಯುವುದು ಹಾಗೂ ತಂತ್ರಜ್ಞಾನವನ್ನು ವರ್ಗಾಯಿಸುವುದು ಮತ್ತು ತಾಂತ್ರಿಕ ಜವಳಿಗಳಂತಹ ಹೊಸ ಕ್ಷೇತ್ರಗಳನ್ನು ಸಹ ಅಭಿವೃದ್ಧಿ ಪಡಿಸುವುದು ಈ ಕ್ಷೇತ್ರಗಳ ನೀತಿಯು ಗಮನಹರಿಸಿರುವ ಕ್ಷೇತ್ರಗಳಾಗಿವೆ.

6. 2013–2018ರ ಜವಳಿ ನೀತಿಯ ಅವಧಿಯಲ್ಲಿ ಕರ್ನಾಟಕವು ಈ ವಲಯಕ್ಕೆ ರೂ.9595.74 ಕೋಟಿ ಮೌಲ್ಯದ ಹೂಡಿಕೆಯನ್ನು ಸೆಳೆದಿದ್ದು, ಅದು ನಿಗದಿಪಡಿಸಿಕೊಂಡಿದ್ದ ರೂ.10,000 ಕೋಟಿ ಹೂಡಿಕೆಯ ಗುರಿಯ ಶೇ.95.9 ರಷ್ಟಾಗಿದೆ. ಈ ಹೂಡಿಕೆಗಳನ್ನು ಕೇವಲ ಸಿದ್ಧ ಉಡುಪು ಉದ್ಯಮಗಳಲ್ಲಿ ಮಾತ್ರವಲ್ಲದೆ ಸ್ಪಿನ್ನಿಂಗ್, ಸಂಸ್ಕರಣೆ ಮತ್ತು ನೇಯ್ಗೆ ವಲಯದಂತಹ ಇತರ ಜವಳಿ ಮೌಲ್ಯ ಸರಪಳಿಯಲ್ಲಿಯೂ ಸಹ ಮಾಡಲಾಗಿದೆ. ನೀತಿಯ ಅವಧಿಯಲ್ಲಿ ರಾಜ್ಯದಲ್ಲಿ 1,92,102 ಉದ್ಯೋಗವನ್ನು ಸೃಜಿಸಲಾಗಿದ್ದು, ಅದು ನಿಗದಿಡಪಸಿಕೊಂಡಿದ್ದ 5,00,000 ಉದ್ಯೋಗ ಗುರಿಯ ಶೇ.38.42 ರಷ್ಟು ಮಾತ್ರವೇ ಆಗಿದೆ.

7. ನೂತನ ಜವಳಿ ನೀತಿ (2013–2018)ಯ ಅವಧಿಯಲ್ಲಿ ಬೆಂಗಳೂರನ್ನು ಹೊರತುಪಡಿಸಿ, ಕರ್ನಾಟಕ ರಾಜ್ಯದಾದ್ಯಂತ ಅನೇಕ ಸಣ್ಣ, ಮಧ್ಯಮ ಮತ್ತು ಬೃಹತ್ ಉದ್ಯಮಗಳಿಗೂ ಆರ್ಥಿಕ ಬೆಂಬಲವನ್ನು ವಿಸ್ತರಿಸಲಾಗಿದೆ. ನೂತನ ಜವಳಿ ನೀತಿ (2013–18) ಯಡಿಯಲ್ಲಿನ ಎಂಎಸ್‌ಎಂಇ ಯೋಜನೆಗಳು ಒಟ್ಟು ರೂ.4,957.74 ಕೋಟಿ (ಒಟ್ಟು ಹೂಡಿಕೆಯ ಶೇ.51.66) ಹೂಡಿಕೆಯನ್ನು ದಾಖಲಿಸಿವೆ. ಅದರಲ್ಲಿ, ಯಾವುವೇ ಪ್ರೋತ್ಸಾಹಕಗಳೂ ಇಲ್ಲದಿರುವ, ಬೆಂಗಳೂರು ನಗರವು ಸುಮಾರು ರೂ.3,702.52 ಕೋಟಿ ಹೂಡಿಕೆಯನ್ನು ಆಕರ್ಷಿಸಿದೆ. ನೀತಿಯ ಅವಧಿಯಲ್ಲಿ ಬೃಹತ್/ ಮೆಗಾ ಯೋಜನೆಗಳು ಒಟ್ಟು ರೂ.4,638 ಕೋಟಿ (ಒಟ್ಟು ಹೂಡಿಕೆಯ ಶೇ.48.34) ಹೂಡಿಕೆಯನ್ನು ದಾಖಲಿಸಿವೆ.

8. ಹಲವು ವಲಯಗಳಲ್ಲಿ ವಲಯವಾರು ಹೂಡಿಕೆಗಳು ಈ ಮುಂದಿನಂತಿವೆ.

| ಕ್ರಮ ಸಂಖ್ಯೆ | ವಲಯ | ಹೂಡಿಕೆ (ರೂ. ಕೋಟಿಗಳಲ್ಲಿ) |
|---|---|---|
| 1 | ಕೈಮಗ್ಗಗಳು | 1.72 |
| 2 | ವಿದ್ಯುತ್ ಮಗ್ಗಗಳು | 146.18 |
| 3 | ಸ್ಪಿನ್ನಿಂಗ್ | 1,454.70 |
| 4 | ಸಂಸ್ಕರಣೆ | 14.36 |
| 5 | ಗಾರ್ಮೆಂಟ್ಸ್ | 1,038.09 |
| 6 | ತಾಂತ್ರಿಕ ಜವಳಿ | 903.17 |
| 7 | ಸಂಯೋಜಿತ ಘಟಕಗಳು | 2,035.00 |
| 8 | ಗ್ರೀನ್‌ಫೀಲ್ಡ್ ಜವಳಿ ಪಾರ್ಕ್ ಮತ್ತು ಅದರ ಘಟಕಗಳು | 300.00 |
| 9 | ಬೆಂಗಳೂರಿನಲ್ಲಿ ಸ್ಥಾಪಿತವಾದ ಘಟಕಗಳು | 3,702.52 |
| | **ಒಟ್ಟು** | **9,595.74** |

9. ನೀತಿಯ ಅವಧಿಯ ಅಡಿಯಲ್ಲಿ ಅನುಮೋದನೆ ಪಡೆದಂತಹ ಬೃಹತ್ ಯೋಜನೆಗಳಿಗೆ ವಿಶೇಷ ಬೆಂಬಲವನ್ನು ಸರ್ಕಾರ ಒದಗಿಸಿದೆ. ಹೂಡಿಕೆದಾರರು ಅದಕ್ಕೆ ಪ್ರತಿಯಾಗಿ ರಾಜ್ಯದ ಬಗ್ಗೆ ಭರವಸೆಯನ್ನಿಟ್ಟು ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ), ಬಳ್ಳಾರಿ, ಶಿವಮೊಗ್ಗ, ಮಂಡ್ಯ, ಬಿಜಾಪುರ ಮತ್ತು ಹಾಸನದಂತಹ ವಿವಿಧ ಜಿಲ್ಲೆಗಳಲ್ಲಿ ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ.

10. ಅದೂ ಅಲ್ಲದೆ, ಕರ್ನಾಟಕ ಸರ್ಕಾರವು ಭಾರತ ಸರ್ಕಾರದ ಜವಳಿ ಮಂತ್ರಾಲಯದ ಸಂಯೋಜಿತ ಜವಳಿ ಪಾರ್ಕ್ ಯೋಜನೆಯ (ಎಸ್‌ಐಟಿಪಿ) ಅಡಿಯಲ್ಲಿ ಅನುಮೋದನೆ ಪಡೆದ ಯೋಜನೆಗಳಿಗೂ ಸಹ ಬೆಂಬಲವನ್ನು ನೀಡಿದೆ. ಅವುಗಳಲ್ಲಿ, ಜುಲೈ 2010ರಲ್ಲಿ ಉದ್ಘಾಟನೆಗೊಂಡ ಬೆಂಗಳೂರಿನ, ದೊಡ್ಡಬಳ್ಳಾಪುರ ಸಂಯೋಜಿತ ಜವಳಿ ಪಾರ್ಕ್ ಮತ್ತು 2012ನೇ ಸಾಲಿನಲ್ಲಿ ಅನುಮೋದನೆಗೊಂಡ ಗುಲ್ಬರ್ಗಾ ಜವಳಿ ಪಾರ್ಕ್ ಖಾಸಗಿ ನಿಯಮಿತ ಯೋಜನೆಗಳಾಗಿವೆ.

11. ಕರ್ನಾಟಕವು ಅನೇಕ ಜವಳಿ ಪಾರ್ಕ್‌ಗಳು ಮತ್ತು ವಿಶೇಷ ಆರ್ಥಿಕ ವಲಯ ಘಟಕಗಳಿಗೆ ಆವಾಸ ಸ್ಥಾನವಾಗಿದೆ. ಪ್ರಥಮ ಸಂಯೋಜಿತ ಜವಳಿ ಪಾರ್ಕ್ ದೊಡ್ಡಬಳ್ಳಾಪುರದಲ್ಲಿ ಸ್ಥಾಪನೆಯಾಗಿದ್ದು, ಅದು ನೇಯ್ಗೆ, ಸೈಜಿಂಗ್ ಮತ್ತು ವಾರ್ಪಿಂಗ್ (ನೂಲು ಸುತ್ತುವಿಕೆ) ಉದ್ಯಮವನ್ನು ಕೇಂದ್ರೀಕರಿಸಿದ 85 ಘಟಕಗಳನ್ನು ಹೊಂದಿರುವ 48 ಎಕರೆ ವಿಸ್ತೀರ್ಣದ ಪಾರ್ಕ್ ಹೊಂದಿದೆ ಮತ್ತು ಅದರಿಂದ 7,000 ಜನರಿಗೆ ಉದ್ಯೋಗ ಸೃಜನೆಯಾಗುತ್ತದೆಂದು ನಿರೀಕ್ಷಿಸಲಾಗಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಗಣನೀಯ ಸ್ಪರ್ಧಾತ್ಮಕ ಪ್ರಯೋಜನಗಳನ್ನು ಒದಗಿಸುವ 474.40 ಎಕರೆ ವಿಸ್ತೀರ್ಣದ ಜವಳಿ ವಿಶೇಷ ಆರ್ಥಿಕ ವಲಯವನ್ನು ಹಾಸನದಲ್ಲಿ ಸ್ಥಾಪಿಸಿದ್ದು, ಅದು ಆಗ್ನೇಯ ಏಷ್ಯಾ, ಆಫ್ರಿಕಾ, ಮಧ್ಯ ಪೂರ್ವ ಏಷ್ಯಾ ಮತ್ತು ಸಾರ್ಕ್ ರಾಷ್ಟ್ರಗಳಿಗಾಗಿ ಅಂತರರಾಷ್ಟ್ರೀಯ ವ್ಯವಹಾರ ಹಬ್ ಆಗಿ ಕಾರ್ಯನಿರ್ವಹಿಸುವ ತಂತ್ರಕುಶಲತೆಯಿಂದ ಸ್ಥಾಪಿಸಲಾಗಿದೆ. ಹಾಗೆಯೇ, ಗುಲ್ಬರ್ಗಾದಲ್ಲಿನ ಜವಳಿ ಉದ್ಯಾನದ ಅಭಿವೃದ್ಧಿಯು ಪ್ರಗತಿಯಲ್ಲಿದೆ ಮತ್ತು ನೀತಿ ಅವಧಿಯಲ್ಲಿ ಹಿರಿಯೂರು, ಚಿತ್ರದುರ್ಗ ಮತ್ತು ಬೆಳಗಾವಿಯಲ್ಲಿ ಎರಡು ಗ್ರೀನ್‌ಫೀಲ್ಡ್ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ.

12. ಅಂತರರಾಷ್ಟ್ರೀಯ ಸ್ಪರ್ಧಾತ್ಮಕ ಜವಳಿ ಮತ್ತು ಗಾರ್ಮೆಂಟ್ ಉದ್ದಿಮೆಗೆ ಅತ್ಯಂತ ಅವಶ್ಯಕವಾಗಿರುವ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಕೌಶಲ್ಯ ಮೇಲ್ದರ್ಜೆಗಾಗಿ ಜವಳಿ ನೀತಿಯು ವಿಶೇಷ ಉಪಬಂಧವನ್ನು ಹೊಂದಿದೆ. ನೂತನ ಜವಳಿ ನೀತಿ (2013–2018)ಯ ಅವಧಿಯಲ್ಲಿ ಒಟ್ಟು 82,262 ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ.

13. ಜವಳಿ ನೀತಿಯ ಅಡಿಯಲ್ಲಿ ಕೈಗಾರಿಕೆಗಳಿಗೆ ಅವಶ್ಯಕವಾದ ಎಲ್ಲಾ ಬೆಂಬಲವನ್ನು ಒದಗಿಸುವುದಕ್ಕೆ ನಿಷ್ಠಾವಂತ ಸರ್ಕಾರಿ ಅಧಿಕಾರಿಗಳ ತಂಡವು ನಿರಂತರವಾಗಿ ಕೆಲಸ ಮಾಡುತ್ತಿದೆ.

14. ಹಲವಾರು ಮಧ್ಯಸ್ಥಿಕೆ ಕ್ರಮಗಳಿಗೆ ಪ್ರತಿಯಾಗಿ ನೂತನ ಜವಳಿ ನೀತಿ 2013–18ರ ನೀತಿಯ ಯೋಜಿತ ಆಯವ್ಯಯದ ವೆಚ್ಚವು ರೂ.1000 ಕೋಟಿ ಆಗಿತ್ತು. ಈವರೆಗೂ, ಸರ್ಕಾರವು ರೂ.1022.88 ಕೋಟಿಗಳನ್ನು ಮಂಜೂರು ಮಾಡಿದ್ದು, ಅದರಲ್ಲಿ ರೂ.416.66 ಕೋಟಿಗಳನ್ನು ಬಿಡುಗಡೆ ಮಾಡಿದೆ.

15. ಜಾಗತಿಕ ಜವಳಿ ಮತ್ತು ಉಡುಪು ಉದ್ಯಮವು ಉತ್ಪಾದನಾ ವೆಚ್ಚದ ಸ್ಪರ್ಧಾತ್ಮಕತೆ (ಅಧಿಕ ವೇತನ ವೆಚ್ಚ ವಿದ್ಯುತ್ ಮತ್ತು ಸಾರಿಗೆ ವೆಚ್ಚ) ಕಾರಣದಿಂದ ಇಥಿಯೋಪಿಯಾ, ವಿಯೆಟ್ನಾಂ, ಬಾಂಗ್ಲಾದೇಶದಂತಹ ರಾಷ್ಟ್ರಗಳಿಗೆ ರಚನಾತ್ಮಕವಾಗಿ ಸ್ಥಳಾಂತರಗೊಳ್ಳುತ್ತಿರುವುದು ಕಂಡುಬರುತ್ತದೆ. ಹಾಗೆಯೇ, ಲಾಭಕರವಾದ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡುತ್ತಿರುವ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಜಾರ್ಖಂಡ್ ಮುಂತಾದ ಇನ್ನಿತರ ಸಮಾನ ರಾಜ್ಯಗಳಲ್ಲಿ ನೀತಿಯ ವಾತಾವರಣವನ್ನು ಪರಿಶೀಲಿಸಿದರೆ, ನೂತನ ಜವಳಿ ನೀತಿ, 2013–2018 ಹೂಡಿಕೆಯನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಆದಾಗ್ಯೂ, ಉದ್ಯೋಗದ ಸೃಜನೆಯು ನೀತಿಯ ಅವಧಿಯಲ್ಲಿ ನಿರೀಕ್ಷಿತ ಗುರಿಯನ್ನು ತಲುಪಿಲ್ಲ. ಸಮಾನಸ್ಕಂದ ರಾಜ್ಯಗಳು ಹೆಚ್ಚಿನ ಪ್ರಯೋಜನಗಳನ್ನು ನಿರೀಕ್ಷಿಸಿ ಇತ್ತೀಚೆಗೆ ಲಾಭಕರವಾದ ಪ್ರೋತ್ಸಾಹಕಗಳ ಕೊಡುಗೆಯನ್ನು ಜಾರಿಗೆ ತಂದಿವೆ. ಆದ್ದರಿಂದ, ಈ ನೀತಿಯಲ್ಲಿ ನಮೂದಿಸಿರುವ ಪ್ರೋತ್ಸಾಹಕಗಳು ಅಥವಾ ರಿಯಾಯಿತಿಗಳು ಭವಿಷ್ಯದಲ್ಲಿ ರಾಜ್ಯದಲ್ಲಿಯೂ ಹೂಡಿಕೆಯನ್ನು ಆಕರ್ಷಿಸುವುದಕ್ಕೆ ಅತ್ಯಂತ ಅವಶ್ಯಕವಾಗಿವೆ.

## ಅನುಬಂಧ 2: ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24ಕ್ಕೆ ಸಂಬಂಧಿಸಿದಂತೆ ಆಯವ್ಯಯ

ನೀತಿಯ ಅನುಷ್ಠಾನಕ್ಕಾಗಿ ಮುಂದಿನ ಎಂಟರಿಂದ ಒಂಭತ್ತು ವರ್ಷಗಳ ಅವಧಿಯಲ್ಲಿ ಒಟ್ಟು ಆಯವ್ಯಯ ಅಗತ್ಯತೆಯು ಸುಮಾರು ರೂ.2.282.86 ಕೋಟಿಗಳೆಂದು ನಿರೀಕ್ಷಿಸಲಾಗಿದೆ. ಈ ನೀತಿಯ ಅವಧಿಯಲ್ಲಿ (2019–24), ಆಯವ್ಯಯ ಅಗತ್ಯತೆಯು ಸುಮಾರು ರೂ.1582.17 ಕೋಟಿಗಳಾಗಿರುತ್ತದೆ. ಈ ಕೆಳಗಿನ ಕೋಷ್ಟಕದಲ್ಲಿ ವರ್ಷವಾರು ಆಯವ್ಯಯದ ಅಗತ್ಯತೆಯನ್ನು (ಘಟಕವಾರು) ಸೂಚಿಸಲಾಗಿದೆ.

### ಕೋಷ್ಟಕ: ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24ರ ಒಟ್ಟು ಆಯವ್ಯಯ ಅಗತ್ಯತೆಗಳು

| ಪ್ರೋತ್ಸಾಹಕಗಳು | ಒಟ್ಟು ಆಯವ್ಯಯ (ರೂ. ಕೋಟಿಗಳಲ್ಲಿ) |
|---|---|
| ಬಂಡವಾಳ ಸಹಾಯಧನ | 412.67 |
| ಬಡ್ಡಿ ಸಹಾಯಧನ | 267.49 |
| ವಿದ್ಯುತ್ ಸಹಾಯಧನ | 456.46 |
| ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ರಿಯಾಯಿತಿ ಶುಲ್ಕಗಳು | 11.68 |
| ಕೌಶಲ್ಯಾಭಿವೃದ್ಧಿ ನೆರವು | 38.77 |
| ಇಎಸ್ಐ & ಇಪಿಎಫ್ ಸಹಾಯಧನ (ಕೇವಲ ಎಂಎಸ್ಎಂಇಗಳಿಗೆ) | 57.88 |
| **ಉಪ–ಒಟ್ಟು (ಎ)** | **1,244.94** |
| **ಸಿದ್ಧ ಉಡುಪು** | |
| ಬಂಡವಾಳ ಸಹಾಯಧನ | 142.71 |
| ಬಡ್ಡಿ ಸಹಾಯಧನ | 92.51 |
| ವಿದ್ಯುತ್ ಸಹಾಯಧನ | 98.56 |
| ವೇತನ ಸಹಾಯಧನ | 466.33 |
| ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ರಿಯಾಯಿತಿ ಶುಲ್ಕಗಳು | 4.04 |
| ಕೌಶಲ್ಯಾಭಿವೃದ್ಧಿ ನೆರವು | 112.10 |
| ಇಎಸ್ಐ & ಇಪಿಎಫ್ ಸಹಾಯಧನ (ಕೇವಲ ಎಂಎಸ್ಎಂಇಗಳಿಗೆ) | 20.01 |
| **ಉಪ–ಒಟ್ಟು (ಬಿ)** | 936.26 |
| **ಇತರೆ ಪ್ರೋತ್ಸಾಹಕಗಳು** | |
| ಜವಳಿ ಪಾರ್ಕ್‌ಗಳು ಮತ್ತು ಮೂಲಸೌಕರ್ಯ | 39.28 |
| ಗ್ರೀನ್ ಫೀಲ್ಡ್ ಗಾಗಿ ಸಾಮಾನ್ಯ ಮೂಲಭೂತ ಸೌಕರ್ಯ | 25.93 |
| ಬ್ರೌನ್‌ಫೀಲ್ಡ್ ಕ್ಲಸ್ಟರ್ ಅಭಿವೃದ್ಧಿ | 20.74 |
| ಸಿಇಟಿಪಿ | 15.71 |
| **ಉಪ–ಒಟ್ಟು (ಸಿ)** | **101.66** |
| **ಒಟ್ಟು (ಎ+ಬಿ+ಸಿ)** | **2,282.86** |

## ಕೋಷ್ಟಕ: ಮುಂದಿನ ಐದು ವರ್ಷಗಳ ಅವಧಿಗಾಗಿ ಘಟಕವಾರು ಆಯವ್ಯಯ ಅಗತ್ಯತೆಗಳು

**ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯ ಮೇರೆಗಿನ ಪ್ರೋತ್ಸಾಹಕಗಳಿಗೆ ಹಣಕಾಸು ವೆಚ್ಚ (ರೂ. ಕೋಟಿಗಳಲ್ಲಿ)**

| ಪ್ರೋತ್ಸಾಹಕಗಳು | ವರ್ಷ 1 | ವರ್ಷ 2 | ವರ್ಷ 3 | ವರ್ಷ 4 | ವರ್ಷ 5 | ಒಟ್ಟು |
|---|---|---|---|---|---|---|
| ಜವಳಿ | | | | | | |
| ಬಂಡವಾಳ ಸಹಾಯಧನ | 13.76 | 41.27 | 75.66 | 103.17 | 96.29 | 330.13 |
| ಬಡ್ಡಿ ಸಹಾಯಧನ | 8.92 | 26.75 | 49.04 | 66.87 | 62.42 | 214.00 |
| ವಿದ್ಯುತ್ ಸಹಾಯಧನ | 4.36 | 17.46 | 28.37 | 48.01 | 76.38 | 174.58 |
| ಕೌಶಲ್ಯಾಭಿವೃದ್ಧಿ ನೆರವು | 0.76 | 3.03 | 6.81 | 12.10 | 16.07 | 38.77 |
| ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ರಿಯಾಯಿತಿ ಶುಲ್ಕಗಳು | 1.17 | 2.34 | 2.92 | 3.50 | 1.75 | 11.68 |
| ಇಎಸ್ಐ & ಇಪಿಎಫ್ ಸಹಾಯಧನ (ಕೇವಲ ಎಂಎಸ್ಎಂಇಗಳಿಗೆ) | 5.79 | 11.58 | 14.47 | 17.36 | 8.68 | 57.88 |
| **ಉಪ-ಒಟ್ಟು (ಎ)** | **34.75** | **102.41** | **177.26** | **251.02** | **261.59** | **827.03** |

**ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಯ ಅಡಿಯಲ್ಲಿ ಪ್ರೋತ್ಸಾಹಧನಕ್ಕಾಗಿ ಹಣಕಾಸು ವೆಚ್ಚ (ರೂ. ಕೋಟಿಗಳಲ್ಲಿ)**

| ಪ್ರೋತ್ಸಾಹಧನ | ವರ್ಷ 1 | ವರ್ಷ 2 | ವರ್ಷ 3 | ವರ್ಷ 4 | ವರ್ಷ 5 | ಒಟ್ಟು |
|---|---|---|---|---|---|---|
| ಸಿದ್ಧ ಉಡುಪುಗಳು | | | | | | |
| ಬಂಡವಾಳ ಸಹಾಯಧನ | 4.76 | 14.27 | 26.16 | 35.68 | 33.30 | 114.17 |
| ಬಡ್ಡಿ ಸಹಾಯಧನ | 3.08 | 9.25 | 16.96 | 23.13 | 21.58 | 74.00 |
| ವಿದ್ಯುತ್ ಸಹಾಯಧನ | 0.20 | 0.80 | 19.56 | 38.72 | 30.89 | 90.16 |
| ವೇತನ ಸಹಾಯಧನ | 4.66 | 18.65 | 41.97 | 74.61 | 99.10 | 238.99 |
| ಕೌಶಲ್ಯಾಭಿವೃದ್ಧಿ ನೆರವು | 2.19 | 8.75 | 19.69 | 35.00 | 46.48 | 112.10 |
| ಮುದ್ರಾಂಕ ಶುಲ್ಕ ರಿಯಾಯಿತಿ ಮತ್ತು ನೊಂದಣಿ ರಿಯಾಯಿತಿ ಶುಲ್ಕಗಳು | 0.40 | 0.81 | 1.01 | 1.21 | 0.61 | 4.04 |
| ಇಎಸ್ಐ & ಇಪಿಎಫ್ ಸಹಾಯಧನ (ಕೇವಲ ಎಂಎಸ್ಎಂಇಗಳಿಗೆ) | 2.00 | 4.00 | 5.00 | 6.00 | 3.00 | 20.01 |
| **ಉಪ-ಒಟ್ಟು (ಬಿ)** | **17.30** | **56.53** | **130.35** | **214.35** | **234.95** | **653.48** |
| **ಮೂಲಭೂತ ಸೌಕರ್ಯ ಅಭಿವೃದ್ಧಿ** | | | | | | |
| ಜವಳಿ ಪಾರ್ಕ್‌ಗಳು ಮತ್ತು ಮೂಲಸೌಕರ್ಯ | 3.93 | 7.86 | 9.82 | 11.78 | 5.89 | 39.28 |
| ಗ್ರೀನ್ ಫೀಲ್ಡ್ ಗಾಗಿ ಸಾಮಾನ್ಯ ಮೂಲಭೂತ ಸೌಕರ್ಯ | 2.59 | 5.19 | 6.48 | 7.78 | 3.89 | 25.93 |
| ಬ್ರೌನ್‌ಫೀಲ್ಡ್ ಕ್ಲಸ್ಟರ್ ಅಭಿವೃದ್ಧಿ | 2.07 | 4.15 | 5.19 | 6.22 | 3.11 | 20.74 |
| ಸಿಇಟಿಪಿ | 1.57 | 3.14 | 3.93 | 4.71 | 2.36 | 15.71 |
| **ಉಪ-ಒಟ್ಟು (ಸಿ)** | 10.17 | 20.33 | 25.42 | 30.50 | 15.25 | 101.66 |
| **ಒಟ್ಟು ಮೊತ್ತ (ಎ+ಬಿ+ಸಿ)** | **62.21** | **179.28** | **333.03** | **495.86** | **511.80** | **1,582.17** |

* ನೀತಿಯನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದ್ದು ವ್ಯತ್ಯಾಸವಿದ್ದಲ್ಲಿ ಆಂಗ್ಲ ಆವೃತ್ತಿಯು ಅಂತಿಮವಾಗುತ್ತದೆ

ಸಹಿ/-
(ಎಂ. ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಅಧಿಕಾರಿಗಳ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳು

| ಕ್ರಸಂ. | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಎಂಎಸ್‌ಎಂಇ ಮತ್ತು ಗಣಿ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-01 | 91 80-22034235 | secymines-ci@karnataka.gov.in |
| 2 | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಂ. 86, ಶುಭೋದಯ ಕಾಂಪ್ಲೆಕ್ಸ್, ರೈಲ್ವೆ ಸಮಾನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020 | 91 80-23561628<br>91 80-23565690 | texcomgok@gmail.com<br>web: www.karnatakadht.org |
| 3 | ಅಪರ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು | 080-23563903 | addlndir@gmail.com |
| 4 | ಜವಳಿ ಆಯುಕ್ತರ ಪತ್ರಾಂಕಿತ ಸಹಾಯಕರು, ಕೇಂದ್ರ ಕಛೇರಿ, ಬೆಂಗಳೂರು | 080-23564828 | gatotcgok@gmail.com |
| 5 | ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು | 080-23568228 | pdsvntex@gmail.com |
| 6 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಜವಳಿ), ಕೇಂದ್ರ ಕಛೇರಿ, ಬೆಂಗಳೂರು | 080-23568226 | jrcstexgok@yahoo.co.in |
| 7 | ಉಪನಿರ್ದೇಶಕರು (ಬಂಡವಾಳ), ಕೇಂದ್ರ ಕಛೇರಿ, ಬೆಂಗಳೂರು | 080-23564827 | ddlnvnjn@gmail.com |
| 8 | ಉಪನಿರ್ದೇಶಕರು (ತರಬೇತಿ), ಕೇಂದ್ರ ಕಛೇರಿ, ಬೆಂಗಳೂರು | 080-23568227 | ddtrgnjn@gmail.com |
| 9 | ಉಪನಿರ್ದೇಶಕರು (ಕೈಮಗ್ಗ), ಕೇಂದ್ರ ಕಛೇರಿ, ಬೆಂಗಳೂರು | 080-23568223 | deputydirectorhandloomsgok@gmail.com |
| 10 | ಉಪನಿರ್ದೇಶಕರು (ಜವಳಿ), ಕೇಂದ್ರ ಕಛೇರಿ, ಬೆಂಗಳೂರು | 080-23568225 | ddpowerlooms@gmail.com |
| 11 | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ.,<br>ಪ್ರಿಯದರ್ಶಿನಿ ನೇಕಾರ ಭವನ, ಪ್ರಧಾನ ಕಛೇರಿ,<br>ವಿದ್ಯಾನಗರ, ಕೆ.ಹೆಚ್.ಪಾಟೀಲ್ ಕಾಲೇಜು<br>ಎದುರುಗಡೆ, ಹುಬ್ಬಳ್ಳಿ-580031 | 0836-2277505 | mdkhdc@gmail.com |
| 12 | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ<br>ಅಭಿವೃದ್ಧಿ ನಿಗಮ ನಿಯಮಿತ,<br>ವಿ.ಟಿ.ಪಿ.ಸಿ. ಕಟ್ಟಡ, ಮೊದಲನೇ ಮಹಡಿ<br>ಶಾಶ್ವತ ವಸ್ತು ಪ್ರದರ್ಶನ ಕೇಂದ್ರ<br>ಕಣಬರ್ಗಿ ಕೈಗಾರಿಕಾ ಪ್ರದೇಶ, ಆಟೋನಗರ<br>ಬೆಳಗಾವಿ – 590 015 | 08312950220 | kstidcl.bgl@gmail.com |

| ಕ್ರ.ಸಂ. | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|
| 13 | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ,<br>(ಕಾವೇರಿ ಹ್ಯಾಂಡ್‌ಲೂಮ್ಸ್),<br>ನಂ. 49, "ನೇಕಾರ ಭವನ",<br>ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ,<br>ಬೆಂಗಳೂರು-560 004 | 080-26602633<br>080-26602633 | cauveryhandlooms@gmail.com |
| 14 | ಪ್ರಾಂಶುಪಾಲರು,<br>ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ,<br>ವಿರೇಶ್ವರ ಮಠದ ಹತ್ತಿರ, ನರಸಾಪುರ, ಬೆಟಗೇರಿ,<br>ಗದಗ-508102 | 08372-297221 | principalkhtigadag@gmail.com |
| 15 | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಉದ್ಯೋಗ ಮಿತ್ರ,<br>3ನೇ ಮಹಡಿ, ಖನಿಜ ಭವನ (ಪೂರ್ವ ಪಾರ್ಶ್ವ)<br>ನಂ.49, ರೇಸ್ ಕೋರ್ಸ್ ರಸ್ತೆ<br>ಬೆಂಗಳೂರು-1 | 91-80-22282392<br>91-80-22285659 | md@kumbangalore.com<br>http://kum.karnataka.gov.in/ |
| 16 | ಉಪ ನಿರ್ದೇಶಕರು,<br>ನೇಕಾರರ ಸೇವಾ ಕೇಂದ್ರ<br>ಸಂ. 2 & 4, 2ನೇ ಮುಖ್ಯರಸ್ತೆ<br>ಓಕಳಿಪುರ, (ಆರ್.ಆರ್.ಆರ್. ಕಲ್ಯಾಣ ಮಂಟಪ ಪಕ್ಕ)<br>ಬೆಂಗಳೂರು-560021 | 080-23121662 | wscbangalore@yahoo.in |
| 17 | ಪ್ರಾಚಾರ್ಯರು<br>ಕರ್ನಾಟಕ ಕೈಮಗ್ಗ ನೇಕಾರರ ಮುಂದುವರೆದ ತರಬೇತಿ ಸಂಸ್ಥೆ, ಜಮಖಂಡಿ<br>ಆರ್.ಟಿ.ಓ. ಆಫೀಸ್ ಹಿಂಭಾಗ<br>ಗಲಗಲಿ ಆರ್.ಸಿ. ಮುಧೋಳ ರೋಡ್<br>ಜಮಖಂಡಿ, ಬಾಗಲಕೋಟೆ ಜಿಲ್ಲೆ. | 9481621615 | khwatijkd@gmail.com |

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಅಧಿಕಾರಿಗಳ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳು

| ಕ್ರ.ಸಂ. | ಜಿಲ್ಲೆ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|---|
| 1 | ಬೆಂಗಳೂರು | ಜಂಟಿ ನಿರ್ದೇಶಕರ ಕಛೇರಿ,<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ದಕ್ಷಿಣ ವಲಯ / ವಿಭಾಗ<br>ನಂ. 39/2, 4ನೇ ಮಹಡಿ<br>ASVNV ಭವನ, ಕೆಂಪೇಗೌಡ ರಸ್ತೆ<br>ಬೆಂಗಳೂರು-560 009. | 080-22382666 | jdsouthdvn@gmail.com |
| 2 | ತುಮಕೂರು | ಜಂಟಿ ನಿರ್ದೇಶಕರ ಕಛೇರಿ<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಪೂರ್ವ ವಲಯ / ವಿಭಾಗ<br>ವಿಘ್ನೇಶ್ವರ ನಿಲಯ<br>9ನೇ ಅಡ್ಡರಸ್ತೆ, ಅಶೋಕನಗರ<br>ತುಮಕೂರು-572103 | 0816-2270653 | jdhteastzone@gmail.com |
| 3 | ಬೆಳಗಾವಿ | ಜಂಟಿ ನಿರ್ದೇಶಕರ ಕಛೇರಿ<br>ಪಶ್ಚಿಮ ವಲಯ / ವಿಭಾಗ<br>ಕೊಠಡಿ ಸಂಖ್ಯೆ. 04, ಸುವರ್ಣ ಸೌಧ<br>ಬೆಳಗಾವಿ-590020 | 0831-2407225 | jdhtdwestbgm@gmail.com |
| 4 | ಬಳ್ಳಾರಿ | ಜಂಟಿ ನಿರ್ದೇಶಕರ ಕಛೇರಿ<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಉತ್ತರ ವಲಯ / ವಿಭಾಗ<br>ನಂ, 202, ವಾರ್ಡ್ ಸಂಖ್ಯೆ 34,<br>1ನೇ ಅಡ್ಡರಸ್ತೆ, ಕ್ಲಬ್ ರಸ್ತೆ, ದೇವಿನಗರ,<br>ಎಸ್ ಪಿ ವೃತ್ತ, ಬಳ್ಳಾರಿ-583104 | 08392-267844 | jdhtbly@gmail.com |
| **ಜಿಲ್ಲಾ ಕಛೇರಿಗಳ ವಿಳಾಸ** | | | | |
| ದಕ್ಷಿಣ ವಲಯ / ವಿಭಾಗ | | | | |
| 1 | ಬೆಂಗಳೂರು ನಗರ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್<br>ಬೆಂಗಳೂರು ನಗರ, ಎಸ್.ಜೆ.ಪಿ<br>ಆವರಣ ಐ.ಟಿ ಬ್ಲಾಕ್, ಕೆ.ಆರ್.ಸರ್ಕಲ್<br>ಬೆಂಗಳೂರು-560 001 | 080 22341176 | ddbloreurban@gmail.com |
| 2 | ಬೆಂಗಳೂರು (ಗ್ರಾ) | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿ.ಪಂ., ಬೆಂಗಳೂರು (ಗ್ರಾ)<br>ಕೆ.ಎಸ್.ಟಿ.ಐ.ಡಿ.ಸಿ ಕಟ್ಟಡ,<br>1ನೇ ಮಹಡಿ, ಕೆ.ಐ.ಎ.ಡಿ.ಬಿ.<br>ಅಪೆರೆಲ್ ಪಾರ್ಕ್, ದೊಡ್ಡಬಳ್ಳಾಪುರ,<br>ಬೆಂಗಳೂರು (ಗ್ರಾ) - 561203 | 080-22860495<br>22866444 | ddtexbr@yahoo.com |

| ಕ್ರ.ಸಂ. | ಜಿಲ್ಲೆ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|---|
| 3 | ಕೋಲಾರ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ನಂ. ಎಸ್-9 ಎಸ್-9ಎ,<br>2ನೇ ಮಹಡಿ, ಜಿಲ್ಲಾಡಳಿತ ಭವನ,<br>ಎನ್ ಹೆಚ್-75, ಮುಳಬಾಗಿಲು ರಸ್ತೆ,<br>ಕುಂಬಾರಹಳ್ಳಿಗ್ರಾಮ, ಕೋಲಾರ-563101 | 08152-243519 | ddkolar@gmail.com |
| 4 | ಚಿಕ್ಕಬಳ್ಳಾಪುರ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಕೊಠಡಿ ಸಂಖ್ಯೆ ಎಸ್.ಎ - 14<br>2ನೇ ಮಹಡಿ, ಜಿಲ್ಲಾಡಳಿತ ಭವನ<br>ಚಿಕ್ಕಬಳ್ಳಾಪುರ-562101 | 08156-277061<br>08156-277031 | htd.cbp@gmail.com |
| 5 | ರಾಮನಗರ | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್ ಭವನ<br>1ನೇ ಮಹಡಿ, ಬಿ.ಎಂ. ರಸ್ತೆ<br>ರಾಮನಗರ-562159. | 080-27272288 | adhlstexrmg@gmail.com |
| 6 | ಮಂಡ್ಯ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್<br>ಹಳೇ ಎಸ್.ಪಿ. ಕಛೇರಿ ಕಟ್ಟಡ<br>ಮಂಡ್ಯ-571401. | 08232-222366 | adhlstexmdy@yahoo.co.in |
| 7 | ಮೈಸೂರು | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಸಿ.ಟಿ.ಐ. ಕಟ್ಟಡ, ಸಯ್ಯಾಜಿರಾವ್ ರಸ್ತೆ<br>ಜಿಲ್ಲಾ ಪಂಚಾಯತ್<br>ಮೈಸೂರು-570001. | 0821-2441353,<br>2422322<br>ಫ್ಯಾಕ್ಸ್:<br>0821-2441353 | ddmysore@gmail.com<br>ddhandloomsmysore@yahoo.com |
| 8 | ಚಾಮರಾಜನಗರ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಕೊಠಡಿ ಸಂಖ್ಯೆ 222, 2ನೇ ಮಹಡಿ<br>ಜಿಲ್ಲಾ ಆಡಳಿತ ಭವನ<br>ಚಾಮರಾಜನಗರ-571313. | 08226-222883 | adtextilescnagar@gmail.com |
| 9 | ಕೊಡಗು | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ<br>ಕೊಹಿನೂರು ರಸ್ತೆ, ಮಡಿಕೇರಿ-571201 | 08272-220365 | adhlstexkodagu@gmail.com |

| ಪೂರ್ವ ವಲಯ / ವಿಭಾಗ | | | | |
|---|---|---|---|---|
| ಕ್ರ.ಸಂ. | ಜಿಲ್ಲೆ | ವಿಳಾಸ | ದೂರವಾಣಿ ಸಂಖ್ಯೆ | ಇ–ಮೇಲ್ |
| 10 | ತುಮಕೂರು | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ನಾಗ ನಿಲಯ,5ನೇ ಮುಖ್ಯರಸ್ತೆ<br>ಸಿದ್ದಗಂಗ ಬಡಾವಣೆ<br>ತುಮಕೂರು–572102 | 0816–2275370 | jdhttumkur@gmail.com |
| 11 | ಚಿತ್ರದುರ್ಗ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಭಾಗ್ಯ ಕಾಂಪ್ಲೆಕ್ಸ್, ಬಿ.ಡಿ. ರಸ್ತೆ<br>ಜಿಲ್ಲಾ ಪಂಚಾಯತ್<br>ಚಿತ್ರದುರ್ಗ–577502 | 08194–221426 | ddhtchitradurga@rediffmail.com |
| 12 | ದಾವಣಗೆರೆ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್<br>ರಾಮಾಂಜನೇಯ ಪ್ಲಾಜಾ,<br>ಕಾಲೇಜ್ ರಸ್ತೆ, ನಿಟುವಳ್ಳಿ,<br>ದಾವಣಗೆರೆ–577004. | 08192–262362 | texdeptdvg@gmail.com |
| 13 | ಶಿವಮೊಗ್ಗ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್,<br>ಮಂಜುನಾಥ್ ಟವರ್ಸ್, 2ನೇ ಮಹಡಿ,<br>ಗಾಂಧಿನಗರ ಮುಖ್ಯರಸ್ತೆ,<br>ಶಿವಮೊಗ್ಗ –577201. | 08182–223405 | ms.handloomtextile@rediffmail.com |
| 14 | ಹಾಸನ | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ<br>ಡೈರಿ ಸರ್ಕಲ್, ಹಾಸನ–573201 | 08172–240627 | addhthassan@gmail.com |
| 15 | ಚಿಕ್ಕಮಗಳೂರು | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತುಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್,<br>ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ<br>ಕೆ.ಎಂ.ರಸ್ತೆ, ಚಿಕ್ಕಮಗಳೂರು–577102 | 08262–220021 | hlandtexckm@gmail.com |
| 16 | ದಕ್ಷಿಣ ಕನ್ನಡ (ಮಂಗಳೂರು) | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಕೆ.ಎಸ್.ಎಸ್.ಐ.ಡಿ.ಸಿ. ಕಟ್ಟಡ<br>ಇಂಡಿಸ್ಟ್ರಿಯಲ್ ಏರಿಯಾ, ಯೆಯ್ಯಾಡಿ<br>ಮಂಗಳೂರು–575008 | 0824–2225056 | adtextmnr@rediffmail.com |
| 17 | ಉಡುಪಿ | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್ ಉಡುಪಿ<br>ಎ. ಬ್ಲಾಕ್, 1ನೇ ಮಹಡಿ, ರಜತಾದ್ರಿ,<br>ಮಣಿಪಾಲ್, ಉಡುಪಿ–576104 | 0820–2574963 | adhtudupi@gmail.com |

| ಪಶ್ಚಿಮ ವಲಯ / ವಿಭಾಗ | | | | |
|---|---|---|---|---|
| ಕ್ರ.ಸಂ. | ಜಿಲ್ಲೆ | ವಿಳಾಸ | ದೂರವಾಣಿ ಸಂಖ್ಯೆ | ಇ–ಮೇಲ್ |
| 18 | ಬೆಳಗಾವಿ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್,<br>"ಸಾಮರ್ಥ್ಯಸೌಧ" ಕಟ್ಟಡ,<br>ಹರಿಮಂದಿರ ರಸ್ತೆ,<br>ಮರಾಠಿ ಶಾಲೆ ಪಕ್ಕ, ಅನಗೋಳ,<br>ಬೆಳಗಾವಿ–590006 | 0831–2950674 | dhtbelgaum@gmail.com |
| 19 | ಬಾಗಲಕೋಟೆ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಕೊಠಡಿ ಸಂಖ್ಯೆ 140/141<br>ಜಿಲ್ಲಾಡಳಿತ ಭವನ<br>ಜಿಲ್ಲಾ ಪಂಚಾಯತ್<br>ನವನಗರ, ಬಾಗಲಕೋಟೆ–587103. | 08354–235463 | ddhtbgk@gmail.com |
| 20 | ವಿಜಯಪುರ | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್<br>ಡಿ.ಐ.ಸಿ ಕಾಂಪೌಂಡ್, ಶಿಕಾರಖಾನೆ<br>ಸ್ಟೇಷನ್ ಬ್ಯಾಕ್ ರೋಡ್<br>ವಿಜಯಪುರ–586104 | 08352–251268 | ddhtbjp@gmail.com |
| 21 | ಧಾರವಾಡ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ ಕಟ್ಟಡ<br>ಡಿ.ಸಿ.ಕಛೇರಿ ಆವರಣ<br>ಧಾರವಾಡ –580001 | (0836)–2448834 | ddtexdwd@yahoo.in |
| 22 | ಗದಗ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್<br>ಕೆ.ಎಚ್.ಟಿ.ಐ. ಕಟ್ಟಡ<br>ವೀರೇಶ್ವರ ಮಠದ ಹತ್ತಿರ<br>ನರಸಾಪೂರ, ಬೆಟಗೇರಿ<br>ಗದಗ–582102 | 08372–21864 | ddgadag@gmail.com |
| 23 | ಹಾವೇರಿ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್,<br>ಕೊಠಡಿ ಸಂಖ್ಯೆ 43, 1ನೇ ಮಹಡಿ<br>ಸಿ–ಬ್ಲಾಕ್, ಜಿಲ್ಲಾಡಳಿತ ಭವನ<br>ಡಿ.ಸಿ ಕಛೇರಿ, ದೇವಗಿರಿ ತಾ.<br>ಹಾವೇರಿ–581110 | 08375–249050 | adht_haveri@rediffmail.com |
| 24 | ಉತ್ತರ ಕನ್ನಡ<br>(ಕಾರವಾರ) | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಎಂ.ಜಿ. ರೋಡ್<br>ಕಾರವಾರ – 581301 | 08382–220930 | htadkarwar@gmail.com |

| ಉತ್ತರ ವಲಯ / ವಿಭಾಗ | | | | |
|---|---|---|---|---|
| ಕ್ರ.ಸಂ. | ಜಿಲ್ಲೆ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
| 25 | ಬಳ್ಳಾರಿ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್<br>ನಂ. 43, ಶ್ರೀ ವೆಂಕಟಾದ್ರಿ ನಿಲಯ<br>ಪೋಸ್ಟಲ್ ಸೂಪರೆಂಡೆಂಟ್ ಕಛೇರಿ<br>ಹತ್ತಿರ, ಕೋಟೆ ಮುಖ್ಯರಸ್ತೆ<br>ಬಳ್ಳಾರಿ-583102 | 08392-266075 | ddhtbellari@gmail.com |
| 26 | ಬೀದರ್ | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್,<br>ರೇಷ್ಮೆ ಕಛೇರಿ ಕಟ್ಟಡ, 2ನೇ ಮಹಡಿ,<br>ಕೋಳಾರ (ಕೆ), ಬೀದರ್-585402. | 08482-233129 | asstdirectorhtbidar@yahoo.com |
| 27 | ಕಲ್ಬುರ್ಗಿ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>2ನೇ ಮಹಡಿ, ಕೊಠಡಿ ಸಂಖ್ಯೆ 15<br>ಮಿನಿ ವಿಧಾನಸೌಧ,<br>ಕಲ್ಬುರ್ಗಿ - 585 102 | 08472-278629 | ddht.gulbarga@gmail.com |
| 28 | ಯಾದಗಿರಿ | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಕೊಠಡಿ ಸಂಖ್ಯೆ ಸಿ. 6, ಸಿ. ಬ್ಲಾಕ್,<br>2ನೇ ಮಹಡಿ, ಜಿಲ್ಲಾ ಕಛೇರಿ ಕಾಂಪ್ಲೆಕ್ಸ್<br>ಚಿತ್ತಾಪುರ ರೋಡ್,<br>ಯಾದಗಿರಿ-585202. | 08473-253387 | adhtydg@yahoo.in |
| 29 | ರಾಯಚೂರು | ಸಹಾಯಕ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಜಿಲ್ಲಾ ಪಂಚಾಯತ್,<br>ಅರಬ್ ಮೊಹಲ್ಲಾ, ಉರ್ದುಶಾಲೆ ಹತ್ತಿರ<br>ರಾಯಚೂರು-584101 | 08532233429 | bvradrch@gmail.com |
| 30 | ಕೊಪ್ಪಳ | ಉಪ ನಿರ್ದೇಶಕರು<br>ಕೈಮಗ್ಗ ಮತ್ತು ಜವಳಿ ಇಲಾಖೆ<br>ಡಿ.ಐ.ಸಿ. ಕಟ್ಟಡ, ನಗರಸಭೆ ಎದುರು<br>ಅಶೋಕ ಸರ್ಕಲ್<br>ಕೊಪ್ಪಳ-583231 | 08539-230069 | adhnt.kpl@gmail.com |



# ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24




**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ**
(ಗಣಿ, ಎಂ.ಎಸ್.ಎಂ.ಇ ಮತ್ತು ಜವಳಿ)
ರೂಂ ನಂ. 135, 1ನೇ ಮಹಡಿ,
ವಿಕಾಸಸೌಧ ಬೆಂಗಳೂರು– 560 001
ದೂ: +91 80–22034235 ಮೊ:09448067345
ಇ–ಮೇಲ್: secymines-ci@karnataka.gov.in

**ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ**
**ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ**
ನಂ. 86, ಶುಭೋದಯ ಕಾಂಪ್ಲೆಕ್ಸ್, ರೈಲ್ವೆ ಸಮಾನಾಂತರ ರಸ್ತೆ
ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020
ದೂ: +91 80–23561628 ಫ್ಯಾಕ್ಸ್: +91 80–23566082
ಮೊ: 09448271435
ಇ–ಮೇಲ್: texcomgok@gmail.com
ವೆಬ್: www.karnatakadht.org